ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭ | ಬೆಂಗಳೂರು, ಗುರುವಾರ, ಜೂನ್ ೨೮, ೨೦೧೨ (ಆಷಾಢ ೭, ಶಕ ವರ್ಷ ೧೯೩೪) | ಸಂಚಿಕೆ ೨೬

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 28–06–2012

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
388	14-06-2012	ಸಂಖ್ಯೆ: ಸಿಐ 265 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 11.6.2012
389	15-06-2012	No. HFW 81 FPR 2012, Bangalore, Dated: 15-06-2012
390	15-06-2012	ಸರ್ಕಾರಿ ಆದೇಶ ಸಂಖ್ಯೆ: ಡಿಸಿಎ 3 ಎಆರ್‌ಬಿ 2012, ಬೆಂಗಳೂರು, ದಿನಾಂಕ: 15/06/2012
391	15-06-2012	No. CD 120 MRE 2011, Bangalore, Dated : 15th June, 2012
392	15-06-2012	ಸಂಖ್ಯೆ: ಸಿಐ 256 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 11.6.2012
393	16-06-2012	ELECTION COMMISSION OF INDIA, Dated the 16th June, 2012
394	16-06-2012	PUBLIC NOTICE OF ELECTION TO THE OFFICE OF PRESIDENT OF IN… JUNE, 2012
398	18-06-2012	NO. DPAR 04 CHUVIPA 2012, BANGALORE, DATED: 18th June, 2012
399	18-06-2012	ಸಂಖ್ಯೆ. ನಅಇ 548 ಮೈಅಪ್ರಾ 2010, ಬೆಂಗಳೂರು, ದಿನಾಂಕ: 15.06.2012
400	18-06-2012	No. S/03/1, Bangalore, Dated: 15.06.2012
401	18-06-2012	ಸಂಖ್ಯೆ: ಲೋಇ : 70 : ಇಎಪಿ : 2012 , ಬೆಂಗಳೂರು, ದಿನಾಂಕ : 18–06–2012
403	19-06-2012	No. SARIE 01 SAEPA 2011, Bangalore, Dated: 16-06-201…

WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜೂನ್ ೨೮, ೨೦೧೨ (ಆಷಾಢ ೭, ಶಕ ವರ್ಷ ೧೯೩೪)	ಸಂಚಿಕೆ ೨೬

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಚಿತ್ತವಾಡಗಿ ಮಧ್ಯಮ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ ಸನೀಇ 108 ಮಸಾವಿ 2010 ದಿನಾಂಕ 28–09–2011.
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–6/2012–13/2434, ದಿನಾಂಕ : 25–04–2012
3. ಸರ್ಕಾರದ ಆದೇಶ ಸಂಖ್ಯೆ: ಸನೀಇ 117 ಮಸಾವಿ 2011 ದಿನಾಂಕ : 27–01–2012.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಚಿತ್ತವಾಡಗಿ ಮಧ್ಯಮ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯು 13ನೇ ಹಣಕಾಸು ಆಯೋಗದ ಅನುದಾನದಡಿ ಕೆರೆಗಳ ಹಾಗೂ ಪಾರಂಪರಿಕ ಜಲಕಾಯಗಳ ಮನರುಜ್ಜೀವನ ಯೋಜನೆಯಡಿ ಉಲ್ಲೇಖ (1)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಉಲ್ಲೇಖ 3ರಲ್ಲಿನ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಮೂಲ ಪ್ರಕಟಣೆ	
ರಾಜ್ಯ ಟೆಂಡರ್ ಬುಲೆಟಿನ್	09–01–2012
ಕನ್ನಡ ಪ್ರಭ ದಿನಪತ್ರಿಕೆ	07–01–2012
ಅಂತಿಮ ತಿದ್ದುಪಡಿ ಪ್ರಕಟಣೆ	
ರಾಜ್ಯ ಟೆಂಡರ್ ಬುಲೆಟಿನ್	03–03–2012

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುವುದಾಗಿ ವರದಿಯಾಗಿರುತ್ತದೆ. ಇವರ ಆರ್ಥಿಕ ಬಿಡ್ ಅನ್ನು ದಿನಾಂಕ: 09–04–2012ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 3,96,29,373/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 3,92,02,530/–

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೇಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
	ಶ್ರೀ ಉದಯ ಶಿವಕುಮಾರ ರಾಜಣ್ಣ 1ನೇ ದರ್ಜೆ ಗುತ್ತಿಗೆದಾರರು	4,95,09,775/-	24.93 ಹೆಚ್ಚು	26.29 ಹೆಚ್ಚು

ಮೇಲ್ಕಂಡಂತೆ ಶ್ರೀ ಉದಯ ಶಿವಕುಮಾರ ರಾಜಣ್ಣ 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು, ಇವರ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 2[illegible]9 ರಷ್ಟು ಹೆಚ್ಚಾಗಿದ್ದು. ಸದರಿಯವರ ಟೆಂಡರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾ[illegible]ರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ 3,92,02,530/- ಗಳ ಮೇಲೆ ಶೇ. 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 4,37,10,821/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 22 ಕೆಜಿದು (ತಾಂತ್ರಿಕ) 2012, ಬೆಂಗಳೂರು, ದಿನಾಂಕ: 09-05-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಚಿತ್ತವಾಡಗಿ ಮಧ್ಯಮ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ 3,92,02,530/-ಗಳ ಮೇಲೆ ಶೇ. 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 4,37,10,821/- ಗಳಿಗೆ (ನಾಲ್ಕು ಕೋಟಿ ಮೂವತ್ತೇಳು ಲಕ್ಷ ಹತ್ತು ಸಾವಿರದ ಎಂಟುನೂರು ಇಪ್ಪತ್ತೊಂದು ಮಾತ್ರ) ಶ್ರೀ ಉದಯ ಶಿವಕುಮಾರ್ ರಾಜಣ್ಣ, 1ನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ),

ಪಿ.ಆರ್. 1510

ಕಂದಾಯ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಕಂಇ 01 ಮುಸರ 2011 ಬೆಂಗಳೂರು, ದಿನಾಂಕ: 18-05-2012

ಸರ್ಕಾರಿ ಆದೇಶ ಕಂಇ 139 ಮುಸರ 2008 ದಿನಾಂಕ: 28-01-2010ರಲ್ಲಿ "ಉಡುಪಿ ಜಿಲ್ಲೆ, ಕುಂದಾಪುರ ವಿಧಾನಸಭಾ ಕ್ಷೇತ್ರ" ಎಂಬುದರ ಬದಲಾಗಿ "ಉಡುಪಿ ಜಿಲ್ಲೆ ಬೈಂದೂರು ವಿಧಾನಸಭಾ ಕ್ಷೇತ್ರ ಎಂಬುದನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ. (ಮುಜರಾಯಿ)

ಪಿಆರ್ ನಂ. 1519

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ.ವಿ. ಕಲ್ಲೂರ್ ಮಠ ತಹಶೀಲ್ದಾರ್, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರಿಗೆ ಸ್ಥಗಿತ ವೇತನ ಬಡ್ತಿಯನ್ನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ[illegible]

2. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಇವರ ಪತ್ರ ಸಂಖ್ಯೆ: ಕಂಶಾ/ಸಿಬ್ಬಂದಿ(1)/ವಿವ–278/2011–12, ದಿನಾಂಕ: 01–03–2012.

3. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ. 03 ಎಫ್‌ಆರ್‌ಪಿ 96, ದಿನಾಂಕ: 18–03–1996.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ.(1)ರ ದಿನಾಂಕ: 20–06–2011ರ ಆದೇಶದಲ್ಲಿ ಶ್ರೀ ಎಂ.ವಿ. ಕಲ್ಲೂರ್ ಮಠ, ತಹಶೀಲ್ದಾರ್ ರವರಿಗೆ ದಿನಾಂಕ: 01–12–2010 ರಿಂದ ಅನ್ವಯವಾಗುವಂತೆ ಮೊದಲ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2), ದಿನಾಂಕ: 01–03–2012 ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ ಇವರು ಶ್ರೀ ಎಂ.ವಿ. ಕಲ್ಲೂರ್ ಮಠ ತಹಶೀಲ್ದಾರ್, ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು ತಿಳಿಸಿ, ಶ್ರೀಯುತರ ಸೇವಾ ಪುಸ್ತಕವನ್ನು ಲಗತ್ತಿಸಿ, ಇವರ ವೇತನ ಶ್ರೇಣಿ ರೂ. 11,400–21,600 ಇದ್ದು ಗರಿಷ್ಠ ಹಂತ ತಲುಪಿರುವುದರಿಂದ ದಿನಾಂಕ: 01–12–2011 ರಿಂದ ಅನ್ವಯವಾಗುವಂತೆ ಎರಡನೇ ಸ್ಥಗಿತ ಬಡ್ತಿಗಳನ್ನು ಮಂಜೂರಿ ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (3)ರ ದಿನಾಂಕ: 18–03–1996 ರ ಆದೇಶದನ್ವಯ ಸದರಿ ಪ್ರಕರಣ ಪರಿಶೀಲಿಸಿ, ಶ್ರೀ ಎಂ.ವಿ. ಕಲ್ಲೂರ್ ಮಠ ತಹಶೀಲ್ದಾರ್, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಇವರ ಸೇವೆ ತೃಪ್ತಿಕರವಾಗಿರುವುದರಿಂದ ದಿನಾಂಕ: 01–12–2011 ರಿಂದ ಅನ್ವಯವಾಗುವಂತೆ ಎರಡನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 130 ಎಎಸ್‌ಡಿ 2012 ಬೆಂಗಳೂರು, ದಿನಾಂಕ: 22–05–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ವಿ. ಕಲ್ಲೂರ್ ಮಠ ತಹಶೀಲ್ದಾರ್, ಯಲ್ಲಾಪುರ ತಾಲ್ಲೂಕು, ಉ‌‌‌ ಕನ್ನಡ ಜಿಲ್ಲೆ, ಇವರಿಗೆ ದಿನಾಂಕ: 01–12–2011 ರಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 11,400–21,600 ರಲ್ಲಿ ಎರಡನೇ ಸ್ಥಗಿತ ವೇತನ ‌ಯನ್ನು ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆ ‌ರಿನಲ್ಲಿ

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿಆರ್ ನಂ. 1520 ಕಂದಾಯ ಇಲಾಖೆ. (ಸೇವೆಗಳು–3)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಮೌಲ್ಯಮಾಪನ ನಿಯಮ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿನ ಸಂಶೋಧನಾ ಸಹಾಯಕರ ಹುದ್ದೆಗಳನ್ನು ಮೌಲ್ಯಮಾಪನಾಧಿಕಾರಿ ಹುದ್ದೆಗಳಿಗೆ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಪಿ.ಡಿ. 8 ಇವಿಎನ್(2) 2011, ದಿನಾಂಕ: 11–07–2011.

2. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 07–12–2011 ರಂದು ನಡೆದ ಸಾಮಾನ್ಯ ಮಂಡಳಿ ಸಭೆಯ ನಡವಳಿ.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಪಿಡಿ 8 ಇವಿಎನ್(2) 2011, ಬೆಂಗಳೂರು ದಿನಾಂಕ: 11–07–2011ರ ಮೇರೆಗೆ "ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ" ಎಂಬ ಹೊಸ ಯೋಜನೆಯನ್ನು 2011–12ನೇ ಸಾಲಿನಿಂದ ಜಾರಿಗೆ ಬರುವಂತೆ ಮಂಜೂರ ಮಾಡಿದೆ. ನಂತರ ರಾಜ್ಯ ಮಟ್ಟದಲ್ಲಿ ಮೆಮೋರ್‍ಯಾಂಡಮ್ ಆಫ್ ಅಸೋಸಿಯೇಷನ್‌ನೊಂದಿಗೆ 'ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ' (ಕೆಇಎ)ವನ್ನು ಸ್ಥಾಪಿಸಲು ಸಲುವಾಗಿ ಹಾಗೂ ಅದನ್ನು ಕರ್ನಾಟಕ ಸೋಸೈಟೀಸ್ ರಿಜಿಸ್ಟ್ರೇಶನ್ ಆ್ಯಕ್ಟ್ 1960ರ ಅಡಿಯಲ್ಲಿ ನೋಂದಾಯಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ: ಪಿಡಿ 20 ಇವಿಎನ್ 2011, ಬೆಂಗಳೂರು ದಿನಾಂಕ: 05.11.2011ರಲ್ಲಿ ಕರ್ನಾಟಕ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಮಂಜೂರಾತಿ ನೀಡಿದೆ. ಅದರನ್ವಯ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ (ಕೆಇಎ) ವನ್ನು ಕರ್ನಾಟಕ ಸೋಸೈಟೀಸ್ ರಿಜಿಸ್ಟ್ರೇಶನ್ ಆ್ಯಕ್ಟ್ 1960ರ ಅಡಿಯಲ್ಲಿ ದಿನಾಂಕ: 19–09–2011 ರಂದು ನೋಂದಾವಣೆ ಸಂಖ್ಯೆ: ಡಿಆರ್‌ಬಿ–ಸಿ/ಎಸ್‌ಒಆರ್/140/2011–12ಯೊಂದಿಗೆ ನೋಂದಾಯಿಸಲಾಗಿದೆ.

ಮೇಲೆ ಓದಲಾದ (2)ರ ನಡವಳಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪ್ರೋಗ್ರಾಮ್‌ವಿಂಗ್‌ನಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಪಿಡಿ 8 ಇವಿಎನ್(2) 2011, ಬೆಂಗಳೂರು ದಿನಾಂಕ: 11–07–2011ರ ಸೃಜಿಸಲಾದ 11 ಹುದ್ದೆಗಳಲ್ಲಿ ಸಂಶೋಧನಾ ಸಹಾಯಕರು (ರೂ. 11400–21600) ಎಂಬ 4 ಹುದ್ದೆಗಳಿದ್ದು ಅವುಗಳಲ್ಲಿ 2 ಸಂಶೋಧನಾ ಹುದ್ದೆಗಳನ್ನು ಮೌಲ್ಯಮಾಪನಾಧಿಕಾರಿ (ರೂ. 15600–29000): ವೇತನ ಶ್ರೇಣಿರಹಿತ) ಎಂಬ ಹುದ್ದೆಗೆ ಮೇಲ್ದರ್ಜೆಗೇರಿಸಿ ಅವುಗಳನ್ನು ಪ್ರೊಕ್ಯೂರ್‌ಮೆಂಟ್ ಆಫೀಸರ್ ಹಾಗೂ ಪ್ರಾಜೆಕ್ಟ್ ಫಾರ್ಮುಲೇಶನ್ ಮತ್ತು ಮಾನಿಟರಿಂಗ್ ಸ್ಪೆಷಲಿಸ್ಟ್ ಎಂಬುದಾಗಿ ಮರುನಾಮೀರಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿರುವುದರಿಂದ ಇದರ ಬಗ್ಗೆ ಕೂಡಲೇ ಸರ್ಕಾರಿ ಆದೇಶವನ್ನು ಹೊರಡಿಸಬೇಕೆಂದು ಮುಖ್ಯ ಮೌಲ್ಯಮಾಪನ ಅಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಿಯವರು ಪ್ರಧಾನ ಕಾರ್ಯದರ್ಶಿಯವರನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಪಿಡಿ 14 ಇವಿಎನ್ 2012 ಬೆಂಗಳೂರು, ದಿನಾಂಕ: 25–05–2012

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿರುವ 04 ಸಂಶೋಧನಾ ಸಹಾಯಕರು (ರೂ. 11400-21600) ಹುದ್ದೆಗಳ ಪೈಕಿ 2 ಹುದ್ದೆಗಳನ್ನು ಮೌಲ್ಯಮಾಪನಾಧಿಕಾರಿ (ರೂ. 15600-39000: ವೇತನ ಶ್ರೇಣಿರಹಿತ) ಎಂಬ ಹುದ್ದೆಗಳಿಗೆ ಮೇಲ್ದರ್ಜೆಗೇರಿಸಿ ಇವುಗಳಲ್ಲಿ ಒಂದು ಹುದ್ದೆಯನ್ನು ಪ್ರೊಕ್ಯೂರ್‌ಮೆಂಟ್ ಆಫೀಸರ್ ಎಂದು ಇನ್ನೊಂದನ್ನು ಪ್ರಾಜೆಕ್ಟ್ ಫಾರ್ಮುಲೇಶನ್ ಮತ್ತು ಮಾನಿಟರಿಂಗ್ ಸ್ಪೆಷಲಿಸ್ಟ್ ಎಂದು ಮರುಪದನಾಮೀಕರಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2012-13ನೇ ಸಾಲಿನಲ್ಲಿ ಸದರಿ ಪ್ರಾಧಿಕಾರಕ್ಕೆ ಒದಗಿಸಿರುವ ಅನುದಾನದಿಂದ ಈ ಹುದ್ದೆಗಳ Incremental Salary cost ಭರಿಸುವ ಷರತ್ತಿಗೊಳಪಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 164 ವೆಚ್ಚ-6/2012 ದಿನಾಂಕ: 22-05-2012ರ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಉಮಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2

ಪಿಆರ್ ನಂ. 1521 ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಯೋಇ 69 ಯೋವಿವಿ 2011 ಬೆಂಗಳೂರು, ದಿನಾಂಕ: 22-05-2012

ಸರ್ಕಾರದ ಆದೇಶ ಸಂಖ್ಯೆ: ಯೋಇ 69 ಯೋವಿವಿ 2011 ದಿನಾಂಕ: 07-03-2012 ರ ಅನುಬಂಧ - 2ರ ಕ್ರಮ ಸಂಖ್ಯೆ: 6 ರಲ್ಲಿ ರಾಯಚೂರು ಜಿಲ್ಲೆ (ಕ್ರಮ ಸಂಖ್ಯೆ: 2ರಲ್ಲಿ) "ಎನ್. ಶಂಕ್ರಪ್ಪ" ಎಂದು ಮುದ್ರಿತವಾಗಿರುವುದನ್ನು ಡಿ.ವಿ. ಸದಾನಂದಗೌಡ ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2

ಪಿಆರ್ ನಂ. 1522 ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

LABOUR SECRETARIAT

Sub: Implementation of "Indo German Technical Cooperation" [GTZ]" Indo German International Cooperation' [GIZ] on Social Security Benefits for the un-organized Workers in Karnataka and extension of implementation agreement period from Dec-2011 to Nov-2013.

Read:
1. Letter Dated: 05-08-2008, from project Coordinator GIZ/Social Security programme, programme Office, Bangalore.
2. G.O. No. LD 114 LMW 2007, Bangalore, Dated: 11-03-2009.
3. Letter No. M-21021/45/2008-RW of Ministry of Labour & Employment, New Delhi, Dated; 15-12-2011.

PREAMBLE:

In the 10th Five year plan, the Central Govt., gave considerable importance to Social Security Schemes, particularly for the Un-organized sector workers. The Karnataka Government too recognized that there is a need to find effective ways to extend social security to Un-organized workers who are not covered under social protection.

Hence, the Karnataka Government proposed project on Social security benefits for Un-organized workers to receive technical support from German International Cooperation [GIZ] under the title "German international Co-operation Project" [GIZ] on design and implementation of Social security benefits for Un-organized sector workers in Karnataka, India.

The main objectives of the project are to achieve, enhanced mix of appropriate and innovative social security products, improved mobilization of costs from workers benefiting from social security, effective channels of delivering of social security benefits are tested and implemented, greater convergence of existing formal social security schemes, improved capacity of delivery mechanisms and improved Private Public partnership in the delivery of social security benefits.

The projects is being executed through the Department of Labour, Government of Karnataka and German International Cooperation [GIZ]. The GIZ in India on behalf of Federal Ministry for Economic Co-operation and Development, Germany

aiding agency to which the project is posed. The total project cost was estimated at 6 million Euros in foreign currency. The extent of external aid to this projects is 100%. There is no State or Central share. The duration of the project was about 5 years.

The proposal was approved by State Level Co-ordination Committee on 30-01-2008. Hence approval of the Cabinet was soliciated to implement the above project and to authorise the Secretary, Labour Department to sign the M.O.U.

Accordingly Implementation agreement was entered into between Government and Karnataka [GOK] and German International Co-operation [GIZ] on 17-12-2008. Since 2009, the Department of Labour, Government of Karnataka is implementing this project on Social Security Benefits in Karnataka State with financial and technical collaboration with the German International Co-operation.

The initial implementation agreement was signed by DOL/GOK and the GIZ during Dec-2008 and the implementation period was for a period of 3 years from Dec-2008 to Nov-2011. Since considerable time was taken for completion of initial administrative procedures in implementing the project and to achieve the agreed upon objective of the project, it was felt necessary to extend the project from Dec-2011 till 2013. Accordingly the Secretary to Govt., Department of Labour, GOK sent a no cost extension proposal from December 2011 to November 2013 to the Department of Economic Affiars, GOI on 15-11-2011 for its approval.

Ministry of Labour & Employment, New Delhi, vide their letter dated: 15-12-2011 read at [3] above & the Department of Economic Affiars, has conveyed its approval for no cost extension of the project from December 2011 to November 2013. Hence this order.

Government Order No. LD 21 LMW 2012 Bangalore, Dated: 20-04-2012

In view of the above, approval of Government is accorded to extend the period of implementation "Indo German International Co-operation" [GIZ] project on Social Security Benefits for the Un-organized Workers in Karnataka from Dec-2011 to Nov-2013 without any additional financial burden to State Government and also to execute the revised implementation agreement accordingly.

By order and and in the name of the Governor of Karnataka

N.R. PRABHU

PR No. 1523

Under Secretary to Government

Labour Department

ಕಂದಾಯ ಸಚಿವಾಲಯ

ವಿಷಯ: ಮೆ. ಸರ್ಜಾನ್ ರಿಯಾಲಿಟಿಸ್ ಲಿಮಿಟೆಡ್ ಬೆಂಗಳೂರು ಇವರು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಭೂ ಮಂಜೂರಾತಿ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ:78 ಎಲ್‌ಜಿಪಿ:2009, ದಿ:4-1-2011
2) ಸರ್ಕಾರದ ಆದೇಶ ಸಂಖ್ಯೆ:ಇಎನ್:246:ಎನ್‌ಸಿಇ:2010 ದಿ:15-5-2011.
3) ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/48/11-12, ದಿ: 18-8-2011
4) ಜಿಲ್ಲಾಧಿಕಾರಿ, ದಾವಣಗೆರೆ ಇವರ ಪತ್ರ ಸಂಖ್ಯೆ:ಎಲ್‌ಎನ್‌ಡಿ:ಸಿಆರ್: 314:2010-11, ದಿನಾಂಕ:10-4-2012.

ಪ್ರಸ್ತಾವನೆ:

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕಿನಲ್ಲಿ 34.8 ಮೆ.ವ್ಯಾಟ್ ರಿಂದ 77.4 ಮೆ.ವ್ಯಾಟ್ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು ಮೆ:ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿತ್ತು.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಮೇಲೆ (1)ರಲ್ಲಿ ಓದಲಾದ ದಿ: 18-8-2011ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸುತ್ತಾ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ಇವರು ಗಾಳಿಯಂತ್ರದಿಂದ 77.4 ಮೆ.ವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದಿಸುವ ಯೋಜನೆ ಅನುಷ್ಠಾನಗೊಳಿಸಲು ಮೆ: ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್ ಇವರಿಗೆ ಉಪಗುತ್ತಿಗೆ ರೂಪದಲ್ಲಿ ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಹರಪನಹಳ್ಳಿ, ಮಾಚಿಹಳ್ಳಿ, ಅಡವಿಹಳ್ಳಿ, ಗುಂಡಗತ್ತಿ, ಕಂಭಟ್ಟಹಳ್ಳಿ, ಸೇವಾನಗರ ಮತ್ತು ಕ್ಯಾರೆಕಟ್ಟೆ ಗ್ರಾಮಗಳ ಸಿ ಮತ್ತು ಡಿ ವರ್ಗದ ಮತ್ತು ಸತ್ತೂರು ಮತ್ತು ಉಚ್ಚಂಗಿದುರ್ಗ ಗ್ರಾಮಗಳಲ್ಲಿನ ಒಟ್ಟು 99.557 ಹೆಕ್ಟೇರ್ ಜಮೀನನ್ನು ಕೆ.ಆರ್.ಇ.ಡಿ.ಎಲ್ ಸಂಸ್ಥೆಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಕೋರಿರುತ್ತಾರೆ.

ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಉಚ್ಚಂಗಿದುರ್ಗ ಗ್ರಾಮದ ಸ.ನಂ.399ಇಪಿ1ರ ಜಮೀನು ಪುರಾತತ್ವ ಇಲಾಖೆಯ ಅಧೀನಕ್ಕೆ ಒಳಪಟ್ಟಿರುತ್ತದೆ. ಸತ್ತೂರು ಗ್ರಾಮದ ಸ.ನಂ.212 ಮತ್ತು ಸೇವಾನಗರ (ಯಡಿಹಳ್ಳಿ) ಗ್ರಾಮದ ಸ.ನಂ.253, ಮಾಚಿಹಳ್ಳಿ ಸ.ನಂ.353, ಹೊಸ ನಂ.382, ಕ್ಯಾರಗಟ್ಟೆ ಸ.ನಂ

321/ಎ ಮತ್ತು ಗುಂಡುಗತ್ತಿ ಗ್ರಾಮದ ಸ.ನಂ.324ರ ಜಮೀನು ಅರಣ್ಯ ಇಲಾಖೆಗೆ ಸೇರಿದ ಜಮೀನುಗಳಾಗಿರುವುದರಿಂದ ಸದರಿ ಜಮೀನುಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಉಳಿದಂತೆ ಹರಪನಹಳ್ಳಿ ಗ್ರಾಮದ ಸ.ನಂ492/ಎಪಿ1ರಲ್ಲಿ 22.77, ಸ.ಂ.492ಬಿಪಿ1ರಲ್ಲಿ 2315.93ಎಕರೆ ಮತ್ತು ಕಂಭಟ್ರಹಳ್ಳಿ ಗ್ರಾಮದ ಸ.ನಂ.1 ರಲ್ಲಿ 267.69 ಎಕರೆ ಜಮೀನು U.A.W (ತ.ಕ.ಪಂರಂಭೋಕು) ಆಗಿದ್ದು, ಅಡವಿಹಳ್ಳಿ ಗ್ರಾಮದ ಸ.ನಂ.379/ಎಪಿ3ರಲ್ಲಿ 808.25 ಎಕರೆ ಕಂದಾಯ ಇಲಾಖೆ ಎಂದು ಖಾತೆ ಇದ್ದು ಇವುಗಳ ಪೈಕಿ ಹರಪನಹಳ್ಳಿ ಗ್ರಾಮದ ಸ.ನಂ 492/ಎಪಿ1 ಮತ್ತು 492/ಬಿಪಿ1ರಲ್ಲಿ 78.04 ಎಕರೆ, ಕಂಭಟ್ರಹಳ್ಳಿ ಗ್ರಾಮದ ಸ.ನಂ.1ರಲ್ಲಿ 17.34 ಎಕರೆ, ಅಡವಿಹಳ್ಳಿ ಗ್ರಾಮದ ಸ.ನಂ. 379/ಎಪಿ3 ರಲ್ಲಿ 19.70 ಎಕರೆ ಒಟ್ಟು 115.08 ಎಕರೆ ಪ್ರದೇಶವು ಗಾಳಿ ಆಧಾರಿತ ವಿದ್ಯುತ್ ಘಟಕ ಸ್ಥಾಪಿಸಲು ಲಭ್ಯವಿದ್ದು, ಪ್ರಸ್ತಾಪಿತ ಜಮೀನುಗಳು ಎತ್ತರದ ಪ್ರದೇಶಗಳಲ್ಲಿದ್ದು, ಗ್ರಾಮದ ಜಾನುವಾರುಗಳಿಗೆ ಬೇರೆ ಜಮೀನುಗಳು ಲಭ್ಯವಿದ್ದು, ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಉದ್ದೇಶಕ್ಕಾಗಿ ಮೆ: ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಬಹುದೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 68 ಎಲ್‌ಜಿಸಿ 2011 ಬೆಂಗಳೂರು, ದಿನಾಂಕ: 26-5-2012.

ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಹರಪನಹಳ್ಳಿ ಗ್ರಾಮದ ಸ.ನಂ.492/ಎಪಿ1 ಮತ್ತು 492/ ಬಿಪಿ1ರಲ್ಲಿ 78.04ಎಕರೆ, ಕಂಭಟ್ರಹಳ್ಳಿ ಗ್ರಾಮದ ಸ.ನಂ.1ರಲ್ಲಿ 17.34 ಎಕರೆ, ಮತ್ತು ಅಡವಿಹಳ್ಳಿ ಗ್ರಾಮದ ಸ.ನಂ.379/ಎಪಿ3ರಲ್ಲಿ 19.70 ಎಕರೆ ಹೀಗೆ ಒಟ್ಟು 115.08 ಎಕರೆ ಜಮೀನನ್ನು U.A.W (ತ.ಕ. ಪಂರಂಭೋಕು) ಜಮೀನುಗಳ ಲಕ್ಷಣಗಳನ್ನು ಹಾಗೆಯೇ ಉಳಿಸಿಕೊಂಡು, ಸದರಿ ಸರ್ಕಾರಿ ಜಮೀನುಗಳಿಗೆ ಯಾವುದೇ ಹಾನಿಯಾಗದಂತೆ ಮತ್ತು ಒತ್ತುವರಿಯಾಗದಂತೆ ಸಂರಕ್ಷಿಸಿಕೊಂಡು ಮೆ:ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್, ಬೆಂಗಳೂರು ಇವರು ಗಾಳಿಯಂತ್ರಗಳಿಂದ 77.4 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳ (1969) ನಿಯಮ 19(3)(ಬಿ)ರ ಮೇರೆಗೆ ಜಮೀನಿನ ಪ್ರಚಲಿತ ಮಾರುಕಟ್ಟೆ ದರದ ಶೇಕಡ 10ರಷ್ಟು ಗುತ್ತಿಗೆ ಹಾಗೂ ಪ್ರತಿ ಎರಡು ವರ್ಷಗಳಿಗೆ ಶೇಕಡ 10 ರಷ್ಟು ದರ ಹೆಚ್ಚಿಸುವ ಷರತ್ತಿಗೆ ಒಳಪಟ್ಟು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಆಇ/1003/ವೆಚ್ಚ-7/2011 ದಿನಾಂಕ: 10-11-2011ರಲ್ಲಿ ನೀಡಿರುವ ಸಹಮತಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಜೆ. ಲಕ್ಷ್ಮೀನಾರಾಯಣ

ಪಿ.ಆರ್. 1587

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಆರ್ಥಿಕ ಸಚಿವಾಲಯ

ವಿಷಯ: ಶ್ರೀ ವಿ. ವೆಂಕಟರಮಣ, ಪತ್ರಾಂಕಿತ, ಉಪಖಜಾನಾಧಿಕಾರಿ, ಖಜಾನೆ ಇಲಾಖೆ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ: ಸರ್ಕಾರಿ ವಕೀಲರ ಪತ್ರ ಸಂ: ಕಂಪ್ಲೇಂಟ್/ಉಪಲೋಕ್/ಎಂವೈಎಸ್-259/2012/ಪಿಪಿ ದಿನಾಂಕ:04.05.2012. ಮತ್ತು ಉಪ ಲೋಕಾಯುಕ್ತರ-2 (ಪ್ರಭಾರ) ಕರ್ನಾಟಕ ರಾಜ್ಯ ಇವರ ವರದಿ ದಿ:30.04.2012.

ಪ್ರಸ್ತಾವನೆ:

ಸರ್ಕಾರಿ ವಕೀಲರು ಇವರು ಮೇಲೆ ಓದಲಾದ ದಿ:04.05.2012ರ ಪತ್ರದೊಂದಿಗೆ ಕಳುಹಿಸಿರುವ ಉಪ ಲೋಕಾಯುಕ್ತರು-2ರವರ ದಿನಾಂಕ: 30.04.2012ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ನಿಯಮ 12(3)ರ ಅಡಿಯಲ್ಲಿ ನೀಡಿರುವ ವರದಿಯಲ್ಲಿ ಶ್ರೀ ವಿ. ವೆಂಕಟರಮಣ, ಪತ್ರಾಂಕಿತ, ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ, ಅವರು ಉಪ ಖಜಾನೆ, ಪುತ್ತೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿವಂಗತ ಶ್ರೀ ಗುರುರಾಜಪ್ಪ, ಶಿಕ್ಷಕರು ಇವರ ನಿವೃತ್ತಿ ಸೌಲಭ್ಯಗಳ ಚೆಕ್ಕುಗಳನ್ನು ಅವರ ವಾರಸುದಾರರಿಗೆ ನೀಡಲು ಅವರ ಮಗ ಶ್ರೀ ಸಿ.ಜೆ. ಕೇಶವ ಮೂರ್ತಿರವರಿಂದ ರೂ.2500/-ಗಳ ಲಂಚ ಕೇಳಿ ಅದನ್ನು ಪಡೆಯುತ್ತಿದ್ದಾಗಲೇ ದಿ:13.12.2010ರಂದು ಕರ್ನಾಟಕ ಲೋಕಾಯುಕ್ತರ ಪೋಲೀಸ್ ಬಲೆಗೆ ಸಿಕ್ಕಿಬಿದ್ದಿದ್ದು ಈ ಬಗ್ಗೆ ನಡೆದ ಮುಂದಿನ ತನಿಖೆಯಿಂದಾಗಿ ಸಂಗ್ರಹವಾಗಿರುವ ಸಂಗತಿಗಳು, ಮಾಹಿತಿ, ದಾಖಲೆ ಆಧಾರಗಳಿಂದ ಸದರಿ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸ್ಥಿರಪಟ್ಟಿದ್ದು ಸದರಿ ದುರ್ನಡತೆ ಸಂಬಂಧದಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ14-ಎ ರನ್ವಯ ಪ್ರಕರಣವನ್ನು ಉಪ ಲೋಕಾಯುಕ್ತಕ್ಕೆ ವಹಿಸುವಂತೆ ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಪ್ರಕರಣವನ್ನು ಪೂರ್ಣ ಪ್ರಮಾಣದ ವಿಚಾರಣೆಗಾಗಿ ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 07 ಅಖಇ 2011, ಬೆಂಗಳೂರು, ದಿನಾಂಕ:02-06-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ14-ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ವಿ. ವೆಂಕಟರಮಣ, ಪತ್ರಾಂಕಿತ, ಉಪ

ಖಜಾನಾಧಿಕಾರಿ, ಖಜಾನೆ ಇಲಾಖೆ ಇವರ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ನಡೆಯಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಲ್. ರಮೇಶ

ಪಿ.ಆರ್. 1588

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಆರ್ಥಿಕ ಸಚಿವಾಲಯ

ವಿಷಯ: ನಿವೃತ್ತಿ ವೇತನದಾರರಿಗೆ ಮತ್ತು ಕುಟುಂಬ ನಿವೃತ್ತಿ ವೇತನದಾರರಿಗೆ ತುಟ್ಟಿಭತ್ಯೆ ದರಗಳ ಪರಿಷ್ಕರಣೆ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 07 ಸಿಪಿಪಿ 2011 ದಿನಾಂಕ:17ನೇ ಅಕ್ಟೋಬರ್ 2011

2) ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 17 ಎಸ್‌ಆರ್‌ಪಿ 2012 ದಿನಾಂಕ: 14ನೇ ಮೇ 2012.

ಆದೇಶ ಸಂಖ್ಯೆ: ಆಇ (ವಿಶೇಷ)100 ಪಿಇಎನ್ 2012 ಬೆಂಗಳೂರು, ದಿನಾಂಕ:17ನೇ ಮೇ 2012.

ಸರ್ಕಾರವು ದಿನಾಂಕ: 1ನೇ ಜನವರಿ 2012ರಿಂದ ಜಾರಿಗೆ ಬರುವಂತೆ ಮತ್ತು 31ನೇ ಮಾರ್ಚ್ 2012ರವರೆಗೆ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೆ 2007ರ ಪರಿಷ್ಕೃತ ಪಿಂಚಣಿಯಲ್ಲಿ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ನೇತನದ ಶೇ. 69.5ರಿಂದ 76.75ಕ್ಕೆ ಹೆಚ್ಚಿಸಿ ಮಂಜೂರು ಮಾಡಿದೆ. ದಿನಾಂಕ 1ನೇ ಜನವರಿ 2012ಕ್ಕೆ ಲಭ್ಯವಾಗುವ ಶೇ.76.75ರಷ್ಟು ತುಟ್ಟಿಭತ್ಯೆಯನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದೊಂದಿಗೆ 2012ರ ಪರಿಷ್ಕೃತ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ದರದಲ್ಲಿ ದಿನಾಂಕ 1ನೇ ಏಪ್ರಿಲ್ 2012 ರಿಂದ ವಿಲೀನಗೊಳಿಸಿರುತ್ತದೆ.

2. ಈ ಆದೇಶದ ಮೇರೆಗೆ ಮಂಜೂರಾಗಿರುವ ತುಟ್ಟಿಭತ್ಯೆಯನ್ನು ನಗದಾಗಿ ಪಾವತಿ ಮಾಡಲಾಗುವುದು.

3. ಯುಜಿಸಿ/ಎಐಸಿಟಿಇ/ಐಸಿಎಆರ್ ಮತ್ತು ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದು ದಿನಾಂಕ 1.1.2006 ರಂದು ಅಥವಾ ತದನಂತರ ನಿವೃತ್ತರಾದ ಪಿಂಚಣಿದಾರರಿಗೆ ಈ ಆದೇಶವು ಅನ್ವಯಿಸತಕ್ಕದ್ದಲ್ಲ.

4. ಈ ಆದೇಶವು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನ ಪಡೆಯುತ್ತಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರಿಗೆ/ಕುಟುಂಬ ನಿವೃತ್ತಿ ವೇತನದಾರರಿಗೆ ಅನ್ವಯಿಸುತ್ತದೆ.

5. ಈ ಆದೇಶದಿಂದಾಗಿ ಪಾವತಿಸಬೇಕಾದ ತುಟ್ಟಿಭತ್ಯೆಯ ಮೊತ್ತದಲ್ಲಿ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಶಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಶಗಳನ್ನು ಕಡೆಗಣಿಸತಕ್ಕದ್ದು.

6. ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸುವುದು ಮತ್ತು ಯಾವುದೇ ಉದ್ದೇಶಕ್ಕಾಗಿ ಇದನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪದ್ಮಾವತಿ

ಪಿ.ಆರ್. 1589

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

ಆರ್ಥಿಕ ಸಚಿವಾಲಯ

ವಿಷಯ: ಯುಜಿಸಿ/ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಮತ್ತು ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಯಲ್ಲಿರುವ ನ್ಯಾಯಾಂಗ ಅಧಿಕಾರಿಗಳಿಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡುವ ಕುರಿತು.

ಓದಲಾಗಿದೆ:
1) ಸ.ಆ.ಸಂಖ್ಯೆ:ಇಡಿ 37 ಯುಎನ್ಇ 2009 ದಿನಾಂಕ 24-12-2009
2) ಸ.ಆ.ಸಂಖ್ಯೆ: ಎಹೆಚ್‌ಡಿ 64 ಎಯುಎಂ 2009 ದಿನಾಂಕ 24-03-2010
3) ಸ.ಆ.ಸಂಖ್ಯೆ: ಲಾ 147 ಎಲ್ಎಸಿ 2009 ದಿನಾಂಕ 24-06-2010
4) ಸ.ಆ.ಸಂಖ್ಯೆ: ಎಫ್‌ಡಿ 15 ಎಸ್‌ಆರ್‌ಪಿ 2010 ದಿನಾಂಕ 23-04-2010
5) ಸ.ಆ.ಸಂಖ್ಯೆ: ಎಫ್‌ಡಿ 17 ಎಸ್‌ಆರ್‌ಪಿ 2010 ದಿನಾಂಕ 23-04-2010
6) ಸ.ಆ.ಸಂಖ್ಯೆ: ಎಫ್‌ಡಿ 27 ಎಸ್‌ಆರ್‌ಪಿ 2010 ದಿನಾಂಕ 14-10-2010
7) ಸ.ಆ.ಸಂಖ್ಯೆ: ಇಡಿ 96 ಡಿಟಿಇ 2010 ದಿನಾಂಕ 07-03-2011
8) ಸ.ಆ.ಸಂಖ್ಯೆ: ಎಫ್‌ಡಿ 22 ಎಸ್‌ಆರ್‌ಪಿ 2011 ದಿನಾಂಕ 19-04-2011
9) ಸ.ಆ.ಸಂಖ್ಯೆ: ಎಫ್‌ಡಿ 37 ಎಸ್‌ಆರ್‌ಪಿ 2011 ದಿನಾಂಕ 20-10-2011

ಸರ್ಕಾರಿ ಆದೇಶ ಸಂಖ್ಯೆ:ಆಇ 19 ಎಸ್‌ಆರ್‌ಪಿ 2012 ಬೆಂಗಳೂರು, ದಿನಾಂಕ:17ನೇ ಮೇ 2012

ಸರ್ಕಾರವು ದಿನಾಂಕ **1ನೇ ಜನವರಿ 2012** ರಿಂದ ಜಾರಿಗೆ ಬರುವಂತೆ 2006ರ ಪರಿಷ್ಕೃತ ಯುಜಿಸಿ/ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಗಳಲ್ಲಿರುವ ಬೋಧಕ ಸಿಬ್ಬಂದಿಗಳಿಗೆ ಮತ್ತು ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಯಲ್ಲಿರುವ ನ್ಯಾಯಾಂಗ ಅಧಿಕಾರಿಗಳಿಗೆ ಹಾಲಿ ಲಭ್ಯವಿರುವ

2. ಈ ಆದೇಶದ ಮೇರೆಗೆ ಮಂಜೂರಾಗಿರುವ ತುಟ್ಟಿಭತ್ಯೆಯನ್ನು ಮುಂದಿನ ಆದೇಶ ಹೊರಡಿಸುವವರೆಗೆ ನಗದಾಗಿ ಪಾವತಿ ಮಾಡಲಾಗುವುದು.

3. ಈ ಆದೇಶದ ಉದ್ದೇಶಗಳಿಗಾಗಿ ಮೂಲ ವೇತನ ಎಂದರೆ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ 2006ರ ಪರಿಷ್ಕೃತ ಯುಜಿಸಿ/ಐಸಿಎಆರ್/ಎಐಸಿಟಿಇ ಮತ್ತು ಎಫ್ಎನ್‌ಜೆಪಿಸಿ ವೇತನ ಶ್ರೇಣಿಗಳಲ್ಲಿ ಪಡೆಯುವ ವೇತನ.

4. ಮೂಲ ವೇತನಕ್ಕೆ ಇನ್ಯಾವುದೇ ಉಪಲಬ್ದಗಳನ್ನು ಸೇರಿಸತಕ್ಕದ್ದಲ್ಲ.

5. ತುಟ್ಟಿ ಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

6. ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸುವುದು ಮತ್ತು ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುಂದರ್ ರಾಜ ಗುಪ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-2)

ಪಿ.ಆರ್. 1590

INFRASTRUCTURE SECRETARIAT

NOTIFICATION

No: IDD/59/ITS/2009 BANGALORE DATED: 19-05-2012

Ref: G.O.No.IDD/59/ITS/2009 Dated 01.06.2010

Government is hereby modifies the certain clauses of the "Guidelines for procurement of PPP projects through Swiss challenge Route" issued vide GO No. IDD/59/ITS/2009 dated 01.06.2010, which is annexed to this Notification as Annexure.

By Order and in the name of the Governor of Karnataka,
R. Shivalingaiah
Under Secretary to Govt.,
infrastructure Development Department

Annexure

Modification to the clauses of the "Guidelines for procurement of PPP Projects through Swiss Challenge Route" issued vide G.O.No.IDD/59/ITS/2009 dated 01.06.2010

S.L.No. of Para	Exiting Para	Para to be added/modified
1	2	3
Foot note # 2 para 4.3 viii page 8	The requirement of land, if any, for the project would be considered for acquisition / allotment at the Market rates / KIADB allotment rates wherever required.	The requirement of land, if any, for the project would be considered for acquisition / allotment at the Market rates / KIADB allotment rates wherever required, which will be borne by the developer. In the event, if any Govt. Land is available, the same will be provided on lease terms with Market rates as the lease rent to developer. No land would be acquired and Provided to developer for commercial development. Land requirements indicated by the developer for the project will be vetted by the Land Audit Committee and the same will be placed before SHLCC for approval.
Para 4.7 (ii)	The Proposal Initiator's role in the proposed concessionaire company and its ability to construct and / or operate the project shall be as per the qualification norms in the Model RFQ published by GOI and prescribed by Gok.	The Proposal Intiator's role in the proposed concessionaire company and its ability to construct and /or operate the project shall be as per the qualification norms in the Model RFQ Published by GOI and prescribed by Gok and the same can be moderated, if required by the competent authority under the guidance of SLSWA.
Para 4.7 (vi) to be added	-	4.7 (vi) Proposal Initiator shall indicate in the detailed proposal, the bidding route to be

		options at the time of submission of the Proposal. a) Option one, if the competitive bidding process results in a superior proposal, the proposal initiator would be given an opportunity to match the competing counter proposal only if the proposal initiator's bid value is within 15% of the superior bid value and be selected as the project concessionaire; provided that the composition of the bid value would be communicated through the bid documents. OR b) As a second option, if the competitive bidding process results in a superior proposal, then second and final round of financial bidding will be conducted between the original proponent and the best bidder with the minimum floor level set at best bid achieved in first option. The option once exercised at the time of submission of final proposal cannot be changed.
Para 4.13	If the competitive bidding process results in a superior proposal, the Proposal initiator would be given an opportunity to match the competing counter proposal only if the Proposal Initiator's bid value is with in 15% of the superior bid value and be selected as the project concessionaire; provided that the composition of the bid value would be communicated through the bid documents.	If the original proponent chooses option 4.7 (vi) (a) and if the competitive bidding process results in a superior proposal, the proposal initiator's would be given an opportunity to Match the competing counter proposal only if the proposal Initiators. bid value is within 15% of the superior bid value and be selected as the project concessionaire; provided that the composition of the bid value would be communicated through the bid documents.
Para 4.14	If the Proposal Initiator declines to match the superior counter proposal, then the applicant that has made the superior proposal would be selected as the concessionaire.	If the Original Proponent chooses option 4.7 (vi) (b) and if the competitive bidding process results in a superior proposal, then second and final round of financial bidding will be conducted between the original proponent and the best bidder with the minimum floor level set at best bid achieved in first option.
Para 4.15	Upon such selection as in step 4.14 above of successful bidder other than the Proposal Initiator, ɔok/ Gok Agency concerned shall cause/arrange to reimburse to the Proposal Initiator, the cost of DPR as determined above and recover the same from the successful bidder. In order to encourage competition in the bidding process, the superior bidder, in the event, the project is no offered to him, would be reimbursed /compensated to an extent an amount not exceeding 0.1% of the cost of the project or Rs. 20 lakhs whichever is lesser". .... Footnote # 8: This would be available if the superior bid is better than the offer of the proposal initiator and that the project is not available to the superior bidder consequent upon the project proponent agreeing to	Upon such selection as in step 4.13 or 4.14 above of successful bidder other than the Proposal Initiator,Gok/ Gok Agency concerned shall cause/arrange to reimburse to the Proposal Initiator, the cost of DPR as dertermined above and recover the same from the successful bidder. In order to encourage competition in the bidding process, the superior bidder, in the event, the project is no offered to him8, would be reimbursed / compensated to an extent an amount not exceeding 0.1% of the cost of the project or Rs.20 lakhs whichever is lesser". .... Footnote # 8: This would be available if the

	match the superior bid.	superior bid is better than the offer of the proposal initiator and that the project is not available to the superior bidder consequent upon the project proponent agreeing to match the superior bid
Foot note # 10 Annexure V page 34	The competent committee/ agency would determine the 'Bid Value Criteria for selection	The Competent authority/ committee/ agency would determine the single bid parameter to be adopted as bid criteria.

P.R. 1553

R. Shivalingaiah
Under Secretary to Govt.,
infrastructure Development Department

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: 2012–13ನೇ ಸಾಲಿನಲ್ಲಿ ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 4 ಎಸ್‌ಟಿಆರ್ 2001, ದಿನಾಂಕ 22.11.2001.
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 12 ಸೇನೌವ 2011, ದಿನಾಂಕ 27.4.2011.
3) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 12 ಸೇನೌವ 2011, ದಿನಾಂಕ 31.5.2011
4) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 12 ಸೇನೌವ 2012, ದಿನಾಂಕ 28.4.2012.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 22.11.2001 ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ನೌಕರರ ವರ್ಗಾವಣೆ ಕುರಿತಂತೆ ವಿಸ್ತೃತ ಮಾರ್ಗಸೂಚಿಗಳನ್ನು ನೀಡಲಾಗಿದೆ. ಈ ಮಾರ್ಗಸೂಚಿಗಳ ಪ್ರಕಾರ ಸರ್ಕಾರಿ ನೌಕರರ ವರ್ಗಾವಣೆಗಳನ್ನು ಪ್ರತಿ ವರ್ಷ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮಾತ್ರ ಕೆಲವು ಷರತ್ತುಗಳಿಗೊಳಪಟ್ಟು ಮಾಡಬಹುದಾಗಿದೆ.

ಪ್ರಸ್ತುತ 2012–13ನೇ ಸಾಲಿನಲ್ಲಿ ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಮೇಲೆ ಓದಲಾದ ದಿನಾಂಕ 28.4.2012ರ ಆದೇಶದಲ್ಲಿ ದಿನಾಂಕ 28.4.2012ರಿಂದ ದಿನಾಂಕ 25.5.2012ರ ಅವಧಿಯಲ್ಲಿ ವರ್ಗಾವಣೆಗಳನ್ನು ಮಾಡಬಹುದೆಂದು ಆದೇಶಿಸಲಾಗಿರುತ್ತದೆ. ವರ್ಗಾವಣೆ ಅವಧಿಯನ್ನು ಮತ್ತೆ ವಿಸ್ತರಿಸುವುದು ಅವಶ್ಯವೆಂದು ಸರ್ಕಾರವು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 12 ಸೇನೌವ 2012, ಬೆಂಗಳೂರು, ದಿನಾಂಕ: 29.05.2012.

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಮೇಲೆ ಕ್ರಮಾಂಕ 4 ರಲ್ಲಿ ಓದಲಾದ ದಿನಾಂಕ 28.4.2012ರ ಸರ್ಕಾರಿ ಆದೇಶದಲ್ಲಿ ನಮೂದಿಸಿದ ಷರತ್ತುಗಳೊಂದಿಗೆ ಸರ್ಕಾರಿ ನೌಕರರ ವರ್ಗಾವಣೆಗಳನ್ನು ***ದಿನಾಂಕ:15.6.2012*** ರವರೆಗೆ ಮಾಡಬಹುದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವರಾಜು
ಸರ್ಕಾರದ ಉಪ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು)

ಪಿ.ಆರ್. 1554

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಸರ್ಕಾರಿ ವಕೀಲರ ಸಂಘದ ಸಮ್ಮೇಳನ/ ಕಾರ್ಯಾಗಾರ ಸಭೆಗೆ ಸಹಾಯಾನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಲಾ 54 ಎಲ್‌ಎಎಂ 2012, ದಿನಾಂಕ 17.04.2012.
2) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ವಕೀಲರ ಸಂಘದವರ ಮನವಿ ಪತ್ರದ ದಿನಾಂಕ 04.05.2012.

ಪ್ರಸ್ತಾವನೆ:

ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ವಕೀಲರುಗಳ ಸಂಘ ಇವರು ತಮ್ಮ ಮನವಿಯಲ್ಲಿ ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಅಡ್ವೋಕೇಟ್ ಜನರಲ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 03.06.2012 ರಂದು ಸರ್ಕಾರಿ ವಕೀಲರ ಕಾರ್ಯಾಗಾರ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸುತ್ತಾ ಸದರಿ ಸಭೆಯಲ್ಲಿ ಸುಮಾರು 170 ಸರ್ಕಾರಿ ವಕೀಲರು ಹಾಗೂ ಅಧಿಕಾರಿ/ಸಿಬ್ಬಂದಿ ವರ್ಗದವರು ಭಾಗವಹಿಸುವುದರಿಂದ ಸದರಿ ಸಮ್ಮೇಳನದ ಅಂದಾಜಿನ ಖರ್ಚು ವೆಚ್ಚಗಳು ಸುಮಾರು ರೂ. 4,00,000/– ಲಕ್ಷವಾಗುವುದರಿಂದ ಸದರಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ, ಲಾ 138 ಎಲ್‌ಸಿಎಲ್ 2012 ಬೆಂಗಳೂರು, ದಿನಾಂಕ 29–05–2012.

ಕರ್ನಾಟಕ ರಾಜ್ಯ ವಕೀಲರ ಕ್ಷೇಮಾಭಿವೃದ್ಧಿ ನಿಧಿಗೆ ಲೆಕ್ಕ ಶೀರ್ಷಿಕೆ 2014-00-114-0-03-104 (ವಕೀಲರ ಕಲ್ಯಾಣನಿಧಿ) ಯೋಜನೆಯಡಿ ಒದಗಿಸಿರುವ ರೂ.50.00 ಲಕ್ಷ ಆಯವ್ಯಯದಲ್ಲಿಯೇ ರೂ. 3.00 ಲಕ್ಷಗಳನ್ನು (ಮೂರು ಲಕ್ಷಗಳು ಮಾತ್ರ) ಭರಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ರಾಜ್ಯ ಸರ್ಕಾರಿ ವಕೀಲರ ಸಂಘಕ್ಕೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಹಣವನ್ನು ವಕೀಲರ ಸಂಘಗಳಿಗೆ ಸಹಾಯಾನುದಾನ ನಿಯಮಾವಳಿಯಲ್ಲಿ ಸ್ಪಷ್ಟಪಡಿಸಿರುವಂತೆ, ಆದೇಶದಲ್ಲಿ ಬಿಡುಗಡೆ ಮಾಡಿರುವ ಮೊತ್ತವನ್ನು ಅಡ್ವೊಕೇಟ್ ಜನರಲ್ ಕಛೇರಿ ರವರ ರಶೀದಿ ತಯಾರಿಸಿ, ರಾಜ್ಯ ಹುಜೂರ್ ಖಜಾನೆಯಿಂದ ಚೆಕ್‌ನ್ನು ಡ್ರಾ ಮಾಡಿಕೊಂಡು, ಕರ್ನಾಟಕ ರಾಜ್ಯ ಸರ್ಕಾರಿ ವಕೀಲರ ಸಂಘಕ್ಕೆ ಪಾವತಿಸುವುದು.

1. ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ನಿಯಮಾನುಸಾರ ಬಳಸತಕ್ಕದ್ದು.
2. ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಿ ವಕೀಲರ ಸಂಘವು ಅಡ್ವೊಕೇಟ್ ಜನರಲ್‌ರವರಿಗೆ ಅಂಕಿ ಅಂಶಗಳ ಸಹಿತ ಕಾಲಮಿತಿಯೊಳಗೆ ನಿಯಮಾನುಸಾರ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ. ಇ 184 ವೆಚ್ಚ 10/2012 ದಿನಾಂಕ 22-05-2012 ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ರುಕ್ಮಿಣಿ ದಿವಾಕರ್
ಸರ್ಕಾರದ ಅಧೀನ ಕಾರ್ಯದರ್ಶಿ, (ಆಡಳಿತ-2)
ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ,

ಪಿ.ಆರ್. 1555

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಹೆಚ್.ಟಿ ಜಯರಾಮಯ್ಯ, ಪಿ.ಐ., ಡಿ.ಸಿ.ಆರ್.ಬಿ., ಚಾಮರಾಜನಗರ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 20/ಡಿಇ-1 ಆರ್.6/2008 ದಿನಾಂಕ: 3-10-09
2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ ಮತ್ತು ಐ.ಜಿ.ಪಿ, ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ (8) 137/2009-10 ದಿನಾಂಕ:04-7-2010
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 01.10.2010
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8) 137/2009-10 ದಿನಾಂಕ:22-12-2010
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 217 ಸಿಎನ್‌ಎಸ್ 2011 ದಿನಾಂಕ: 15-5-2012.

ಪ್ರಸ್ತಾವನೆ:

ಶ್ರೀ ಹೆಚ್.ಟಿ. ಜಯರಾಮಯ್ಯ, ಪಿ.ಐ., ಇವರು ಬೆಂಗಳೂರಿನ ನಂದಿನಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ್ಯತೆ, ಬೇಜವಾಬ್ದಾರಿತನ ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್(ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ಎಚ್.ಟಿ. ಜಯರಾಮಯ್ಯ, ಪಿ.ಐ., (ನಂದಿನಿ ಬಡಾವಣೆ ಪೊಲೀಸ್ ಠಾಣೆ) ಹಾಲಿ ಗಣ್ಯ ಮತ್ತು ಅತಿಗಣ್ಯ ವ್ಯಕ್ತಿಗಳ ಭದ್ರತಾ ವಿಭಾಗ, ಬೆಂಗಳೂರು ನಗರ ಆದ ನೀವು ನಂದಿನಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಹಾಯಕ ಪೊಲೀಸ್ ಕಮೀಷನರ್, ಮಲ್ಲೇಶ್ವರಂ ಉಪ ವಿಭಾಗದವರ ಜ್ಞಾಪನ, ದಿನಾಂಕ:14-4-2008 ರೀತ್ಯಾ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಗಳ ಬಗ್ಗೆ ನಿರ್ದಿಷ್ಟ ಮಾಹಿತಿಯನ್ನು ಸಂಗ್ರಹಿಸಿ ಚುನಾವಣೆಗೆ ಯಾವುದೇ ರೀತಿಯ ಅಡ್ಡಿ ಆತಂಕವಾಗದಂತೆ ಕ್ರಮ ತೆಗೆದುಕೊಂಡು ಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದರೂ ಸಹ ಪಾಲನಾ ವರದಿಯನ್ನು ಸಲ್ಲಿಸಿರುವುದಿಲ್ಲ. ಅಲ್ಲದೆ ಸದರಿ ರೌಡಿ ಆಸಾಮಿಗಳ ಚಟುವಟಿಕೆಗಳ ಬಗ್ಗೆ ಹತೋಟಿಯಲ್ಲಿಡುವ ಬಗ್ಗೆ ಯಾವುದೇ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳದಿರುವುದು ಹಾಗೂ ದಿನಾಂಕ: 19-4-2008 ರಂದು ಶ್ರೀ ಎನ್. ವಸಂತ್ ಕುಮಾರ್ ಎಂಬುವವರಿಗೆ ಶಸ್ತ್ರ ಲೈಸೆನ್ಸ್ ಮಂಜೂರು ಮಾಡುವ ಬಗ್ಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುತ್ತೀರಿ. ಆದರೆ ಸದರಿ ಅರ್ಜಿದಾರರ ತಂದೆ ಶ್ರೀ ಟಿ. ನಾಗರಾಜ್ ಎಂಬುವವರು ವಿದ್ಯಾರಣ್ಯಪುರ ಪೊಲೀಸ್ ಠಾಣೆ ಮೊ.ಸಂ. 77/07 ಕಲಂ 302 ರೆ/ವಿ 34 ಐ.ಪಿ.ಸಿ. ಪ್ರಕರಣದಲ್ಲಿ ಭಾಗಿಯಾಗಿದ್ದು, ಸುಮಾರು ಒಂದು ವರ್ಷದಿಂದ ತಲೆ ಮರೆಸಿಕೊಂಡಿರುವ ಆರೋಪಿಯಾಗಿರುತ್ತಾರೆ. ಈ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಜವಾಬ್ದಾರಿಯುತವಾದ ಪೊಲೀಸ್ ಅಧಿಕಾರಿಯಾದ ನೀವು ಶಸ್ತ್ರ ಪರವಾನಗಿ ಅರ್ಜಿಯಲ್ಲಿ ಅರ್ಜಿದಾರರು ಅವರ ಕುಟುಂಬ ಸದಸ್ಯರಾದ ಟಿ. ನಾಗರಾಜು, ತಾಯಿ ಮಾಯಮ್ಮ ಹಾಗೂ ತಮ್ಮ ಗಿರೀಶ್‌ರವರೊಂದಿಗೆ ವಾಸವಾಗಿರುತ್ತಾರೆ.

ಅರ್ಜಿದಾರರ ಕುಟುಂಬದ ಸದಸ್ಯರು ಯಾವುದಾದರೂ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರುವರೆ ಎಂಬ ಬಗ್ಗೆ ತನಿಖಾ ಕಾಲದಲ್ಲಿ ತಿಳಿದು ಬಂದಿರುವುದಿಲ್ಲಾ ಎಂದು ವರದಿ ಸಲ್ಲಿಸಿ, ಸದರಿ ಕೊಲೆ ಆರೋಪದ ಬಗ್ಗೆ ಪೂರ್ಣ ಮಾಹಿತಿ ಇದ್ದು, ಕೊಲೆ ಆರೋಪಿ ಮಗನಿಗೆ ಕಾನೂನು ಬಾಹಿರವಾಗಿ ಚುನಾವಣಾ ಸಮಯದಲ್ಲಿ ರಿವಾಲ್ವಾರ್/ಪಿಸ್ತೂಲ್ ಶಸ್ತ್ರ ಪರವಾನಗಿಯನ್ನು ಮಂಜೂರು ಮಾಡಲು ಮೇಲಾಧಿಕಾರಿಗೆ ಶಿಫಾರಸ್ಸು ಮಾಡಿ ಕರ್ತವ್ಯದಲ್ಲಿ ಅತೀವ ಕರ್ತವ್ಯ ನಿರ್ಲಕ್ಷತೆ ಬೇಜವಾಬ್ದಾರಿತನ ಹಾಗೂ ದುರ್ನಡತೆ ಪ್ರದರ್ಶಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಆದನ್ವಯದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ: 03-10-2009ರ ಆದೇಶದಲ್ಲಿ ಅರ್ಜಿದಾರರು ಪ್ರಸ್ತುತ ಪಡೆಯುತ್ತಿರುವ ವೇತನ ಶ್ರೇಣಿಯಲ್ಲಿ ಮೂರು ಹಂತಗಳನ್ನು ಕೆಳಗಿಳಿಸಲಾಗಿದೆ. ಕೆಳಗಿಳಿಸಿದ ಹಂತದಿಂದ ಹೊಸದಾಗಿ ವಾರ್ಷಿಕ ವೇತನ ಬಡ್ತಿಯನ್ನು ಗಳಿಸುವುದು ದಿನಾಂಕ: 10-06-2008 ರಿಂದ 10-09-2008 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 04-07-2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿದ್ದು, ಆದರೆ ಶಿಸ್ತು ಪ್ರಾಧಿಕಾರದ ದಂಡನಾದೇಶವು ಕರ್ನಾಟಕ ನಾಗರಿಕ ಸೇವಾ ನಿಯಮಗಳು 59(1)(ಬಿ)ಗೆ ವ್ಯತಿರಿಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವು ತಾಂತ್ರಿಕ ದೋಷದಿಂದ ಕೂಡಿರುವುದನ್ನು ಗಮನಿಸಿ ಈ ಅಂಶ ಸೀಮಿತಗೊಳಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸುವ ಕುರಿತಂತೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 155 ಪೊಸಿಅ 2010 ಬೆಂಗಳೂರು, ದಿನಾಂಕ: 25-5-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್.ಟಿ. ಜಯರಾಮಯ್ಯ, ಪಿ.ಐ., ಡಿ.ಸಿ.ಆರ್.ಬಿ., ಚಾಮರಾಜನಗರ, ಚಾಮರಾಜನಗರ ಜಿಲ್ಲೆ, ಇವರಿಗೆ ಶಿಸ್ತು ಪ್ರಾಧಿಕಾರದ ದಿನಾಂಕ:03-10-2009ರ ದಂಡನಾದೇಶವನ್ನು ಮಾರ್ಪಡಿಸಿ, ಈ ಕೆಳಕಂಡಂತೆ ಆದೇಶಿಸಿದೆ;

i) ಇವರ ವೇತನವನ್ನು ಇವರು ಪ್ರಸ್ತುತ ಪಡೆಯುತ್ತಿರುವ ವೇತನ ಶ್ರೇಣಿಯಲ್ಲಿನ ಮೂರು ಹಂತಗಳನ್ನು ನಾಲ್ಕು ವರ್ಷಗಳ ಅವಧಿಗೆ ಕೆಳಗಿಳಿಸಲಾಗಿದೆ.

ii) ನಾಲ್ಕು ವರ್ಷಗಳ ದಂಡನೆಯ ಅವಧಿ ಮುಗಿದ ನಂತರ ಇವರು ಕೆಳಗಿಳಿಸಿದ ಹಂತದಿಂದ ಹೊಸದಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಗಳಿಸತಕ್ಕದ್ದು.

iii) ದಿನಾಂಕ: 10-06-2008 ರಿಂದ 10-09-2008ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ.ನಿಂಗಪ್ಪ

ಪಿ.ಆರ್. 1556

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಬಿ)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ 2012-13ನೇ ಸಾಲಿನ ಮೊದಲನೆ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರ ಪತ್ರ ಸಂಖ್ಯೆ: ಮಪ್ರಮಂ/ನಗದು:ಹ.ಬಿ/2012-13, ದಿನಾಂಕ: 26-04-2012.

ಪ್ರಸ್ತಾವನೆ :

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 2012-13ನೇ ಸಾಲಿನಲ್ಲಿ ರೂ. 3400.00 ಲಕ್ಷಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ	ಮೊತ್ತ (ರೂ. ಲಕ್ಷಗಳಲ್ಲಿ)
1.	2515-00-103-0-02-101 (ಸಹಾಯಾನುದಾನ)	100.00
2.	4515-00-800-0-03-132 (ಬಂಡವಾಳ ವೆಚ್ಚ)	2199.99
3.	4515-00-800-0-03-422 (ಎಸ್.ಸಿ.ಪಿ.)	850.01
4.	4515-00-800-0-03-423 (ಟಿ.ಎಸ್.ಪಿ.)	250.00
	ಒಟ್ಟು	**3400.00**

ಮೇಲೆ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರು 2012-13ನೇ ಸಾಲಿನ ಪ್ರಥಮ ಕಂತಿನ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಸದರಿಯವರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ ಪ್ರಥಮ ಕಂತಿನ ಅನುದಾನವೆಂದು 850.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ. ಅಂತೆಯೇ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 06 ಮಪ್ರಮಂ 2012 ಬೆಂಗಳೂರು, ದಿನಾಂಕ: 24-05-2012

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ 2012-13ನೇ ಸಾಲಿನ ಪ್ರಥಮ ಕಂತಿನ ಅನುದಾನ ರೂ. 850.00 ಲಕ್ಷ (ಎಂಟು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆ ಮಾಡಿದೆ.

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ	ಮೊತ್ತ (ರೂ. ಲಕ್ಷಗಳಲ್ಲಿ)
1.	2515-00-103-0-02-101 (ಸಹಾಯಾನುದಾನ)	25.00
2.	4515-00-800-0-03-132 (ಬಂಡವಾಳ ವೆಚ್ಚ)	550.00
3.	4515-00-800-0-03-422 (ಎಸ್.ಸಿ.ಪಿ)	212.50
4.	4515-00-800-0-03-423 (ಟಿ.ಎಸ್.ಪಿ)	62.50
	ಒಟ್ಟು	850.00

2. ಬಿಡುಗಡೆಯಾದ ಈ ಮೊತ್ತವನ್ನು ಮಂಡಳಿಯ ಕಾರ್ಯದರ್ಶಿಯವರ ವೈಯಕ್ತಿಕ ಖಾತೆಗೆ ಜಮೆ ಮಾಡಿ, ನಂತರ ಆವಶ್ಯಕತೆಗನುಗುಣವಾಗಿ ಖರ್ಚು ಮಾಡತಕ್ಕದ್ದು ಮತ್ತು ನಿಯಮಾನುಸಾರ ಹಣ ಬಳಕೆ ಪ್ರಮಾಣಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು.

3. ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಆಇ 04 ಟಿಎಫ್‌ಪಿ 2012, ದಿನಾಂಕ 27-04-2012 ರಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಉಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪಿಆರ್ ನಂ. 1566

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ಇಫ್ತಿಕರ್ ಅಹ್ಮದ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆಂಬೋಡಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸುವ ಬಗ್ಗೆ.

ಓದಲಾಗಿದೆ:
1. ಆಯುಕ್ತರು, ಆಕುಕ ಸೇವೆಗಳು ಬೆಂಗಳೂರು ಇವರ ದೋಷಾರೋಪಣಾ ಪಟ್ಟಿ ಸಂಖ್ಯೆ: ಡಿಪಿಜಿ/ಬೆಂವಿ(2)/ಕೋ/05/07-08, ದಿನಾಂಕ: 05-12-2008.
2. ಡಾ: ಇಫ್ತಿಕರ್ ಅಹ್ಮದ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಇವರ ರಕ್ಷಣಾ ಹೇಳಿಕೆ ದಿನಾಂಕ: 16-01-2009.
3. ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಪಿಜಿ/ಬೆಂವಿ(2)ಕೋ/05/07-08, ದಿನಾಂಕ: 08-05-2009.
4. ಪತ್ರಿಕಾ ಪ್ರಕಟಣೆ ಸಂಖ್ಯೆ: ಡಿಪಿಜಿ/ಬೆಂವಿ/(2)/ಕೋ/05/07-08, ದಿನಾಂಕ: 8-10-2009 ಮತ್ತು 10-10-2009.
5. ವಿಚಾರಣಾ ಪ್ರಾಧಿಕಾರಿ ಹಾಗೂ ಮುಖ್ಯ ಜಾಗೃತಾಧಿಕಾರಿ (ಜಾಗೃತಕೋಶ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ವಿಚಾರಣಾ ವರದಿ ಸಂಖ್ಯೆ: ಮುಜಾಅ/ಜಾಕೋ/02/2009-10. ದಿನಾಂಕ: 17-12-2009.
6. ತಿಳುವಳಿಕೆ ಪತ್ರ ಸಂಖ್ಯೆ: ಡಿಪಿಜಿ/ಬೆಂವಿII/ಕೋ/05/07-08 ದಿನಾಂಕ: 18-01-2010.
7. ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಜಿಪಿ/ಬೆಂವಿಖಖ/ಕೋ/07-08, ದಿನಾಂಕ: 10-04-2012.

ಪ್ರಸ್ತಾವನೆ :

ಡಾ: ಇಫ್ತಿಕರ್ ಅಹ್ಮದ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆಂಬೋಡಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರು ದಿನಾಂಕ: 01-03-2004 ರಿಂದ ಕರ್ತವ್ಯಕ್ಕೆ ಹಾಜರಾಗದೆ ಅನಧಿಕೃತ ಗೈರುಹಾಜರಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಆಯುಕ್ತರು ಆಕುಕ ಸೇವೆಗಳು ಬೆಂಗಳೂರು ರವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕಾರಣ ಕೇಳುವ ನೋಟೀಸನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಜಾರಿ ಮಾಡಿದ್ದರು.

ಡಾ: ಇಫ್ತಿಕರ್ ಅಹ್ಮದ್ ರವರು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಅವರು ನೀಡಿದ ಷೋಕಾಸ್ ನೋಟೀಸಿಗೆ ಮೇಲೆ (2)ರಲ್ಲಿ ಓದಲಾದ ದಿನಾಂಕ: 16-01-2009ರ ಪತ್ರದಲ್ಲಿ ಹೇಳಿಕೆಯನ್ನು ಸಲ್ಲಿಸಿದ್ದು, ವೈಯಕ್ತಿಕ ಕಾರಣದಿಂದ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲವೆಂದು ತಿಳಿಸಿರುತ್ತಾರೆ. ನಂತರ ಪ್ರಕರಣದ ಸತ್ಯಾ-ಸತ್ಯತೆಯನ್ನು ಕಂಡುಕೊಳ್ಳಲು ಆಯುಕ್ತರು, ಆಕುಕ ಸೇವೆಗಳು,

ಬೆಂಗಳೂರು ಇವರು ಪ್ರಕರಣವನ್ನು ಇಲಾಖಾ ವಿಚಾರಣೆಗೆ ವಹಿಸಲು ನಿರ್ಧರಿಸಿ ಮೇಲೆ (3)ರಲ್ಲಿ ಓದಲಾದ ಆದೇಶದಲ್ಲಿ ಮುಖ್ಯ ಜಾಗೃತಾಧಿಕಾರಿಗಳು, ಜಾಗೃತಕೋಶ ಇವರನ್ನು ವಿಚಾರಣಾಧಿಕಾರಿಗಳಿಗಾಗಿ ನೇಮಿಸಿದ್ದು, ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿದ್ದರು. ತದನಂತರ ಆಪಾದಿತರನ್ನು ವಿಚಾರಣೆಗೆ ಹಾಜರಾಗಲು ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣೆಯನ್ನು ದಿನಾಂಕ: 02–10–2009 ರಂದು ಬೆಳಿಗ್ಗೆ 10 ಗಂಟೆಗೆ ಮುಖ್ಯ ಜಾಗೃತಾಧಿಕಾರಿಗಳು, ಜಾಗೃತ ಕೋಶ, ಆಕುಕ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರಲ್ಲಿ ನಡೆಯುವುದರಿಂದ ವಿಚಾರಣಾ ದಿನಾಂಕದಂದು ತಪ್ಪದೆ ಹಾಜರಾಗುವಂತೆ ತಿಳಿಸುತ್ತಾ ವಿಚಾರಣೆಗೆ ಹಾಜರಾಗದಿದ್ದಲ್ಲಿ ಏಕಪಕ್ಷೀಯವಾಗಿ ನಿರ್ಣಯ ತೆಗೆದುಕೊಳ್ಳಲಾಗುವುದೆಂದು ತಿಳಿಸಿ ಪತ್ರಿಕಾ ಪ್ರಕಟಣೆ ನೀಡಲಾಗಿತ್ತು.

ಮುಖ್ಯ ಜಾಗೃತಾಧಿಕಾರಿಗಳು (ಜಾಗೃತಕೋಶ) ಆಕುಕ ಸೇವೆಗಳು, ಬೆಂಗಳೂರು ಇವರು ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಸಲ್ಲಿಸಿ, ಸದರಿ ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧ ಮಾಡಲಾದ ಅನಧಿಕೃತ ಗೈರುಹಾಜರಿಯ ಆರೋಪವು ನಿಸ್ಸಂಶಯವಾಗಿ ಸಾಬೀತಾಗಿದೆಯೆಂದು ತಿಳಿಸಿರುತ್ತಾರೆ.

ಸದರಿ ಅಧಿಕಾರಿಯ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿದ್ದ ಕಾರಣ ಆಕುಕ ಸೇವೆಗಳು, ಬೆಂಗಳೂರು ಇವರು ಮೇಲೆ (6)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾ ವರದಿಯೊಂದಿಗೆ ತಿಳುವಳಿಕೆ ಪತ್ರದ ಮೂಲಕ ಆರೋಪಿತ ವೈದ್ಯಾಧಿಕಾರಿಗಳಿಗೆ ಜಾರಿ ಮಾಡಿ ಈ ವಿಚಾರಣಾ ವರದಿಯನ್ನು ಏಕೆ ಅಂಗೀಕರಿಸಬಾರದೆಂಬ ಬಗ್ಗೆ ವಿವರಣೆಯನ್ನು ಕೋರಿದ್ದರು. ಸದರಿ ವೈದ್ಯರು ಈ ನೋಟೀಸನ್ನು ಪಡೆದಿದ್ದರೂ ಸಹ ತಮ್ಮ ರಕ್ಷಣಾ ಹೇಳಿಕೆಯನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸದ ಕಾರಣ ಗೈರುಹಾಜರಿಯು ವಿಚಾರಣಾ ವರದಿಯಿಂದ ಸಾಬೀತಾಗಿದ್ದರಿಂದ, ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ರವರು ಮೇಲೆ ಓದಲಾದ (7)ರ ಪತ್ರದಲ್ಲಿ ಅಧಿಕಾರಿಯು ದಿನಾಂಕ: 01–03–2004 ರಿಂದ ಅನಧಿಕೃತ ಗೈರುಹಾಜರಾದ ಕಾರಣ ದಂಡನೆಯಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(VIII) ರಡಿ ಸರ್ಕಾರಿ ಸೇವೆಯಿಂದ ವಜಾಗೊಳಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು ಆಯುಕ್ತರ ಪ್ರಸ್ತಾವನೆ ವಿಚಾರಣಾಧಿಕಾರಿಗಳ ವಿಚಾರಣಾ ವರದಿ, ಸಂಬಂಧಿಸಿದ ದಾಖಲೆಗಳನ್ನು ಹಾಗೂ ಸಾಕ್ಷಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಡಾ: ಇಫ್ತಿಕರ್ ಅಹ್ಮದ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆಂಬೋಡಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ದಿನಾಂಕ: 01–03–2004 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಪತ್ರಿಕಾ ಪ್ರಕಟಣೆಗೂ ಸ್ಪಂದಿಸದೆ ಇಲಾಖಾ ವಿಚಾರಣೆಗೂ ಹಾಜರಾಗದೇ ವಿಚಾರಣಾ ವರದಿಯನ್ನು ಸ್ವೀಕರಿಸಿ, ಸಮಜಾಯಿಷಿಯನ್ನು ಸಲ್ಲಿಸದೇ ಸ್ವಾಭಾವಿಕ ನ್ಯಾಯ ಪಡೆಯಲು ವಿಫಲವಾಗಿರುವುದರಿಂದ ಇವರನ್ನು ಕರ್ನಾಟಕ ನಾಗರೀಕ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(VIII) ರ ಅಡಿಯಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸಲು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 135 ಎಂಎಸ್ಎ 2012 ಬೆಂಗಳೂರು, ದಿನಾಂಕ: 24–05–2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ, ಕರ್ನಾಟಕ ನಾಗರೀಕ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(VIII) ರಡಿಯಲ್ಲಿ ಡಾ: ಇಫ್ತಿಕರ್ ಅಹ್ಮದ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ. ಪ್ರಾಥಮಿಕ ಆರೋಗ್ಯ ಕೇಂದ್ರ, ಕೆಂಬೋಡಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇರ್ವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎಫ್. ಹುಬ್ಬಳ್ಳಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿಆರ್ ನಂ. 1567

ಆರ್ಥಿಕ ಸಚಿವಾಲಯ

ವಿಷಯ : ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿಗಾಗಿ ರಾಜ್ಯ ಸರ್ಕಾರದಿಂದ ಗ್ರಾಮ ಪಂಚಾಯಿತಿಗಳಿಗೆ ಅನುದಾನವನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಜಡ್‌ಪಿಎ 2009, ದಿನಾಂಕ: 9–11–2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ವಾರ್ಷಿಕ ಅನುದಾನದಲ್ಲಿ ವಿದ್ಯುತ್ ಬಿಲ್‌ಗಳ ಇತ್ಯರ್ಥಕ್ಕಾಗಿ ಕನಿಷ್ಠ ಶೇ. 75 ರಷ್ಟರನ್ನು ಮೀಸಲಿಡತಕ್ಕವೆಂದು ಆದೇಶಿಸಿ ಸರ್ಕಾರಿ ಆದೇಶ ಹೊರಡಿಸಲಾಗಿತ್ತು. ವಿದ್ಯುತ್ ಬಿಲ್‌ಗಳ ಪಾವತಿಗಾಗಿ ಕನಿಷ್ಠ ಶೇ. 75 ರಷ್ಟನ್ನು ಮಾರ್ಪಡಿಸಿ ಶೇ. 60 ರಷ್ಟು ಮೀಸಲಿಡತಕ್ಕದೆಂದು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 566 ವೆಚ್ಚ–6: 2012 ಬೆಂಗಳೂರು, ದಿನಾಂಕ: 01–06–2012

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ ವಾರ್ಷಿಕ ಅನುದಾನದಲ್ಲಿ ಅವುಗಳ ವಿದ್ಯುತ್ ಬಿಲ್‌ಗಳ ಇತ್ಯರ್ಥಕ್ಕಾಗಿ ಕನಿಷ್ಠ ಶೇ. 60 ರಷ್ಟನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮೀಸಲಿಡತಕ್ಕದೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಭರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ. (ವೆಚ್ಚ–5)

ಪಿಆರ್ ನಂ. 1568

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ನಾರಾಯಣ ಹೃದಯಾಲಯ ಆಸ್ಪತ್ರೆ, ಬೆಂಗಳೂರು ಈ ಆಸ್ಪತ್ರೆಯಲ್ಲಿ ಮಾನವ ಅಂಗಾಂಗಗಳ ಕಸಿಗಾಗಿ ಹೆಚ್ಚುವರಿ ಅಧಿಕಾರಯುಕ್ತ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ:
1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್/571(ಇ), ದಿನಾಂಕ: 31-07-2008.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಜೆಡಿಎಂ/ಎಂಡಿಪಿ/15/2011-2012, ದಿನಾಂಕ: 19-01-2012.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಯಲಯ, ಭಾರತ ಸರ್ಕಾರ, ನವದೆಹಲಿ ಇವರ ಅಧಿಸೂಚನೆಯಲ್ಲಿ ಮಾನವ ಅಂಗಾಂಗಗಳ ಕಸಿ ನಿಯಮಗಳು 1995ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಸದರಿ ನಿಯಮಾವಳಿಯ ನಿಯಮ 6ಕ್ಕೆ ತಿದ್ದುಪಡಿ ಮಾಡಿರುವ ಪ್ರಕಾರ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ, ಆಸ್ಪತ್ರೆವಾರು ಹೆಚ್ಚುವರಿ ಅಧಿಕಾರಯುಕ್ತ ಸಮಿತಿಗಳು ಮತ್ತು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಯುಕ್ತ ಸಮಿತಿಗಳನ್ನು ರಚಿಸಬೇಕಾಗುತ್ತದೆ.

ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರು ಬೆಂಗಳೂರಿನ ನಾರಾಯಣ ಹೃದಯಾಲಯ ಆಸ್ಪತ್ರೆಯು ವರ್ಷದಲ್ಲಿ 25 ಕ್ಕಿಂತ ಹೆಚ್ಚಿನ ಮಾನವ ಅಂಗಾಂಗಗಳ ಕಸಿಯನ್ನು ಮಾಡಿರುವುದರಿಂದ ಹಾಗೂ ಸದರಿ ತಿದ್ದುಪಡಿ ನಿಯಮಗಳಲ್ಲಿ ತಿಳಿಸಿರುವ ಷರತ್ತುಗಳನ್ನು ಪೂರೈಸಿರುವುದರಿಂದ ಸದರಿ ಆಸ್ಪತ್ರೆಯಲ್ಲಿ ಹೆಚ್ಚುವರಿ ಅಧಿಕಾರಯುಕ್ತ ಸಮಿತಿಯನ್ನು ರಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 26 ಎಫ್‌ಪಿಆರ್ 2012 ಬೆಂಗಳೂರು, ದಿನಾಂಕ: 01-06-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಾನವ ಅಂಗಾಂಗಗಳ ಕಸಿ (ತಿದ್ದುಪಡಿ) ನಿಯಮಗಳು 2008ರ ನಿಯಮ 6ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮಾನವ ಅಂಗಾಂಗಗಳ ಕಸಿ ಅಧಿನಿಯಮ 1994 ಹಾಗೂ ಸದರಿ ಅಧಿನಿಯಮದಡಿ ಕಾಲಕಾಲಕ್ಕೆ ರಚಿಸಲಾದ ನಿಯಮಗಳನ್ವಯ ಅದರಲ್ಲಿನ ಉಪ ಬಂಧಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಬೆಂಗಳೂರಿನ ನಾರಾಯಣ ಹೃದಯಾಲಯ ಆಸ್ಪತ್ರೆಯಲ್ಲಿ ಹೆಚ್ಚುವರಿ ಅಧಿಕಾರಯುಕ್ತ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ರಚಿಸಲು ಹರ್ಷಿಸುತ್ತದೆ.

1.	ಡಾ: ಆಶಾ ಬಿ. ನಾಯಕ್, ವೈದ್ಯಕೀಯ ಅಧೀಕ್ಷಕರು, ನಾರಾಯಣ ಹೃದಯಾಲಯ ಆಸ್ಪತ್ರೆ, ಬೆಂಗಳೂರು	ಅಧ್ಯಕ್ಷರು
2.	ಡಾ: ಜಾರ್ಜ್ ಚರಿಯನ್, ಅಕಾಡೆಮಿಕ್ ಹೆಡ್. ಕಾರ್ಡಿಯಕ್ ವಿಭಾಗ, ಸೀನಿಯರ್ ಕಾರ್ಡಿಯಕ್ ಕನ್ಸಲ್ಟೆಂಟ್, ನಾರಾಯಣ ಹೃದಯಾಲಯ ಆಸ್ಪತ್ರೆ, ಬೆಂಗಳೂರು	ಸದಸ್ಯರು
3.	ಡಾ: ಮೋನಿ ಅಬ್ರಹಾಂ ಕುರಿಯಾಕೋಸ್, ಪ್ರೊಫೆಸರ್ ಆಫ್ ಸರ್ಜರಿ, ಡಿಪಾರ್ಟ್‌ಮೆಂಟ್ ಆಫ್ ಸರ್ಜಿಕಲ್ ಅಂಕಾಲಜಿ ಚೀಫ್ ಡಿವಿಷನ್ ಆಫ್ ಹೆಡ್ ಮತ್ತು ನೆಕ್ ಅಂಕಾಲಜಿ. ನಾರಾಯಣ ಹೃದಯಾಲಯ ಆಸ್ಪತ್ರೆ, ಬೆಂಗಳೂರು.	ಸದಸ್ಯರು
4.	ಶ್ರೀ ಶ್ರೀಕಾಂತ್ ರಾಮನ್, ಚಾರ್ಟರ್ಡ್ ಅಕೌಂಟೆಂಟ್, ನಾರಾಯಣ ಹೃದಯಾಲಯ ಆಸ್ಪತ್ರೆ, ಬೆಂಗಳೂರು.	ಸದಸ್ಯರು
5.	ಬ್ರಿಗೇಡಿಯರ್ ಐ.ಎನ್.ರೈ. ನಿವೃತ್ತ ಬ್ರಿಗೇಡಿಯರ್, ಭಾರತೀಯ ಸೈನಿಕ ಸೇವೆಗಳು ನಾರಾಯಣ ಹೃದಯಾಲಯ ಆಸ್ಪತ್ರೆ, ಬೆಂಗಳೂರು.	ಸದಸ್ಯರು
6.	ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಅಥವಾ ಅವರನ್ನು ಪ್ರತಿನಿಧಿಸುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ ಸೇರಿದ ಜಂಟಿ ನಿರ್ದೇಶಕರ ಹುದ್ದೆಗಿಂತ ಕಡಿಮೆ ದರ್ಜೆಯಲ್ಲದ ನಾಮ ನಿರ್ದೇಶಿತ ಒಬ್ಬ ಅಧಿಕಾರಿ.	ಸದಸ್ಯರು
7.	ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಆನಂದರಾವ್ ವೃತ್ತ, ಬೆಂಗಳೂರು ಅಥವಾ ಅವರನ್ನು ಪ್ರತಿನಿಧಿಸುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ ಸೇರಿದ ಉಪ ನಿರ್ದೇಶಕರ ಹುದ್ದೆಗಿಂತ ಕಡಿಮೆ ದರ್ಜೆಯಲ್ಲದ ನಾಮ ನಿರ್ದೇಶಿತ ಒಬ್ಬ ಅಧಿಕಾರಿ.	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಹೇಮನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿಆರ್ ನಂ. 1569

HEALTH AND FAMILY WELFARE SECRETARIAT

Sub: Constitution of Additional Authorisation Committee for Transplantation of Human Organs in Narayana Hrudayala Hospitals, Bangalore-regarding.

Read:
1. Notification No. GSR.571(E). dated: 31-07-2008. Issued by the Ministry of Health & Family Welfare, Govt. of India New Delhi.
2. Proposal No. J.D.M./MDP/15/2011-12, dated: 19-01-2012. From the Commissioner Health and Family Welfare Services, Bangalore.

PREAMBLE:

The Ministry of Health & Family Welfare. Government of India New Delhi. has made certain amendments to the Transplantation of Human Organs Rules 1995 vide Notification read at (1) above. According to the amendment made to Rule 6 of the said Rules State Level Authorisation Committee Constitution of Hospitals-wise Additional Authorisation Committees and State or District Level Authorisation Committees have to be Constituted.

The Commissioner Health and Family Welfare Services, Bangalore has sent proposal read at (2) above, for Constitution of Additional Authorisation Committee in Narayana Hrudayalaya Hospitals Bangalore as the said hospital has conducted more than 25 transplantations in a year and fulfils the conditions stipulated under the said amended Rules.

Government have examined the proposal in detail and hence the following order.

Government Order No. HFW 26 FPR 2012 Bangalore, Dated: 01-06-2012

In view of the circumstances explained in the preamble and in exercise of the powers conferred under Rule 6A of Transplantation of Human Organs (Amendment) Rules 2008, Government of Karnataka are pleased to constitute Additional Authorisation Committee in Narayana Hrudayala Hospitals, Bangalore for purposes of carrying out the provisions enunciated in Transplantation of Human Organs Act 1994 and the Rules framed thereunder from time to time with immediate effect as follows;

1.	Dr. Asha B. Nayak, Medical Superintendent, Narayana Hrudayala Hospitals, Bangalore	Chairman
2.	Dr. George Cherian, Academic Head Cardiac Division, Senior Cardiac Consultant. Narayana Hrudayala Hospitals, Bangalore.	Member
3.	Dr. Moni Abraham Kuriakose. Professor of Surgery, Department of Surgical Oncology Chief, Division of Head and Neck Oncology. Narayana Hrudayala Hospitals, Bangalore.	Member
4.	Mr. Srikanth Raman, Chartered Accountant Narayana Hrudayalaya Hospitals, Bangalore.	Member
5.	Brig. I.N. Rai. Retd. Brigadier Indian Army Services, Narayana Hrudayalaya Hospitals, Bangalore	Member
6.	Secretary to Government, Health and Family Welfare Department, Vikas Soudha, Bangalore or Representated by an officer of Health & Family Welfare Services not below the rank of Joint Director as nominee.	Member
7.	Director, Health and Family Welfare Services, Anandarao Circle, Bangalore or Represented by an officer of Health & Family Welfare Services not below the rank of Deputy Director as nominee.	Member

By Order and and in the name of the Governor of Karnataka

PR No. 1569

I. HEMANATH

Under Secretary to Government

HEALTH AND FAMILY WELFARE DEPA...

ಕಂದಾಯ ಸಚಿವಾಲಯ

ವಿಷಯ: ಶ್ರೀಮತಿ ಖಾಜಿ ನಫೀಸಾ ಮುತಾಲಿಬ್, ಹಿಂದಿನ ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ ಪ್ರಸ್ತುತ ವಿಶೇಷ ತಹಶೀಲ್ದಾರ್, ಕೆಯುಐಡಿಎಫ್‌ಸಿ, ಬಳ್ಳಾರಿ ಅವರ ವಿರುದ್ಧ ಆರೋಪಗಳ ಕುರಿತು.

ಓದಲಾಗಿದೆ: 1) ಜಿಲ್ಲಾಧಿಕಾರಿ, ಬಳ್ಳಾರಿ, ಅವರ ಪತ್ರ ಸಂಖ್ಯೆ/ ಸಿಬ್ಬಂದಿ-1/53/2010-11 ದಿನಾಂಕ:09-08-2011

2) ಸರ್ಕಾರದ ಕಾರಣ ಕೇಳುವ ನೋಟಿಸು ಸಂಖ್ಯೆ:ಕಂ.ಇ.61 ಎಡಿಇ 2011 ದಿನಾಂಕ:10-10-2011

ಪ್ರಸ್ತಾವನೆ:

ಶ್ರೀಮತಿ ಖಾಜಿ ನಫೀಸಾ ಮುತಾಲಿಬ್, ಹಿಂದಿನ ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ, ಇಲ್ಲಿ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ತಾಲ್ಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಸಿಬ್ಬಂದಿ ವರ್ಗದವರಿಗೆ ವಿನಾಕಾರಣ ಮಾನಸಿಕ ಹಿಂಸೆ ಹಾಗೂ ದೌರ್ಜನ್ಯದಿಂದ ತೊಂದರೆ ಕೊಡುತ್ತಿದ್ದು, ಅವರು ಹೇಳಿದಷ್ಟು ಹಣ ಕೊಡದಿದ್ದರೆ ಅವರಿಗೆ ತೊಂದರೆ ಕೊಡುವುದು, 2 ತಿಂಗಳಾದರೂ ವೇತನ ಬಿಲ್ಲುಗಳು ಸಹಿ ಮಾಡದಿರುವುದು, ಜನಸ್ಪಂದನ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಹಣ ದುರ್ಬಳಕೆ ಅವರ ಅಧೀನ ಸಿಬ್ಬಂದಿಗಳಿಗೆ ಮಾನಸಿಕ ಹಿಂಸೆ, ಕಿರುಕುಳ ದೌರ್ಜನ್ಯ ಹಾಗೂ ಅವಾಚ್ಯ ಶಬ್ದಗಳಿಂದ ಬೈಯುವುದು ಚುನಾವಣಾ ಕೆಲಸ ನಿರ್ವಹಿಸಿದ್ದಕ್ಕೆ ಗೌರವಧನ ನೀಡದಿರುವ ಬಗ್ಗೆ ಹಗರಿಬೊಮ್ಮನಹಳ್ಳಿ ಸಿಬ್ಬಂದಿಯವರ ಮನವಿಯ ಆಧಾರದ ಮೇಲೆ ಜಿಲ್ಲಾಧಿಕಾರಿ, ಬಳ್ಳಾರಿ ಅವರು ಆರೋಪಣಾ ಪಟ್ಟಿ ಅನುಬಂಧ 1ರಿಂದ 4 ರವರೆಗೆ ತಯಾರಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಿ, ಆರೋಪಿತ ಅಧಿಕಾರಿಯು ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆರೋಪಿತ ಅಧಿಕಾರಿಯ ಮೇಲೆ ಮಾಡಲಾದ ಆರೋಪಗಳ ಬಗ್ಗೆ ವಿವರವಾದ ಹೇಳಿಕೆಯನ್ನು ಸಲ್ಲಿಸಿ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗ್ರಾಮ ಲೆಕ್ಕಾಧಿಕಾರಿಗಳು, ಜಿಲ್ಲಾಧಿಕಾರಿ, ಬಳ್ಳಾರಿ ಅವರು ನಿಯೋಜಿಸಿದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸದೇ ತಮ್ಮ ತಮ್ಮ ಅನುಕೂಲದ ಪ್ರಕಾರ ಇತರೆ ಗ್ರಾಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಜಿಲ್ಲಾಧಿಕಾರಿ ಆದೇಶದಂತೆ ಕರ್ತವ್ಯ ನಿರ್ವಹಿಸಲು ಚಾರ್ಜನ್ನು ವಹಿಸಲು ಆದೇಶವನ್ನು ನೀಡಿದಾಗ, ಈ ಆದೇಶವನ್ನು ಪ್ರತಿಭಟಿಸಿರುತ್ತಾರೆ. ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದಿನ ಜಿಲ್ಲಾಧಿಕಾರಿ ಗ್ರಾಮ ಲೆಕ್ಕಾಧಿಕಾರಿಗಳು ಅನುಮತಿ ಪಡೆಯದೆ ಕೇಂದ್ರ ಸ್ಥಾನವನ್ನು ಬಿಟ್ಟಿರುವುದಕ್ಕಾಗಿ ಅವರಿಗೆ ಬುದ್ಧಿ ಹೇಳಿ ಕಳುಹಿಸಿ, ಅಂದಿನ ಜಿಲ್ಲಾಧಿಕಾರಿಗಳು ಈ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತಾರೆ. ಈ ಘಟನೆಯ ನಂತರ ಎಲ್ಲಾ ಸಿಬ್ಬಂದಿ ವರ್ಗದವರೊಂದಿಗೆ ಯಾವುದೇ ಮನಸ್ತಾಪ ಇಲ್ಲದೇ ಒಂದೂವರೆ ವರ್ಷ ಕಾಲ ಸುಗಮವಾಗಿ ತಾಲ್ಲೂಕಿನ ಕಾರ್ಯವನ್ನು ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ. ತದನಂತರ ಅಪರ ಜಿಲ್ಲಾಧಿಕಾರಿ ಅವರು ಮತ್ತೆ ಈ ಕಡತವನ್ನು ತೆರೆದು ವಿಚಾರಣೆ ಪ್ರಾರಂಭಿಸಿರುವುದಾಗಿ ವಿಶದವಾಗಿ ತಿಳಿಸಿ, ಅವರ ಮೇಲಿನ ಎಲ್ಲಾ ಆರೋಪಗಳ ಬಗ್ಗೆ ಯಾವುದೇ ದಾಖಲೆಗಳು ಲಗತ್ತಿಸಿರುವುದಿಲ್ಲ ಹಾಗೂ ಅನುಬಂಧ-4ರಲ್ಲಿ ಆರೋಪಗಳ ಕುರಿತು ಯಾವುದೇ ಸಾಕ್ಷಿಗಳನ್ನು ನಮೂದಿಸದಿರುವುದರಿಂದ ಆಡಳಿತಾತ್ಮಕ ದೃಷ್ಟಿಯಿಂದ ತೆಗೆದುಕೊಂಡಿರುವ ಕ್ರಮಗಳಿಗೆ ಭಾವುಕ ವೇಗದಲ್ಲಿ ಪ್ರತಿಭಟಿಸಿರುವ ಅವರ ಸಿಬ್ಬಂದಿ ವರ್ಗ ಮತ್ತು ಅವರಿಗೂ ಕ್ಷಮಿಸಿ ಮುಂದಿನ ಶಿಸ್ತಿನ ಕ್ರಮವನ್ನು ಕೈಬಿಡಲು ಕೋರಿರುತ್ತಾರೆ.

ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿತ ಅಧಿಕಾರಿ ನೀಡಿರುವ ಹೇಳಿಕೆಯನ್ನು ಸರ್ಕಾರವು ಪರಿಶೀಲಿಸಿ, ಶ್ರೀಮತಿ ಖಾಜಿ ನಫೀಸಾ ಮುತಾಲಿಬ್, ಹಿಂದಿನ ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ, ಅವರುಗಳ ಮೇಲಿನ ಆರೋಪದಿಂದ ಮುಕ್ತಗೊಳಿಸಲು ನಿರ್ಧರಿಸಿರುವುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 61 ಎಡಿಇ 2011, ಬೆಂಗಳೂರು, ದಿನಾಂಕ:05-06-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀಮತಿ ಖಾಜಿ ನಫೀಸಾ ಮುತಾಲಿಬ್, ಹಿಂದಿನ ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ, ಪ್ರಸ್ತುತ ವಿಶೇಷ ತಹಶೀಲ್ದಾರ್, ಕೆಯುಐಡಿಎಫ್‌ಸಿ, ಬಳ್ಳಾರಿ ಅವರು ತಮ್ಮ ಅಧೀನ ಸಿಬ್ಬಂದಿ ವರ್ಗದವರೊಂದಿಗೆ ಸೌಜನ್ಯವಾಗಿ ವರ್ತಿಸುವಂತೆ ಸೂಚಿಸಿ ಹಾಗೂ ಇನ್ನು ಮುಂದೆ ಆ ರೀತಿಯ ಪ್ರಕರಣ ಮರುಕಳಿಸದಂತೆ ಎಚ್ಚರಿಕೆ ನೀಡಿ, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ ರಾಮಲಿಂಗಯ್ಯ

ಪಿ.ಆರ್. 1596 ಸರ್ಕಾರದ ಅಧೀನ ಕಾರ್ಯದರ್ಶಿಗಳು

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಕಂಇ 213 ಮುನೋಮು 2011 ಬೆಂಗಳೂರು, ದಿನಾಂಕ: 04-06-2012

ಸರ್ಕಾರದ ಆದೇಶ ಸಂಖ್ಯೆ: ಕಂಇ 213 ಮುನೋಮು 2011 ದಿನಾಂಕ: 13-01-2012ರ ಆದೇಶ ಭಾಗದ ಕಂಡಿಕೆ 2ರಲ್ಲಿ ಪರಿಷ್ಕೃತ ದರವನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು:

ವರ್ಷ	ಸಿಎಂಎಸ್ ಕಂಪ್ಯೂಟರ್ಸ್ ನಿರ್ವಹಿಸುವ ಬೆಂಗಳೂರು ಜಿಲ್ಲೆ	ಸಿಎಂಎಸ್ ಕಂಪ್ಯೂಟರ್ಸ್ ನಿರ್ವಹಿಸುವ ಬೆಂಗಳೂರು ಹೊರತುಪಡಿಸಿದ ಜಿಲ್ಲೆಗಳು	ಇಸಿಐಎಲ್ ನಿರ್ವಹಿಸುವ ಜಿಲ್ಲೆಗಳು	ಮೆ: ಸಿ-ಡಾಕ್ ರವರಿಗೆ ಪಾವತಿಸಬೇಕಾಗುವ ದರಗಳು
16ನೇ ಅಕ್ಟೋಬರ್, 2011 ರಿಂದ 15ನೇ ಜುಲೈ 2012	ರೂ.18/-	ರೂ. 27.50	ರೂ. 28/-	ನಾಲ್ಕು (4)ಜನ ಇಂಜನಿಯರುಗಳಿಗೆ ತಲಾ ರೂ. 90.000 ಮತ್ತು ಅನ್ವಯಿಸುವ ತೆರಿಗೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಕೆ ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ನೋ&ಮು)

ಪಿ.ಆರ್. 1597

HOME SECRETARIAT

Sub : Reimbursing the cost of medical treatment to the members of the Media, private citizens, Policemen and the Advocates who were injured in the violence that erupted on 2nd March, 2012 in the City Civil Court Complex at Bangalore.

Read : Letter No. MAG(1) CR4/2011-12 dated: 23-04-2012 received from the Deputy Commissioner, Bangalore District Bangalore.

Preamble :

On 2nd March, 2012, due to sudden eruption of violence between the Media persons and Advocates followed by Police lathi charge a number of Police-men, Media-persons and Advocates were injured. During the incident several two Wheelers and four wheelers were set on fire and burnt.

The Hon'ble Chief Ministers had announced that the Government would reimburse the expenditure incurred on the medical treatment of the injured in the violence and the owners of the burnt vehicals would also be eligible to receive appropriate compensation from the Government.

In the latter read above, the Deputy Comissioner Bangalore has stated that 24 applications have been received so far, claiming compensation towards medical expenses and also towards burnt and destroyed vehicals. out of 24 applications,16 appllications have been considered and an estimated amount of Rs.14,43,075/- (Rupes Fourteen lakhs forty three thousand and seventy five only) is required. 8 more applications are pending scrutiny for want of proper documents and details.

In all, an amount of Rs. 20,00,000/- (Rupees Twenty Lakhs only) is requested to be released towards compensation for the applications received. Hence this order.

GOVERNMENT ORDER NO. HD 10 CRR 2012 BANGALORE, DATED 06/06/2012.

Under the circumstance explained above, Government are pleased to release a sum of Rs. 20,00,000/- (Rupees Twenty Lakhs only) under the Head of Account "2235-60-200-3-01-100 General Relief to persons Affected by Riots-Financial Assistance/Relief " towards reimbursement of the expenditure incurred on medical treatment to the persons who were injured in the violence and police lathi charge on 2nd March, 2012 in the City Civil Court Complex, Bangalore. The Deputy Commissioner, Bangalore District, Bangalore is hereby authorized to sanction appropriate medical relief as well as the compensation for the burnt vehicals as per rules, after scrutiny of claims supported by adequate evidence and documents. The amount shall be utilized properly for the purpose released during the current financial year and the Utilisation Certificate with proper break-up details be submitted to Government without fail.

This order issues with the concurrence of the Finance Department vide their U.O. Note No. PS(B&R)13389 LMS 2012 dated: 05-06-2012.

By Order and in the name of the Governor of Karnataka,
Prakash Y.K
Under Secretary to Government
Home Department (Law & Order)

P.R. 1598

ಒಳಾಡಳಿತ ಸಚಿವಾಲಯ

ವಿಷಯ: 2012-13 ನೇ ಸಾಲಿನ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಅಧಿಕಾರಿ/ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 ದಿ:24-08-2009.
2) ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009(ಭಾ-2)ದಿ:13-01-2011.
3) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 4 ಎಸ್‌ಟಿಆರ್ 2001 ದಿ:22-11-2001.
4) ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 (ಭಾಗ-2) ದಿ:21-05-2011.
5) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 12 ಸೇನೌವ 2012 ದಿ:28-04-2012.
6) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 12 ಸೇನೌವ 2012 ದಿ:29-05-2012.

ಪ್ರಸ್ತಾವನೆ:

ಮೇಲೆ (4) ರಲ್ಲಿ ಓದಲಾದ ದಿನಾಂಕ 21-05-2011ರ ಸರ್ಕಾರಿ ಆದೇಶದಲ್ಲಿ ಪೊಲೀಸ್ ಅಧಿಕಾರಿ ಮತ್ತು ಪೊಲೀಸ್ ಸಿಬ್ಬಂದಿಗಳ ವರ್ಗಾವಣೆ ಕುರಿತಂತೆ ವಿಸ್ತೃತವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ.

2012-13ನೇ ಸಾಲಿನಲ್ಲಿ ಪೊಲೀಸ್ ಸಿಬ್ಬಂದಿ ಮಂಡಳಿ (Police Establishment board)ಯ ವ್ಯಾಪ್ತಿಗೊಳಪಡುವ ಪೊಲೀಸು ಸಿಬ್ಬಂದಿಯನ್ನು ಹೊರತುಪಡಿಸಿ ಸಾಮಾನ್ಯ ವರ್ಗಾವಣೆಯನ್ನು ದಿನಾಂಕ: 25-05-2012ರ ವರೆಗೆ ಮಾಡುವ ಬಗ್ಗೆ ಮೇಲೆ ಓದಲಾದ (5)ರ ಆದೇಶದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆದೇಶಿಸಿದೆ.

ತದನಂತರ ಮೇಲೆ ಓದಲಾದ (6)ರ ಆದೇಶದಲ್ಲಿ ವರ್ಗಾವಣೆ ಅವಧಿಯನ್ನು ಮತ್ತೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಿ ದಿನಾಂಕ 15-06-2012 ರವರೆಗೆ ಮಾಡಬಹುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆದೇಶಿಸಿದೆ.

ಈ ಹಿನ್ನೆಲೆಯಲ್ಲಿ ಪೊಲೀಸ್ ಸಿಬ್ಬಂದಿ ಮಂಡಳಿಯ (Police Establishment Board) ವ್ಯಾಪ್ತಿಗೊಳಪಡುವ ಪೊಲೀಸ್ ಇಲಾಖೆಯಲ್ಲಿನ ಅಧಿಕಾರಿ / ಸಿಬ್ಬಂದಿಗಳ ವರ್ಗಾವಣೆಗಳ ಬಗ್ಗೆ ಮೇಲೆ (5) ರಲ್ಲಿ ಓದಲಾದ ದಿನಾಂಕ 28-04-2012ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಆದೇಶದ ಮಾರ್ಗಸೂಚಿಗಳನ್ವಯ ಅನುಸರಿಸಿ ವರ್ಗಾವಣೆಗಳನ್ನು ಮಾಡುವ ಬಗ್ಗೆ ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 148 ಪೊಸಇ 2012 ಬೆಂಗಳೂರು, ದಿನಾಂಕ: 02/06/2012

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ ದಿನಾಂಕ 28-04-2012ರ ಸರ್ಕಾರಿ ಆದೇಶದಲ್ಲಿ ನಮೂದಿಸಿರುವ ಅಂಶಗಳನ್ನು ಆಧರಿಸಿ ಪೊಲೀಸ್ ಇಲಾಖೆಯಲ್ಲಿ 2012-13ನೇ ಸಾಲಿನಲ್ಲಿ ಪೊಲೀಸ್ ಸಿಬ್ಬಂದಿ ಮಂಡಳಿಯ (Police Establishment Board)ಯ ವ್ಯಾಪ್ತಿಗೊಳಪಡುವ ಪೊಲೀಸ್ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳ ವರ್ಗಾವಣೆಗಳನ್ನು ಈ ಕೆಳಕಂಡ ಸಂದರ್ಭಗಳಲ್ಲಿ ಮಾಡಬಹುದಾಗಿದೆ.

1) ಖಾಲಿ ಇರುವ, ಆಡಳಿತಾತ್ಮಕ ಹಿತದೃಷ್ಟಿಯಿಂದ, ಅತ್ಯಾವಶ್ಯಕವಾಗಿ ತುಂಬಬೇಕಾದ ಹುದ್ದೆಗಳ ಪ್ರಕರಣಗಳು, ತತ್ಪರಿಣಾಮವಾಗಿ ಖಾಲಿಯಾಗುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕರಣಗಳು;
2) ಪತಿ-ಪತ್ನಿ ಪ್ರಕರಣಗಳು;
3) ಪರಸ್ಪರ ವರ್ಗಾವಣೆಗಳು- ಸಂಬಂಧಿಸಿದ ಸಿಬ್ಬಂದಿಯ ಒಪ್ಪಿಗೆ ಪತ್ರದೊಂದಿಗೆ;
4) ತೀವ್ರತರವಾದ ಖಾಯಿಲೆಯಿಂದ ಬಳಲುತ್ತಿರುವ ನೌಕರರ / ನೌಕರರ ಅವಲಂಬಿತರ / ತಂದೆ ತಾಯಿಯವರ ವೈದ್ಯಕೀಯ ಚಿಕಿತ್ಸೆ / ಆರೋಗ್ಯದ ಹಿತದೃಷ್ಟಿಯಿಂದ ಈ ಮಾಡಬೇಕಾದ ವರ್ಗಾವಣೆಗಳು;
5) ಸಾರ್ವಜನಿಕರಿಂದ ಸ್ವೀಕೃತವಾದ ದೂರುಗಳ ಮೇರೆಗೆ ಇಲಾಖಾ ವಿಚಾರಣೆಗೊಳಪಟ್ಟ ಪ್ರಕರಣಗಳು;
6) ಮುಂಬಡ್ತಿಯಿಂದ ತುಂಬಬೇಕಾದ ಖಾಲಿ ಹುದ್ದೆಗಳಿಗೆ ಮಾತ್ರ.
7) ಮುಂದಿನ ಎರಡು ವರ್ಷಗಳಲ್ಲಿ ನಿವೃತ್ತಿ ಹೊಂದಲಿರುವ ಸಿಬ್ಬಂದಿಯ ಕೋರಿಕೆಗಳು.

2. ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಅಧಿಕಾರಿ / ನೌಕರರ ನಿಯೋಜನೆಯನ್ನು ವರ್ಗಾವಣೆ ಅವಧಿಯಲ್ಲಿ ಮಾತ್ರ ಮಾಡತಕ್ಕದ್ದು. ಸಂಬಂಧಿತ ಇಲಾಖೆಯ ಸ್ಪಷ್ಟ ಕೋರಿಕೆಯಿಲ್ಲದೇ ನಿಯೋಜನೆ ಮೇಲೆ ನೇಮಕ ಮಾಡತಕ್ಕದ್ದಲ್ಲ.

3. ಯಾವುದೇ ಅಧಿಕಾರಿ / ನೌಕರರು ಕಡ್ಡಾಯ ನಿರೀಕ್ಷಣೆ ಸಂದಂರ್ಭಗಳು ಉದ್ಭವವಾಗದ ರೀತಿಯಲ್ಲಿ ವಗಾವಣೆಗಳನ್ನು ಮಾಡತಕ್ಕದ್ದು.

4. ಪ್ರತಿ ವೃಂದದ ವರ್ಗಾವಣೆಗಳು ವೃಂದ ಬಲದ ಶೇಕಡಾ 20 ರಿಂದ 25 ರಷ್ಟು ಮೀರತಕ್ಕದ್ದಲ್ಲ.

ದಿನಾಂಕ 21-05-2011ರ ಸರ್ಕಾರದ ಆದೇಶದಲ್ಲಿ ನಮೂದಿಸಿದ ಷರತ್ತುಗಳೊಂದಿಗೆ ಪೊಲೀಸ್ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳ ವರ್ಗಾವಣೆ ಪ್ರಕ್ರಿಯೆಗಳನ್ನು ಪೊಲೀಸ್ ಸಿಬ್ಬಂದಿ ಮಂಡಳಿಯ (Police Establishment Board) ಶಿಫಾರಸ್ಸುಗಳ ಮೇಲೆ ಈ ಆದೇಶದ ದಿನಾಂಕದಿಂದ ದಿನಾಂಕ 15-06-2012ರ ಅವಧಿಯಲ್ಲಿ ಮಾಡತಕ್ಕದ್ದು. ಈ ಅವಧಿಯ ನಂತರ ಯಾವುದೇ ವರ್ಗಾವಣೆ ಮಾಡಬೇಕಾದಲ್ಲಿ ಸಂಬಂಧಿತ ಪೊಲೀಸ್ ಸಿಬ್ಬಂದಿ ಮಂಡಳಿಯ (Police Establishment Board) ಶಿಫಾರಸ್ಸಿನೊಂದಿಗೆ ಮಾನ್ಯ ಮುಖ್ಯಮಂತ್ರಿಯವರ ಪೂರ್ವಾನುಮೋದನೆಯನ್ನು ಕಡತದಲ್ಲಿ ಪಡೆದ ನಂತರವೇ ಮಾಡತಕ್ಕದ್ದು.

ಉಳಿದಂತೆ ಪೊಲೀಸ್ ಸಿಬ್ಬಂದಿಗಳ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: ಒಇ 60 ಪೊಸಇ 2009 (ಭಾಗ-2) ದಿನಾಂಕ 21-05-2011 ಆದೇಶದಲ್ಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಪೊಲೀಸ್ ಇಲಾಖೆಯ ಲಿಪಿಕ ನೌಕರರರಿಗೆ ಸಂಬಂಧಿಸಿದಂತೆ ದಿನಾಂಕ 28-04-2012ರ ಸರ್ಕಾರಿ ಆದೇಶದಂತೆ ವರ್ಗಾವಣೆಗಳನ್ನು ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1599

ಜಲಸಂಪನ್ಮೂಲ ಸಚಿವಾಲಯ

ವಿಷಯ: ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಕಟಾವೀರನಹಳ್ಳಿ ಗ್ರಾಮದ ಹತ್ತಿರ ಕಳ್ಳಂಬೆಳ್ಳ ಕೆರೆಯ ಪೋಷಕ ನಾಲೆಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಎ.ಐ.ಬಿ.ಪಿ ಕಾರ್ಯಕ್ರಮದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 12 ಮಸಾವಿ (ತಾಂತ್ರಿಕ) 2011(13) ದಿನಾಂಕ: 05.03.2011

2) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರ ಪ್ರಸ್ತಾವನೆ.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಕಟಾವೀರನಹಳ್ಳಿ ಗ್ರಾಮದ ಹತ್ತಿರ ಕಳ್ಳಂಬೆಳ್ಳ ಕೆರೆಯ ಪೋಷಕ ನಾಲೆಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ರೂ 550.00 ಲಕ್ಷ ಮೊತ್ತದ ಅಂದಾಜಿಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿ ಭಾರತ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಈ ಪ್ರಸ್ತಾವನೆಗೆ ಭಾರತ ಸರ್ಕಾರದ ಪತ್ರದ ಸಂಖ್ಯೆ 10-23/2010-MI (Pt.V) dated 24.03.2011 ರಲ್ಲಿ ಅನುಮೋದನೆ ದೊರಕಿರುತ್ತದೆ. ಈ ಕಾಮಗಾರಿಯ ಅಂದಾಜಿಗೆ ದಿನಾಂಕ 04.12.2010 ರಂದು ನಡೆದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಸಭೆಯಲ್ಲಿ ತೀರುವಳಿ ದೊರಕಿರುತ್ತದೆ.

ಮೇಲ್ಕಂಡ, ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದ್ದು ಉದ್ದೇಶಿತ ಬ್ಯಾರೇಜಿನ ಉದ್ದ-49.00 ಮೀ., 1.70ಮೀ x 5.00ಮೀ ಅಳತೆಯ 20 ಕಿಂಡಿಗಳು ನೀರಿನ ಶೇಕರಣಾ ಸಾಮರ್ಥ್ಯ ಒಟ್ಟು-0.63 ದಶಲಕ್ಷ ಘನ ಮೀಟರ್ ರಸ್ತೆ ಅಗಲ-5.50 ಮೀಟರ್ ಆಗಿರುತ್ತದೆ. ಫಲಾನುಭವಿ ಗ್ರಾಮಗಳು-ಕಾತವೀರನಹಳ್ಳಿ, ಮುಡಿಮಡಗು, ಯಲದಬಾಗಿ ಆಗಿದ್ದು ಈ ಯೋಜನೆಯಿಂದ 280 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಯೋಜನೆಯ ಲಾಭ ವೆಚ್ಚದ ಅನುಪಾತ 1.16 ಆಗಿರುತ್ತದೆ.

ರೂ. 550.00 ಲಕ್ಷಗಳ ಅಂದಾಜು ಮೊತ್ತದ ಈ ಕಾಮಗಾರಿಯ ಅಂದಾಜಿಗೆ ಲೆಕ್ಕ ಶಿರ್ಷಿಕೆ "4702-00-101-1-10-139 ಎ.ಐ.ಬಿ.ಪಿ ಕಾಮಗಾರಿಗಳು" ರಡಿಯಲ್ಲಿ ಈ ಹಿಂದೆ ನೀಡಿರುವ ಆಡಳಿತಾತ್ಮಕ ಅನುಮೋದನೆಯನ್ನು ಸ್ಥಿರಗೊಳಿಸಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 96 ಮಸಾವಿ 2011(3)(ತಾಂತ್ರಿಕ) ಬೆಂಗಳೂರು, ದಿನಾಂಕ: 05ಜೂನ್ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಕಟಾವೀರನಹಳ್ಳಿ ಗ್ರಾಮದ ಹತ್ತಿರ ಕಳ್ಳಂಬೆಳ್ಳ ಕೆರೆಯ ಪೋಷಕ ನಾಲೆಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ರೂ. 550.00 ಲಕ್ಷ ಮೊತ್ತದ ಅಂದಾಜಿಗೆ (ರೂ. ಐದುನೂರ ಐವತ್ತು ಲಕ್ಷಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಸರ್ಕಾರವು ಈ ಹಿಂದೆ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಯನ್ನು ಸ್ಥಿರಗೊಳಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ ಲೋಇ-622-ಅಕೋ-1/11 ದಿನಾಂಕ: 20.08.2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1600

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಹಾಲಜ್ಜನಪಾಳ್ಯ ಗ್ರಾಮದ ಹತ್ತಿರ ಸುವರ್ಣಮುಖಿ ನದಿಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಎ.ಐ.ಬಿ.ಪಿ ಕಾರ್ಯಕ್ರಮದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 12 ಮಸಾವಿ (ತಾಂತ್ರಿಕ) 2011(11) ದಿನಾಂಕ: 05.03.2011.
2) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರ ಪ್ರಸ್ತಾವನೆ.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಹಾಲಜ್ಜನಪಾಳ್ಯ ಗ್ರಾಮದ ಹತ್ತಿರ ಸುವರ್ಣಮುಖಿ ನದಿಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ರೂ 685.00 ಲಕ್ಷ ಮೊತ್ತದ ಅಂದಾಜಿಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿ ಭಾರತ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಈ ಪ್ರಸ್ತಾವನೆಗೆ ಭಾರತ ಸರ್ಕಾರದ ಪತ್ರದ ಸಂಖ್ಯೆ F-No 10-23/2010-MI (Pt. V) dated 24.03.2011 ರಲ್ಲಿ ಅನುಮೋದನೆ ದೊರಕಿರುತ್ತದೆ. ಈ ಕಾಮಗಾರಿಯ ಅಂದಾಜಿಗೆ ದಿನಾಂಕ 04.12.2010 ರಂದು ನಡೆದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಸಭೆಯಲ್ಲಿ ತೀರುವಳಿ ದೊರಕಿರುತ್ತದೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದ್ದು ಉದ್ದೇಶಿತ ಬ್ಯಾರೇಜಿನ ಉದ್ದ-126.50ಮೀ., 1.70ಮೀ x 3.00ಮೀ ಅಳತೆಯ 52 ಕಿಂಡಿಗಳು, ನೀರಿನ ಶೇಕರಣಾ ಸಾಮರ್ಥ್ಯ ಒಟ್ಟು-0.93 ದಶಲಕ್ಷ ಘನ ಮೀಟರ್, ರಸ್ತೆ ಅಗಲ-5.50 ಮೀಟರ್ ಆಗಿರುತ್ತದೆ. ಫಲಾನುಭವಿ ಗ್ರಾಮಗಳು- ಹಾಲಜ್ಜನಪಾಳ್ಯ ಹುಣಿಸೆಹಳ್ಳಿ ಆಗಿದ್ದು ಈ ಯೋಜನೆಯಿಂದ 380 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಯೋಜನೆಯ ಲಾಭ ವೆಚ್ಚದ ಅನುಪಾತ 1:25 ಆಗಿರುತ್ತದೆ.

ರೂ. 685.00 ಲಕ್ಷಗಳ ಅಂದಾಜು ಮೊತ್ತದ ಈ ಕಾಮಗಾರಿಯ ಅಂದಾಜಿಗೆ ಲೆಕ್ಕ ಶೀರ್ಷಿಕೆ "4702-00-101-1-10-139 ಎ.ಐ.ಬಿ.ಪಿ ಕಾಮಗಾರಿಗಳು" ರಡಿಯಲ್ಲಿ ಈ ಹಿಂದೆ ನೀಡಿರುವ ಆಡಳಿತಾತ್ಮಕ ಅನುಮೋದನೆಯನ್ನು ಸ್ಥಿರಗೊಳಿಸಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 96 ಮಸಾವಿ 2011(2)(ತಾಂತ್ರಿಕ) ಬೆಂಗಳೂರು, ದಿನಾಂಕ: 05 ಜೂನ್ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಹಾಲಜ್ಜನಪಾಳ್ಯ ಗ್ರಾಮದ ಹತ್ತಿರ ಸುವರ್ಣಮುಖಿ ನದಿಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ರೂ. 685.00 ಲಕ್ಷ ಮೊತ್ತದ ಅಂದಾಜಿಗೆ (ರೂ. ಆರು ನೂರ ಎಂಭತ್ತೈದು ಲಕ್ಷಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಸರ್ಕಾರವು ಈ ಹಿಂದೆ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಯನ್ನು ಸ್ಥಿರಗೊಳಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ ಲೋಇ-622-ಅಕೋ-1/11 ದಿನಾಂಕ: 20.08.2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್. 1601

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಹೆರೂರು ಗ್ರಾಮದ ಹತ್ತಿರ ಸುವರ್ಣಮುಖಿ ನದಿಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಎ.ಐ.ಬಿ.ಪಿ ಕಾರ್ಯಕ್ರಮದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 12 ಮಸಾವಿ (ತಾಂತ್ರಿಕ) 2011(12) ದಿನಾಂಕ: 05.03.2011.
2) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರ ಪ್ರಸ್ತಾವನೆ.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಹೆರೂರು ಗ್ರಾಮದ ಹತ್ತಿರ ಸುವರ್ಣಮುಖಿ ನದಿಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ರೂ 665.00 ಲಕ್ಷ ಮೊತ್ತದ ಅಂದಾಜಿಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿ ಭಾರತ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಈ ಪ್ರಸ್ತಾವನೆಗೆ ಭಾರತ ಸರ್ಕಾರದ ಪತ್ರದ ಸಂಖ್ಯೆ 10-23/2010-MI (Pt. V) dated 24.03.2011 ರಲ್ಲಿ ಅನುಮೋದನೆ ದೊರಕಿರುತ್ತದೆ. ಈ ಕಾಮಗಾರಿಯ ಅಂದಾಜಿಗೆ ದಿನಾಂಕ 04.12.2010 ರಂದು ನಡೆದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಸಭೆಯಲ್ಲಿ ತೀರುವಳಿ ದೊರಕಿರುತ್ತದೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದ್ದು ಉದ್ದೇಶಿತ ಬ್ಯಾರೇಜಿನ ಉದ್ದ-116.70ಮೀ., 1.70ಮೀ x 3.00ಮೀ ಅಳತೆಯ 48 ಕಿಂಡಿಗಳು, ನೀರಿನ ಶೇಕರಣಾ ಸಾಮರ್ಥ್ಯ ಒಟ್ಟು-0.93 ದಶಲಕ್ಷ ಘನ ಮೀಟರ್, ರಸ್ತೆ ಅಗಲ-5.50 ಮೀಟರ್ ಆಗಿರುತ್ತದೆ. ಫಲಾನುಭವಿ ಗ್ರಾಮಗಳು- ಹೆರೂರು ಮುದ್ದೇನಹಳ್ಳಿ, ಹುಣಿಸೇಹಳ್ಳಿ ಆಗಿದ್ದು ಈ ಯೋಜನೆಯಿಂದ 350 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಯೋಜನೆಯ ಲಾಭ ವೆಚ್ಚದ ಅನುಪಾತ 1:21 ಆಗಿರುತ್ತದೆ.

ರೂ. 665.00 ಲಕ್ಷಗಳ ಅಂದಾಜು ಮೊತ್ತದ ಈ ಕಾಮಗಾರಿಯ ಅಂದಾಜಿಗೆ ಲೆಕ್ಕ ಶೀರ್ಷಿಕೆ "4702-00-101-1-10-139 ಎ.ಐ.ಬಿ.ಪಿ ಕಾಮಗಾರಿಗಳು" ರಡಿಯಲ್ಲಿ ಹಿಂದೆ ಈ ನೀಡಿರುವ ಆಡಳಿತಾತ್ಮಕ ಅನುಮೋದನೆಯನ್ನು ಸ್ಥಿರಗೊಳಿಸಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 96 ಮಸಾವಿ 2011(2)(ತಾಂತ್ರಿಕ)

ಬೆಂಗಳೂರು, ದಿನಾಂಕ: 05 ಜೂನ್ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಹೆರೂರು ಗ್ರಾಮದ ಹತ್ತಿರ ಸುವರ್ಣಮುಖಿ ನದಿಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಪಿಕಪ್ ನಿರ್ಮಾಣ ಕಾಮಗಾರಿಯ ರೂ. 665.00 ಲಕ್ಷ ಮೊತ್ತದ ಅಂದಾಜಿಗೆ (ರೂ. ಆರು ನೂರ ಅರವತ್ತೈದು ಲಕ್ಷಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಸರ್ಕಾರವು ಈ ಹಿಂದೆ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಯನ್ನು ಸ್ಥಿರಗೊಳಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ ಲೋಇ-622-ಅಕೋ-1/11 ದಿನಾಂಕ: 20.08.2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1602

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ರಾಯಚೂರು ಜಿಲ್ಲೆ, ಹಾಗೂ ತಾಲ್ಲೂಕಿನ ವಡವಟಿ-1,2,3, ಬಿಜ್ಜೇನಗೇರಾ 1,2 ಸಿದ್ರಾಮಪುರ-1, ಚಿಕ್ಕಸುಗೂರು ಗ್ರಾಮಗಳ ಹತ್ತಿರದಲ್ಲಿ ಏತ ನೀರಾವರಿ ಯೋಜನೆ ನಿರ್ಮಿಸಿ ಫಲಾನುಭವಿಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ) ವಲಯ/ಬಿಜೆಪಿ/ಸ.ಇಂ-7/ಪ್ಯಾಕೇಜ್-8/2011-12/1558, ದಿನಾಂಕ: 19.03.2012.

ಪ್ರಸ್ತಾವನೆ:

ರಾಯಚೂರು ಜಿಲ್ಲೆ ಹಾಗೂ ತಾಲ್ಲೂಕಿನ ವಡವಟಿ-1,2,3, ಬಿಜ್ಜನಗೇರಾ 1,2 ಸಿದ್ರಾಮಪುರ-1, ಚಿಕ್ಕಸುಗೂರು ಗ್ರಾಮಗಳ ಹತ್ತಿರದಲ್ಲಿ ಏತ ನೀರಾವರಿ ಯೋಜನೆ ನಿರ್ಮಿಸಿ ಫಲಾನುಭವಿಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಆರು ಕಾಮಗಾರಿಗಳ ಒಟ್ಟು ರೂ. 35.00 ಲಕ್ಷಗಳ ಅಂದಾಜು ಪಟ್ಟಿಗೆ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಕುಷ್ಟಗಿ ಇವರ ಮಂಜೂರಾತಿ ಸಂಖ್ಯೆ 46/11-12, 43/11-12, 42/11-12, 41/11-12, 45/11-12, 44/11-12 ಮತ್ತು 58/11-12 ರಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಪ್ಯಾಕೇಜ್ ಆಧಾರದ ಮೇಲೆ ಕುಷ್ಟಗಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	28.01.2012
ವಿಜಯ ಕರ್ನಾಟಕ ದಿನ ಪತ್ರಿಕೆ	31.01.2012

ಇ- ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 31,37,924/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ ಮೆಸರ್ಸ್	ಟೆಂಡರ್ ನಲ್ಲಿ ಗುತ್ತಿಗೆದಾರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಕೆ. ರವೀಂದ್ರ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು	40,94,485/-	30.48 ಹೆಚ್ಚು

ಮೇಲ್ಕಂಡಂತೆ ಶ್ರೀ ಕೆ. ರವೀಂದ್ರ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 30.48 ರಷ್ಟು ಹೆಚ್ಚಾಗಿರುತ್ತದೆ. ಸದರಿ

ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 12.90% ಹೆಚ್ಚಿನ ದರಗಳಿಗೆ ಅಂದರೆ ರೂ. 35,42,716/- ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 29 ಏನೀಯೋ 2012(ತಾಂತ್ರಿಕ),

ಬೆಂಗಳೂರು, ದಿನಾಂಕ: 04 ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆ, ಹಾಗೂ ತಾಲ್ಲೂಕಿನ ವಡವಟಿ-1,2,3, ಜಿಜ್ಜನಗೇರಾ 1,2 ಸಿದ್ರಾಮಪುರ-1, ಚಿಕ್ಕಸುಗೂರು ಗ್ರಾಮಗಳ ಹತ್ತಿರದಲ್ಲಿ ಏತ ನೀರಾವರಿ ಯೋಜನೆ ನಿರ್ಮಿಸಿ ಫಲಾನುಭವಿಗಳಿಗೆ ನೀರಾವರಿ ಸೌಲಭ್ಯ ಒದಗಿಸಿರುವ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 31,37,924/-ಗಳ ಮೇಲೆ ಶೇ. 12.90ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 35,42,716-ಗಳಿಗೆ (ರೂ ಮೂವತ್ತೈದು ಲಕ್ಷ ನಲವತ್ತೆರಡು ಸಾವಿರದ ಏಳು ನೂರ ಹದಿನಾರು ರೂಪಾಯಿಗಳು ಮಾತ್ರ) ಶ್ರೀ ಕೆ. ರವೀಂದ್ರ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್. 1603

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಶಿಕ್ಷಣ ಸಚಿವಾಲಯ

ವಿಷಯ: ರಿಟ್ ಅರ್ಜಿ ಸಂಖ್ಯೆ 7935-7947/2010ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 8-2-2011ರಂದು ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸುವ ಕುರಿತು-ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಶಿಕ್ಷಕರಿಗೆ 5ನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 3 ಎಸ್‌ಆರ್‌ಪಿ 1996, ದಿನಾಂಕ 18-3-1996
2) ಸರ್ಕಾರದ ಆದೇಶ ಸಂಖ್ಯೆ: ಇಡಿ 153 ಎಸ್‌ಟಿಬಿ 1998, ದಿನಾಂಕ 2-12-1998
3) ರಿಟ್ ಅರ್ಜಿ ಸಂಖ್ಯೆ: 5377-5397/2004ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 31-3-2004ರಂದು ನೀಡಿರುವ ಆದೇಶ.
4) ಸರ್ಕಾರದ ಆದೇಶ ಸಂಖ್ಯೆ: ಇಡಿ 128 ಪಿಎಂಸಿ 2004, ದಿನಾಂಕ 1-9-2004
5) ರಿಟ್ ಅರ್ಜಿ ಸಂಖ್ಯೆ: 44103/2004ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 15-11-2007 ರಂದು ನೀಡಿರುವ ಅದೇಶ.
6) ರಿಟ್ ಅಪೀಲು ಸಂಖ್ಯೆ: 346/2008ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 6-8-2008ರಂದು ನೀಡಿರುವ ಆದೇಶ.
7) ದಿನಾಂಕ 12-11-2009ರ ಸರ್ಕಾರದ ಆದೇಶ ಸಂಖ್ಯೆ: ಇಡಿ 105 ಪಿಎಂಸಿ 2009
8) ರಿಟ್ ಅರ್ಜಿ ಸಂಖ್ಯೆ: 7935-7947/2010ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 8-2-2011ರಂದು ನೀಡಿರುವ ಆದೇಶ.
9) ನ್ಯಾಯಾಲಯ ನಿಂದನಾ ಮೊಕದ್ದಮೆ ಸಂಖ್ಯೆ: 1689-701/2011ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 4-11-2011ರಂದು ನೀಡಿರುವ ಆದೇಶ.
10) ರಿಟ್ ಅಪೀಲು ಸಂಖ್ಯೆ: 16391/2011ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 11-11-2011 ನೀಡಿರುವ ಆದೇಶ.

***

ಪ್ರಸ್ತಾವನೆ:

1. ಮೇಲೆ ಓದಲಾದ (1)ರ ದಿನಾಂಕ 18-3-1996ರ ಆದೇಶದಲ್ಲಿ ಈ ಕೆಳಕಂಡಂತೆ ಅದೇಶಿಸಲಾಗಿದೆ: "(1) ವಾರ್ಷಿಕ ವೇತನ ಬಡ್ತಿ ಹೊಂದಿದ ಕಾಲಿಕ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಸರ್ಕಾರಿ ನೌಕರರು ಅವರು ಪಡೆಯುತ್ತಿರುವ ವೇತನ ಶ್ರೇಣಿಯ ಗರಿಷ್ಠ

ಹಂತವನ್ನು ತಲುಪಿದ್ದರೆ ಅಥವಾ ತಲುಪಿದರೆ ಅಂತಹ ನೌಕರರಿಗೆ ಅವರು ಅಂತಿಮವಾಗಿ ಪಡೆದಿದ್ದ ವಾರ್ಷಿಕ ವೇತನ ಬಡ್ತಿಯ ದರದ ಪ್ರಮಾಣದಲ್ಲಿ ಐದು ವಾರ್ಷಿಕ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಬಹುದು"

ಈ ಮೇಲ್ಕಂಡ ಆದೇಶವನ್ನು ದಿನಾಂಕ 1-4-1996ರಿಂದ ಜಾರಿಗೆ ಬರುವಂತೆ ಹೊರಡಿಸಲಾಗಿದೆ

2. ದಿನಾಂಕ 18-3-1996ರ ಅದೇಶದ ಹಿನ್ನೆಲೆಯಲ್ಲಿ, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಸ್ಥಗಿತ ವೇತನ ಬಡ್ತಿಗಳನ್ನು ದಿನಾಂಕ 25-6-1998 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿ, ಮೇಲೆ ಓದಲಾದ (2)ರ ದಿನಾಂಕ 2-12-1998ರ ಆದೇಶವನ್ನು ಹೊರಡಿಸಲಾಗಿದೆ.

3. ದಿನಾಂಕ 2-12-1998ರ ಅದೇಶವನ್ನು ಪ್ರಶ್ನಿಸಿ, ಸದರಿ ಸೌಲಭ್ಯವನ್ನು ಸರ್ಕಾರಿ ನೌಕರರಿಗೆ ಮಂಜೂರು ಮಾಡಿರುವಂತೆ ದಿನಾಂಕ 1-4-1996ರಿಂದಲೇ ಜಾರಿಗೊಳಿಸಬೇಕೆಂದು ಶ್ರೀ ಐ. ರುದ್ರಯ್ಯ ಮತ್ತಿತರರು ರಿಟ್ ಅರ್ಜಿ ಸಂಖ್ಯೆ: 5377-5397/2004ನ್ನು ದಾಖಲಿಸಿದ್ದು, ಸದರಿ ರಿಟ್ ಅರ್ಜಿಯನ್ನು ದಿನಾಂಕ 31-3-1994ರಲ್ಲಿ ಈ ಕೆಳಕಂಡಂತೆ ತೀರ್ಪು ನೀಡಲಾಗಿದೆ.

"Admitted facts would reveal that the petitioner is challenging denial of the extended relief in terms of his prayers. In identical circumstances, this Court in W.P. NO. 4036-4070/2003 dated 13-3-2003 has disposed of a similar matter. The facts in this case are same/similar to those in W.P. NO. 4036-4070/2003, dated 13-3-2003.

In the given circumstances and after hearing the parties, I deem it proper to direct the petitioner to file an appropriate representation within four weeks from the date of receipt of a copy of this order. On receipt of the same, the State Government is to consider the same in accordance with law and also in the light of the Judgment of the Supreme Court in the case of Haryana State Adhyapak Sangh and others Vs. State of Haryana and others as expeditiously as possible but not later than four months from the date of receipt of a copy of the representations"

4. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 31-3-2004ರ ಆದೇಶದಂತೆ ಕ್ರಮವಹಿಸಬೇಕೆಂದು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ 16-4-2004ರ ಮನವಿಯನ್ನು ಪರಿಗಣಿಸಿ, ಸರ್ಕಾರದ ಆದೇಶ ಸಂಖ್ಯೆ ಇಡಿ 128 ಪಿಎಂಸಿ 2004, ದಿನಾಂಕ 1-9-2004ರ ಹಿಂಬರಹವನ್ನು ನೀಡಿ, ಮನವಿದಾರರಿಗೆ ಸದರಿ ಸೌಲಭ್ಯವನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ತಿಳಿಸಲಾಗಿರುತ್ತದೆ.

5. ದಿನಾಂಕ 1-9-2004ರ ಹಿಂಬರಹವನ್ನು ಅರ್ಜಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 44103/2004 ರಲ್ಲಿ ಪ್ರಶ್ನಿಸಿದ್ದು ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 15-11-2007ರಲ್ಲಿ ದಿನಾಂಕ 1-9-2004ರ ಹಿಂಬರಹವನ್ನು ರದ್ದುಗೊಳಿಸಿ, ಅರ್ಜಿದಾರರ ಮನವಿಯನ್ನು ಮತ್ತೊಮ್ಮೆ ಪರಿಗಣಿಸಿ, ನಿಯಮದನ್ವಯ ಕ್ರಮ ಜರುಗಿಸುವಂತೆ ಆದೇಶ ನೀಡಿರುತ್ತದೆ.

6. ದಿನಾಂಕ 15-11-2007ರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಸರ್ಕಾರವು ರಿಟ್ ಅಪೀಲು ಸಂಖ್ಯೆ 346/2008ರಲ್ಲಿ ಪ್ರಶ್ನಿಸಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 6-8-2008ರಂದು ಈ ಕೆಳಕಂಡಂತೆ ಇತ್ಯರ್ಥಗೊಳಿಸಿದೆ:

"5. In view of this, we deem it fit and proper to issue certain clarifications without disturbing the final order of remand passed by the learned Single Judge.

The authority concerned would decide the matter in accordance with law but without being influenced by any of the observations made by the learned Single Judge while disposing of the respondents' Writ Petition. Needless to state the authority concerned would however decide the issue after taking into consideration the various decisions touching the issue pronounced by this Court, other High Courts and the Supreme Court including the judgments referred to by the learned Single Judge.

With the above clarification, this appeal stands disposed of"

7. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅಪೀಲಿನಲ್ಲಿ ದಿನಾಂಕ 6-8-2008ರಂದು ನೀಡಿದ ತೀರ್ಪಿನಂತೆ, ಸಂಬಂಧಿಸಿದ ಮನವಿದಾರರ ಕೋರಿಕೆಯನ್ನು ನಿಯಮಾನ್ವಯ ಪರಿಗಣಿಸಲು ಅವಕಾಶವಿಲ್ಲವೆಂಬ ಸಕಾರಣಗಳನ್ನು ನಮೂದಿಸಿ ಸರ್ಕಾರದ ಆದೇಶ ಸಂಖ್ಯೆ ಇಡಿ 105 ಪಿಎಂಸಿ 2009, ದಿನಾಂಕ 12-11-2009ರಲ್ಲಿ ಇತ್ಯರ್ಥಗೊಳಿಸಲಾಗಿರುತ್ತದೆ.

8. ದಿನಾಂಕ 12-11-2009ರ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 7935-7947/2010ನ್ನು ದಾಖಲಿಸಿರುತ್ತಾರೆ. ಸದರಿ ರಿಟ್ ಅರ್ಜಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ದಿನಾಂಕ 8-2-2011 ರಂದು ಈ ಕೆಳಕಂಡಂತೆ ಇತ್ಯರ್ಥಗೊಳಿಸಿರುತ್ತದೆ:-

"Accordingly, writ petitions are disposed of with a direction to the respondents to grant five increments to the petitioners herein w.e.f. 1-4-1996. Respondents shall comply with this order within three months from the date of receipt of this order."

9. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 7935–7947/2011ರಲ್ಲಿ ದಿನಾಂಕ 8–2–2011ರಂದು ನೀಡಿರುವ ತೀರ್ಪನ್ನು ನಿಗದಿತ ಸಮಯದೊಳಗೆ ಅನುಷ್ಠಾನಗೊಳಿಸಿಲ್ಲವೆಂದು ಬಾಧಿತ ಅರ್ಜಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಲಯ ನಿಂದನಾ ಮೊಕದ್ದಮೆ ಸಂಖ್ಯೆ 1689–1701/2011ನ್ನು ದಾಖಲಿಸಿದ್ದು, ಸದರಿ ನ್ಯಾಯಾಲಯ ನಿಂದನಾ ಮೊಕದ್ದಮೆಯಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 4–11–2011 ರಂದು ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ:–

"It is not in dispute that the appeal filed against the order of disobedience of which is complained of was heard in full yesterday and reserved for judgment.

2. In that view of the matter, this contempt petition has become infructuous. As we have to await the decision of the Appellate Court, the contempt petitions are dismissed reserving liberty to the complainant to approach this Court, if, even after succeeding in the writ appeal, the order passed by the Writ appellate Court is disobeyed"

10. ರಿಟ್ ಅರ್ಜಿ ಸಂಖ್ಯೆ: 7935–7947/2010ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 8–2–2011ರಂದು ನೀಡಿರುವ ಆದೇಶವನ್ನು ಪ್ರಶ್ನಿಸಿ, ರಾಜ್ಯ ಸರ್ಕಾರ ರಿಟ್ ಅಪೀಲು ಸಂಖ್ಯೆ 16391/2011 ಮತ್ತು 16988–16999/2011ನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 11–11–2011 ರಂದು ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ:–

"The appeals are accordingly dismissed. We are compelled to emphasize that in the impugned judgement, compliance was ordered to be made within three months. In view of the dismissal of writ appeals. IA 2/2011, IA.3/2011 and IA.4/2011 do not survive for consideration."

11. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದಿಂದ ಸಲ್ಲಿಸಿದ್ದ ರಿಟ್ ಅಪೀಲು ಸಂಖ್ಯೆ: 16391/2011 ಮತ್ತು ರಿಟ್ ಅಪೀಲು ಸಂಖ್ಯೆ: 16988–16999/2011ನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ವಜಾಗೊಳಿಸಿರುವುದರಿಂದ ಸರ್ಕಾರವು ರಿಟ್ ಅರ್ಜಿ ಸಂಖ್ಯೆ: 7935–7947/2010ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 8–2–2011 ರಂದು ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಡಿ 99 ಪಿಎಂಸಿ 2011, ಬೆಂಗಳೂರು, ದಿನಾಂಕ 06–06–2012

12. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ರಿಟ್ ಅರ್ಜಿ ಸಂಖ್ಯೆ: 7935–7947/2010ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 8–2–2011ರಂದು ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸಿ ಐದು ಸ್ಥಗಿತ ವೇತನ ಬಡ್ತಿ ಸೌಲಭ್ಯವನ್ನು ಸರ್ಕಾರಿ ನೌಕರರಿಗೆ ದಿನಾಂಕ 1–4–1996 ರಿಂದ ಮಂಜೂರು ಮಾಡಿರುವಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಸಹ ದಿನಾಂಕ 1–4–1996 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿದೆ.

13. ಈ ಆದೇಶವನ್ನು ಕಾನೂನು ಇಲಾಖೆಯ ದಿನಾಂಕ 3–3–2012ರ ಟಿಪ್ಪಣಿಯನ್ವಯ ನೀಡಿರುವ ಸಹಮತಿಯಂತೆ ಮತ್ತು ಆರ್ಥಿಕ ಇಲಾಖೆಯ ದಿನಾಂಕ 19–5–2012ರ ಟಿಪ್ಪಣಿ ಸಂಖ್ಯೆ: ಆಇ 1109 ವೆಚ್ಚ–8/2012ರನ್ವಯ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ಪ್ರಭುಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ)

ಪಿ.ಆರ್. 1632

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub: Constitution of Karnataka ICT Group (KIG) 2020

Preamble:

Karnataka State has been a leader in the ICT space for over two decades. The ICT sector has placed Bangalore on the global technology map so much so that IT capital of India is the 2nd best technology hub in the world. The State has seen a double digit growth for over a decade in the ICT sector, being home to over 2200 ICT companies, contributing to over 24 billion USD of exports (Rs. 1,35,000 Crores) and providing direct employment to over 8 lakh professionals.

Globally, the ICT market is becoming highly competitive. The State needs to take urgent strategic initiatives to maintain its leadership position in the ICT sector. There is tremendous scope for increasing State's share in the global ICT market as well as capturing a major share in the domestic market. Industry experts have predicted 15% growth p.a. for the ICT industry. Government ICT spend during the year 2009 was about Rs. 15,000 Crores. There is over Rs. 50,000 Crores of business opportunities in e-Governance itself. There is a great level of need for IP Driven Technology companies who can develop IP/Technologies/Products for the Large growing Indian Market. In the circumstances, it is necessary to take proactive steps to ensure a healthy growth rate for ICT in Karnataka State.

It is proposed to set up a Karnataka ICT Group (KIG) 2020, with the Vision and Mission of Maintaining the growth of ICT in Karnataka. The KIG will suggest necessary policy initiatives to be taken by the State Government to achieve the objectives. Hence the order:

Government Order No. ITD 05 PRM 2012, dated 05-06-2012

In the circumstances explained above, Government is pleased to constitute Karnataka ICT Group 2020, with the following composition:-

1)	Shri T. V. Mohandas Pai, Chairman, Manipal Global Education Services Pvt. Ltd.,	...	Chairman
2)	Shri B. V. Naidu, Chairman & CEO, Sagitaur Ventures India Pvt. Ltd.,	...	Vice-Chairman
3)	Prof. Sadagopan, Director, IIIT, Bangalore	...	Member
4)	Shri Sudip Banerjee Director, IIIT, Bangalore	...	Member
5)	Shri Sanjay Nayak, CEO & MD, Tejas Networks Ltd.,	...	Member
6)	Director, Nasscom-Bangalore	...	Member
7)	Chairman, India Semiconductor Association (ISA)	...	Member
8)	President, TiE-Bangalore	...	Member

The Karnataka ICT Group 2020 will work towards achieving the following Goals:-

i) Increasing the ICT revenues from the present Rs. 1.35 lakh Crores to Rs. 4 lakh Crores by 2020.
ii) Increasing the employment in ICT from the present 8 lkhs to 20 lakhs by 2020
iii) Create/help incubate 1000 start-ups/entrepreneur-driven companies by 2020

The Karnataka ICT Group 2020 will have the following **strategies** and suggest initiatives accordingly:-

i) Make Bangalore the global city of choice in ICT
ii) Make Mangalore, Mysore, Hubli-Dharwad, Gulbarga and Belgaum, the 'National Centres of ICT'.
iii) Suggest policy initiatives to promote entrepreneurship in the five 'National Centres of ICT'
iv) Promote start-ups across the State by setting up Incubation facilities in the five 'National Centres of ICT'
v) Set up partnership with Singapore, Japan, Australia, France, Taiwan and Germany to accelerate business co-operation and entrepreneurship.
vi) Create Centres of Excellence in major universities across the State
vii) Setting up a Start-ups Angel Fund

The Department of IT, BT and S & T, shall provide all the necessary assistance and support required by the Karnataka ICT Group (KIG) 2020 to achieve the objectives. The Department shall make necessary budgetary provisions for implementing the initiatives recommended by the Group.

By Order and in the name of the Governor of Karnataka
S. Ruju
Deputy Secretary to Government
Information Technology, Biotechnology and
Science and Technology Department

P.R. 1633

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಡಾ॥ ಲಕ್ಷ್ಮಣ್, ತಜ್ಞ ವೈದ್ಯರು, ಸಾರ್ವಜನಿಕ ಆಸ್ಪತ್ರೆ, ಪಾವಗಡ, ತುಮಕೂರು ಜಿಲ್ಲೆ ಇವರ ಅನಧಿಕೃತ ಗೈರು ಹಾಜರಿ ವಿರುದ್ಧ ಇವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವ ದಂಡನೆ ವಿಧಿಸುವ ಬಗ್ಗೆ ಆದೇಶ.–

ಓದಲಾಗಿದೆ:
1) ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ದೋಷಾರೋಪಣಾ ಪಟ್ಟಿ ಸಂಖ್ಯೆ: ಡಿಪಿಜಿ/ಬೆಂವಿII/ಗ್ವಿ/60/08–09, ದಿನಾಂಕ 28–04–2009.
2) ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಪಿಜಿ/ಬೆಂವಿII/ ತುಮಕೂರು/60/2008–09, ದಿನಾಂಕ 18–07–2009.
3) ವಿಚಾರಣಾ ವರದಿ ದಿನಾಂಕ 18–10–2010
4) ಮರು ವಿಚಾರಣಾಧಿಕಾರಿಗಳ ನೇಮಕಾತಿ ಆದೇಶ ಸಂಖ್ಯೆ: ಡಿಪಿಜಿ/ಬೆಂವಿII/ತುಮಕೂರು/60/2008–09, ದಿನಾಂಕ 10–03–2011
5) ಮುಖ್ಯ ಜಾಗೃತಾಧಿಕಾರಿ (ಜಾಗೃತ ಕೋಶ) ಆಕುಕ ಸೇವೆಗಳು, ಬೆಂಗಳೂರು ಇವರ ವಿಚಾರಣಾ ವರದಿ ಸಂಖ್ಯೆ: ಮು.ಜಾ.ಅ./ಜಾಕೋ/22/2010, ದಿನಾಂಕ 24–11–2011.

6) ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ತಿಳುವಳಿಕೆ ಪತ್ರ ಸಂಖ್ಯೆ: ಡಿಪಿಜಿ/ಬೆಂವಿII/ತುಮಕೂರು/60/2008-09, ದಿನಾಂಕ 26-12-2011.

7) ಡಾ॥ ಲಕ್ಷ್ಮಣ್ ಇವರ ಸಮಜಾಯಿಷಿ ದಿನಾಂಕ 23-03-2012

8) ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಪಿಜಿ/ಬೆಂವಿII/ ತುಮಕೂರು/ 60/2008-09, ದಿನಾಂಕ 03-05-2012.

ಪ್ರಸ್ತಾವನೆ:

ಡಾ॥ ಲಕ್ಷ್ಮಣ್, ತಜ್ಞ ವೈದ್ಯರು, ಸಾರ್ವಜನಿಕ ಆಸ್ಪತ್ರೆ, ಪಾವಗಡ, ತುಮಕೂರು ಜಿಲ್ಲೆ ಇವರು ದಿನಾಂಕ 18-04-2008 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದ ಆರೋಪಕ್ಕೆ ಸಂಬಂಧಿಸಿದಂತೆ ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಕಾರಣ ಕೇಳುವ ನೋಟೀಸನ್ನು ದೋಷಾರೋಪಣೆ ಪಟ್ಟಿಯೊಂದಿಗೆ ಆರೋಪಿತ ವೈದ್ಯರಿಗೆ ಜಾರಿ ಮಾಡಿ ಅವರಿಂದ ರಕ್ಷಣಾ ಹೇಳಿಕೆ ಸಲ್ಲಿಸುವಂತೆ ನಿರ್ದೇಶಿಸಲಾಗಿತ್ತು.

ಸದರಿ ನೋಟೀಸ್‌ಗೆ ಆಪಾದಿತ ವೈದ್ಯರು ತಮ್ಮ ರಕ್ಷಣಾ ಹೇಳಿಕೆಯನ್ನು ಸಲಿಸಿಲ್ಲವಾದ್ದರಿಂದ ಅವರ ವಿರುದ್ಧದ ಆರೋಪದ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯಲು ಈ ಪ್ರಕರಣವನ್ನು ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಇಲಾಖಾ ವಿಚಾರಣೆಗೆ ವಹಿಸಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ತೀರ್ಮಾನಿಸಿ ಅದರಂತೆ ನಿವೃತ್ತ ನ್ಯಾಯಾಧೀಶರಾದ ಶ್ರೀ ಇಂದೂಧರ್ ಸೋಸಲೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ವಿಚಾರಣಾಧಿಕಾರಿಯವರು ನಿಯಮಾನುಸಾರ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಆಯುಕ್ತರಿಗೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ಆಪಾದಿತ ಅಧಿಕಾರಿಯವರು ಸರ್ಕಾರಿ ಸೇವೆಗೆ ಅನಧಿಕೃತ ಗೈರು ಹಾಜರಿಯಾಗಿರುವುದು ಸಾಬೀತಾಗಿರುವುದಿಲ್ಲವೆಂದು ವರದಿಯನ್ನು ನೀಡಿದ್ದು, ಶಿಸ್ತು ಪ್ರಾಧಿಕಾರವು ವರದಿಯನ್ನು ಪರಿಶೀಲಿಸಿದ ನಂತರ ಮರು ವಿಚಾರಣೆಗೆ ವಹಿಸಲು ನಿರ್ಧರಿಸಿ ಸದರಿಯವರ ವಿಚಾರಣಾ ವರದಿಯನ್ನು ತಿರಸ್ಕರಿಸಿ ಮೇಲೆ (4)ರಲ್ಲಿ ಓದಲಾದ ಆದೇಶದಲ್ಲಿ ಮುಖ್ಯ ಜಾಗೃತಾಧಿಕರಿ (ಜಾಗೃತ ಕೋಶ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿದ್ದರು.

ಮೇಲೆ (5)ರಲ್ಲಿ ಓದಲಾದ ವಿಚಾರಣಾಧಿಕಾರಿ ಮುಖ್ಯ ಜಾಗೃತಾಧಿಕಾರಿ (ಜಾಗೃತ ಕೋಶ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ನಿಯಮಾನುಸಾರ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಆಯುಕ್ತರಿಗೆ ಸಲಿಸಿದ್ದು, ಈ ವಿಚಾರಣಾ ವರದಿಯಲ್ಲಿ ಡಾ॥ ಲಕ್ಷ್ಮಣ್, ತಜ್ಞ ವೈದ್ಯರು ಸರ್ಕಾರಿ ಸೇವೆಗೆ ಅನಧಿಕೃತ ಗೈರುಹಾಜರಾಗಿರುವುದು ವಿಚಾರಣೆಯಲ್ಲಿ ಸಂಪೂರ್ಣವಾಗಿ ಸಾಬೀತಾಗಿದೆ ಎಂದು ನಿರ್ಣಯ ನೀಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರುರವರು ಆಪಾದಿತ ವೈದ್ಯರಿಗೆ ತಿಳುವಳಿಕೆಯ ಪತ್ರ ಜಾರಿ ಮಾಡಿ ಈ ವಿಚಾರಣಾ ವರದಿಯನ್ನು ಏಕೆ ಅಂಗೀಕರಿಸಬಾರದೆಂಬ ಬಗ್ಗೆ ವಿವರಣೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಮೇಲೆ (7)ರಲ್ಲಿ ಓದಲಾದ ಪತ್ರದಲ್ಲಿ ಡಾ॥ ಲಕ್ಷ್ಮಣ್, ತಜ್ಞ ವೈದ್ಯರು ಸಮಜಾಯಿಷಿ ಸಲ್ಲಿಸಿದ್ದು, ವಿಚಾರಣಾಧಿಕಾರಿಗಳೂ ತಮ್ಮ ಮನವಿ ಪರಿಗಣಿಸದೆ ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡು ಮರು ವಿಚಾರಣಾ ವರದಿ ಸಲ್ಲಿಸಿದ್ದು, ವಿಚಾರಣಾಧಿಕಾರಿಗಳ ನೇಮಕವೇ ಅಸಿಂಧುವಾಗಿದ್ದು, ಸದರಿ ವರದಿ ರದ್ದುಪಡಿಸಿ ಆರೋಪದಿಂದ ಕೈ ಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ ಹಾಗೂ ಈ ದಿನದಿಂದ ಜಾರಿಗೆ ಬರುವಂತೆ ರಾಜೀನಾಮೆ ಅಂಗೀಕರಿಸಿ ಸೇವೆಯಿಂದ ವಿಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

ಇಲಾಖಾ ವಿಚಾರಣೆಯಲ್ಲಿ ಇವರ ವಿರುದ್ಧ ಅನಧಿಕೃತ ಗೈರು ಹಾಜರಿ ಆರೋಪವು ಸಾಬೀತಾಗಿರುವುದರಿಂದ ದಿನಾಂಕ 18-04-2008ರಿಂದಲೇ ಅನ್ವಯವಾಗುವಂತೆ ಇವರ ರಾಜೀನಾಮೆ ಅಂಗೀಕರಿಸಲು ಮೇಲೆ (8)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ವಿಚಾರಣಾಧಿಕಾರಿಗಳ ವಿಚಾರಣಾ ವರದಿ, ಆಯುಕ್ತರ ಪ್ರಸ್ತಾವೆಯನ್ನು ಸಂಬಂಧಿಸಿರುವ ದಾಖಲಾತಿಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದೆ. ಡಾ॥ ಲಕ್ಷ್ಮಣ್, ತಜ್ಞ ವೈದ್ಯರು ಸಾರ್ವಜನಿಕ ಆಸ್ಪತ್ರೆ, ಪಾವಗಡ, ತುಮಕೂರು ಜಿಲ್ಲೆ ಇವರು ಕಾರಣ ನೀಡದೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ವಿಚಾರಣೆಗೂ ಹಾಜರಾಗದೆ ದಿನಾಂಕ 18-04-2008 ರಿಂದ ಈವರೆವಿಗೂ ಸರ್ಕಾರಿ ಸೇವೆಗೆ ಅನಧಿಕೃತ ಗೈರು ಹಾಜರಿಯಾಗಿರುವುದು ಇಲಾಖಾ ವಿಚಾರಣೆಯಿಂದ ರುಜುವಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾಳಿಗಳೂ 1957ರ ನಿಯಮ 8(vii) ರನ್ವಯ ಸದರಿ ವೈದ್ಯರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 173 ಎಂಎಸ್ಎ 2012, ಬೆಂಗಳೂರು, ದಿನಾಂಕ 29-05-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಡಾ॥ ಲಕ್ಷ್ಮಣ್. ತಜ್ಞ ವೈದ್ಯರು, ಸಾರ್ವಜನಿಕ ಆಸ್ಪತ್ರೆ, ಪವಗಡ ತಾ॥ ತುಮಕೂರು ಜಿಲ್ಲೆ ಇವರನ್ನು ಅನಧಿಕೃತ ಗೈರು ಹಾಜರಿ ಆರೋಪದ ಮೇರೆಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(viii) ರಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಎಫ್. ಹುಬ್ಬಳ್ಳಿ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಸಚಿವಾಲಯ

ವಿಷಯ: ಎನ್‌ಸಿಎಫ್ 2005 ಆಧಾರಿತ ಸಿದ್ಧವಾಗುತ್ತಿರುವ 1 ರಿಂದ 4,6,7,9 ಮತ್ತು 10ನೇ ತರಗತಿಗಳ ನೂತನ ಪಠ್ಯಪುಸ್ತಕಗಳನ್ನು ಹೊರತರುವ ಬಗ್ಗೆ.-

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ರವರ ಪತ್ರ ಸಂಖ್ಯೆ: ಪಮುರನ ಆದೇಶ2/ಪಪಪಮುರ/ಕ.ಪ.ಪು.ಸಂ./2011-12, ದಿನಾಂಕ 03-03-2012.

ಪ್ರಸ್ತಾವನೆ:

1. ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ ಬೆಂಗಳೂರು ರವರು, ಎನ್‌ಸಿಎಫ್ 2005 ಆಧಾರಿತ ಸಿದ್ಧವಾಗಿರುವ ನೂತನ ಪಠ್ಯವಸ್ತುವಿನ ಆಧಾರದ ಮೇಲೆ ನೂತನ ಪಠ್ಯಪುಸ್ತಕಗಳ ರಚನಾ ಕಾರ್ಯವು ನಡೆಯುತ್ತಿದೆ. 1,2,3,4,5 ಮತ್ತು 8ನೇ ತರಗತಿಗಳ ಹೊಸ ಪಠ್ಯಪುಸ್ತಕಗಳನ್ನು 2012-13ನೇ ಸಾಲಿನಲ್ಲಿ ಮತ್ತು 2013-14ನೇ ಸಾಲಿನಲ್ಲಿ 6,7,9 ಮತ್ತು 10 ತರಗತಿಗಳ ಪಠ್ಯಪುಸ್ತಕಗಳನ್ನು ಜಾರಿಗೆ ತರಲು ಸರ್ಕಾರಿ ಆದೇಶವನ್ನು ಹೊರಡಿಸಿ ಎಂದು ತಿಳಿಸಿ 6,7,9 ಮತ್ತು 10ನೇ ತರಗತಿಗಳ ಪಠ್ಯಪುಸ್ತಕಗಳು 13-14ನೇ ಸಾಲಿಗೆ ಒಟ್ಟಿಗೆ ಜಾರಿಗೊಳ್ಳಬೇಕಾಗಿರುವುದರಿಂದ ಇವುಗಳ ರಚನಾ ಕಾರ್ಯ ಪ್ರಾರಂಭಗೊಂಡಿದೆ. ಆದರೆ 7 ಮತ್ತು 10ನೇ ತರಗತಿಗಳು ವಿದ್ಯಾರ್ಥಿಯ ಜೀವನದಲ್ಲಿ ಪ್ರಮುಖ ಹಾಗೂ ನಿರ್ಣಾಯಕ ಘಟ್ಟಗಳಾಗಿರುವುದರಿಂದ ಹಿಂದಿನ ಎಲ್ಲಾ ತರಗತಿಗಳನ್ನು ಹಳೆಯ ಪಠ್ಯವಸ್ತುವಿನ ಆಧಾರದ ಮೇಲೆ ಓದಿ ಮೊದಲ ಬಾರಿಗೆ ಹೊಸ ವಿಧಾನಗಳನ್ನು ಅಳವಡಿಸಿರುವ ನೂತನ ಪಠ್ಯವಸ್ತುವನ್ನು ಆಧರಿಸಿ ಇರುವ ಪಠ್ಯಪುಸ್ತಕಗಳನ್ನು ಅರ್ಥೈಸುವುದು ವಿದ್ಯಾರ್ಥಿಗೆ ಕಷ್ಟಕರವಾಗಿರುವುದೆಂದು ತಿಳಿಸಿರುವ ಹಿನ್ನೆಲೆಯಲ್ಲಿ 2013-14 ಸಾಲಿಗೆ 1,2,3,4,6,7,9 ಮತ್ತು 10 ತರಗತಿಗಳ ಪಠ್ಯಪುಸ್ತಕಗಳನ್ನು ಒಟ್ಟಿಗೆ ಅಳವಡಿಸುವ ಬದಲು 2013-14ನೇ ಸಾಲಿಗೆ 1,2,6 ಮತ್ತು 9 ಹಾಗೂ 2014-15ನೇ ಸಾಲಿಗೆ 3,4,7 ಮತ್ತು 10ನೇ ತರಗತಿಗಳ ಪಠ್ಯಪುಸ್ತಕಗಳನ್ನು ಅಳವಡಿಸುವುದರಿಂದ ವಿದ್ಯಾರ್ಥಿಯ ಕಲಿಕೆಗೆ ಅನುಕೂಲವಾಗುವ ಸುರಳಿ ಆಕಾರದ ವಿಧಾನವನ್ನು ಅನುಸರಿಸಬಹುದು, ಈ ಸಂಬಂಧ ಸರ್ಕಾರಿ ಆದೇಶ ಹೊರಡಿಸಲು ಕೋರಿರುತ್ತಾರೆ.
2. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ

ಸರ್ಕಾರದ ಆದೇಶ ಸಂಖ್ಯೆ: ಇಡಿ 11 ಯೋಯೋಕ 2012, ಬೆಂಗಳೂರು, ದಿನಾಂಕ 08-06-2012

3. 2013-14ನೇ ಸಾಲಿಗೆ 1,2,6,9ನೇ ತರಗತಿಗಳಿಗೆ ಹಾಗೂ 2014-15ನೇ ಸಾಲಿಗೆ 3,4,7,10ನೇ ತರಗತಿಗಳಿಗೆ ಎನ್‌ಸಿಎಫ್ 2005 ಆಧಾರಿತ ಸಿದ್ಧಪಡಿಸಿದ ಹೊಸ ಪಠ್ಯ ಮುಸ್ತಕ ಅಳವಡಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ. ಇದಕ್ಕೆ ಬೇಕಾಗಿರುವ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಎಫ್. ಮಾಗಿ

ಪಿ.ಆರ್. 1635

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕಿನ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ 4702 ಪ್ರಧಾನ ಕಾಮಗಾರಿಗಳು ಲೆಕ್ಕ ಶೀರ್ಷಿಕೆ ಅಡಿ ಕೈಗೊಳ್ಳಲು ಅನುಮೋದಿಸುವ ಬಗ್ಗೆ.

ಓದಲಾಗಿದೆ : ದಿನಾಂಕ: 18-04-2012ರ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: PWD 273 FC-1:2012

ಪ್ರಸ್ತಾವನೆ :

ತುಮಕೂರು ಜಿಲ್ಲೆ, ಪಾವಗಡ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ, ಹೊಸ ಕೆರೆ ನಿರ್ಮಾಣ ಮತ್ತು ಅಣೆಕಟ್ಟು ಮತ್ತು ಪಿಕಪ್ ಕಾಮಗಾರಿಗಳನ್ನು ತುರ್ತಾಗಿ ಕೈಗೊಂಡು ಅಭಿವೃದ್ಧಿಪಡಿಸುವುದು ಅವಶ್ಯಕವಾಗಿರುತ್ತದೆಂದು, ಸದರಿ ಕಾಮಗಾರಿಗಳಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಯಿತು. ಇದರಂತೆ ರೂ. 600.00 ಲಕ್ಷ ಅಂದಾಜು ಮೊತ್ತದಲ್ಲಿ ಅನುಬಂದದಲ್ಲಿ ತಿಳಿಸಿರುವ 46 ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ. ಈ ಕಾಮಗಾರಿಗಳನ್ನು ಕೈಗೊಳ್ಳಲು, ಹೆಚ್ಚುವರಿಯಾಗಿ ಅಂದಾಜು ಮೊತ್ತದ 1/3 ಭಾಗದಷ್ಟು ಅನುದಾನವನ್ನು ಒದಗಿಸಲು ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ.

ಕಾರಣ ಈ ಕಾಮಗಾರಿಗಳನ್ನು 4702-ಪ್ರಧಾನ ಕಾಮಗಾರಿಗಳು ಲೆಕ್ಕ ಶೀರ್ಷಿಕೆ ಅಡಿ ಕೈಗೊಳ್ಳಲು ಅನುಮೋದಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 13 ಮಸಾವಿ 2012 (ಭಾಗ-1), ಬೆಂಗಳೂರು, ದಿನಾಂಕ: 10ನೇ ಮೇ 2012

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದಂತೆ ತುಮಕೂರು ಜಿಲ್ಲೆಯ ಪಾವಗಡ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅನುಬಂಧದಲ್ಲಿ ತಿಳಿಸಿರುವ 46 ಕಾಮಗಾರಿಗಳನ್ನು 4702 ಪ್ರಧಾನ ಕಾಮಗಾರಿಗಳು ಲೆಕ್ಕ ಶೀರ್ಷಿಕೆ ಅಡಿ ರೂ. 600.00ಲಕ್ಷಗಳು (ರೂಪಾಯಿ ಆರು ನೂರು ಲಕ್ಷಗಳು ಮಾತ್ರ) ಅಂದಾಜು ಮೊತ್ತದಲ್ಲಿ, ಪ್ರತಿ ಕಾಮಗಾರಿಯ ಅಂದಾಜಿಗೆ ಸಕ್ಷಮ ಪ್ರಾದಿಕಾರದಿಂದ 4702 ಪ್ರಧಾನ ಕಾಮಗಾರಿಗಳು ಲೆಕ್ಕ ಶೀರ್ಷಿಕೆ ಸೂಕ್ತ ಉಪ ಶೀರ್ಷಿಕೆ ಅಡಿ ಮಂಜೂರಾತಿ ಪಡೆದು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: PWD 273 FC-I:2012 ದಿನಾಂಕ: 18-04-2012 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1511 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಸರ್ಕಾರದ ಆದೇಶ ಸಂಖ್ಯೆ: ಸನೀಇ 13 ಮಸಾವಿ 2012 (ಭಾಗ-1), ಬೆಂಗಳೂರು, ದಿನಾಂಕ: 10ನೇ ಮೇ 2012 ಕ್ಕೆ ಅನುಬಂಧ

ಕ್ರ.ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1.	ತಿರುಮಣಿ ಕೆರೆ ಹೂಳೆತ್ತುವ ಕಾಮಗಾರಿ	10.00
2.	ರಾಯಚರ್ಲು ಕೆರೆ ಹೂಳೆತ್ತುವ ಕಾಮಗಾರಿ	10.00
3.	ವಳ್ಳೂರು ಕೆರೆ ಹೂಳೆತ್ತುವ ಕಾಮಗಾರಿ	10.00
4.	ಕ್ಯಾತಗಾನಚೆರ್ಲು ಕೆರೆ ಹೂಳೆತ್ತುವ ಕಾಮಗಾರಿ	5.00
5.	ಹುಸೇನಪುರ ಕೆರೆ ಹೂಳೆತ್ತುವ ಕಾಮಗಾರಿ	5.00
6.	ನಾಗಲಮಡಿಕೆರೆ ಹೂಳೆತ್ತುವ ಕಾಮಗಾರಿ	5.00
7.	ದೊಮ್ಮತಮರಿ ಕೆರೆ ಹೂಳೆತ್ತುವ ಕಾಮಗಾರಿ	10.00
8.	ವಿರುಪಸಮುದ್ರ ಕೆರೆ ಹೂಳೆತ್ತುವ ಕಾಮಗಾರಿ	5.00
9.	ಗುಮ್ಮಘಟ್ಟ ಕೆರೆ ಹೂಳೆತ್ತುವ ಕಾಮಗಾರಿ	10.00
10.	ಕನ್ನಮೇಡಿ ಕೆರೆ ಹೂಳೆತ್ತುವ ಕಾಮಗಾರಿ	10.00
11.	ಕೋಟಗುಡ್ಡಕೆರೆ ಹೂಳೆತ್ತುವ ಕಾಮಗಾರಿ	5.00
12.	ಪೊನ್ನಸಮುದ್ರ ಕೆರೆ ಹೂಳೆತ್ತುವ ಕಾಮಗಾರಿ	5.00
13.	ಯರ್ರಮ್ಮನಹಳ್ಳಿ ಕೆರೆ ಹೂಳೆತ್ತುವ ಕಾಮಗಾರಿ	5.00
14.	ತಿಪ್ಪಯ್ಯನದುರ್ಗ ಕೆರೆ ಹೂಳೆತ್ತುವ ಕಾಮಗಾರಿ	5.00
15.	ಜೆ. ಅಚ್ಚಮ್ಮನಹಳ್ಳಿ ಕೆರೆ ಹೂಳೆತ್ತುವ ಕಾಮಗಾರಿ	5.00
16.	ನಾಗಲಪುರ ಕೆರೆ ಹೂಳೆತ್ತುವ ಕಾಮಗಾರಿ	5.00
17.	ಭೀಮನಕುಂಟೆ ಕೆರೆ ಹೂಳೆತ್ತುವ ಕಾಮಗಾರಿ	5.00
18.	ಕತ್ತಿಕ್ಯಾತನಹಳ್ಳಿ ಕೆರೆ ಹೂಳೆತ್ತುವ ಕಾಮಗಾರಿ	5.00
19.	ರಾಜವಂತಿ ಕೆರೆ ಹೂಳೆತ್ತುವ ಕಾಮಗಾರಿ	5.00
20.	ಕೆ.ಟಿ. ಹಳ್ಳಿ ಕೆರೆ ಹೂಳೆತ್ತುವ ಕಾಮಗಾರಿ	5.00
21.	ಗುಂಡ್ಲಹಳ್ಳಿ ಕೆರೆ ಹೂಳೆತ್ತುವ ಕಾಮಗಾರಿ	5.00
22.	ದವಡಬೆಟ್ಟ ಕೆರೆ ಹೂಳೆತ್ತುವ ಕಾಮಗಾರಿ	5.00
23.	ಪಳವಳ್ಳಿ ಸಣ್ಣ ಕೆರೆ ಹೂಳೆತ್ತುವ ಕಾಮಗಾರಿ	5.00
24.	ಪಾವಗಡ ಅಗಸರಕುಂಟೆ ಕೆರೆ ಹೂಳೆತ್ತುವ ಕಾಮಗಾರಿ	10.00
25.	ಓಬಳಾಪುರ ಹೊಸಕೆರೆ ಹಳ್ಳಕ್ಕೆ ಪಿಕಪ್ ನಿರ್ಮಾಣ	20.00
26.	ಕರೇಕ್ಯಾತನಹಳ್ಳಿ ಸ್ವಾರಮ್ಮನ ಕೆರೆಗೆ ಹೂಳೆತ್ತುವ ಕಾಮಗಾರಿ	50.00
27.	ಮರಿದಾಸನಹಳ್ಳಿ ಹತ್ತಿರ ಹೊಸಕೆರೆ ಫೀಡರ್ ಚಾನೆಲ್‌ಗೆ ಪಿಕಪ್ ನಿರ್ಮಾಣ	5.00
28.	ಅನ್ನದಾನಪುರ ಕೆರೆ ಹೂಳೆತ್ತುವ ಕಾಮಗಾರಿ	5.00
29.	ದೊಡ್ಡಹಳ್ಳಿ ಹತ್ತಿರ ಪಿಕಪ್ ನಿರ್ಮಾಣ	5.00
30.	ವೈ.ಎನ್. ಹೊಸಕೋಟೆ ಹತ್ತಿರ ಉದ್ದಣ್ಣಪ್ಪನಕುಂಟೆ ಹೂಳು ತೆಗೆಯುವುದು	5.00
31.	ಮೇಡಿಹಳ್ಳಿ ಗ್ರಾಮದ ಹತ್ತಿರ ಬರುವ ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ	30.00
32.	ಶೈಲಾಪುರ ಗ್ರಾಮದ ದೊಡ್ಡ ಬೆಟ್ಟದ ಹತ್ತಿರ ಇಂಗುಕೆರೆ ನಿರ್ಮಿಸಿ ಶೈಲಾಪುರ ಕೆರೆ ಫೀಡರ್ ಚಾನಲ್ ನಿರ್ಮಾಣ	30.00

33.	ದೇವರಬೆಟ್ಟ ರಿ.ಸ.ನಂ. 13 ರಲ್ಲಿ ಚೆಕ್ ಡ್ಯಾಂ ನಿರ್ಮಾಣ	10.00
34.	ಕೋಟಗುಡ್ಡ ಗ್ರಾಮದ ಮಾರಪ್ಪನಗುಂಡಿ ಸಂದಿಗೆ ಇಂಗು ಕೆರೆ ನಿರ್ಮಾಣ	30.00
35.	ನೇರಳೆಕುಂಟೆ ಮಾದವರಾಯನಪಾಳ್ಯಕ್ಕೆ ಹೋಗುವ ರಸ್ತೆಯಲ್ಲಿ ಬರುವ ಹಳ್ಳಕ್ಕೆ ಪಿಕಪ್ ಕಮ್ ಕಾಜುವೇ ನಿರ್ಮಾಣ	100.00
36.	ಸಿಂಗರೆಡ್ಡಿಹಳ್ಳಿ ಸ.ನಂ. 19ರಲ್ಲಿ ಪಿಕಪ್ ನಿರ್ಮಾಣ	10.00
37.	ಕುಮಾರ್ಲಹಳ್ಳಿ ರಿ.ಸ.ನಂ 16/4ರಲ್ಲಿ ಪಿಕಪ್ ನಿರ್ಮಾಣ	10.00
38.	ವೈ.ಎನ್. ಹೊಸಕೋಟೆ ರಿ.ಸ.ನಂ. 149/2 ರಲ್ಲಿ ಚೆಕ್ ಡ್ಯಾಂ ನಿರ್ಮಾಣ	10.00
39.	ಕುಮಾರ್ಲಹಳ್ಳಿ ಕುಂಬಗಾನಕುಂಟೆ ಅಭಿವೃದ್ಧಿ	5.00
40.	ತಾಳೇಮರದಹಳ್ಳಿ ರಿ.ಸ.ನಂ. 40ರಲ್ಲಿ ಪಳವಳ್ಳಿ ಕೆರೆ ಫೀಡರ್ ಚಾನೆಲ್‌ಗೆ ಪಿಕಪ್ ನಿರ್ಮಾಣ	5.00
41.	ಮುಮ್ಮಡಿಸಾಗರ ರಿ.ಸ.ನಂ. 6/2ರಲ್ಲಿ ಇಂಗು ಕೆರೆಫೆ ನಿರ್ಮಾಣ	20.00
42.	ಕೊಡಗೇಹಳ್ಳಿ ದೊಡ್ಡಕೆರೆ ಹೂಳೆತ್ತುವ ಕಾಮಗಾರಿ	5.00
43.	ಮರಿದಾಸನಹಳ್ಳಿ ವನಂತರಕೆರೆ ಹೂಳೆತ್ತುವ ಕಾಮಗಾರಿ	10.00
44.	ಚಿಕ್ಕಹಳ್ಳಿ ಕಾಮನಬೆಟ್ಟದ ಹತ್ತಿರ ನೆರಲಪಾಯ ಹೊಸಕೆರೆ ನಿರ್ಮಾಣ	50.00
45.	ಬೆಳ್ಳಿಬಟ್ಟಲು ದಾಸಣ್ಣ ಕೆರೆ ಹೂಳೆತ್ತುವ ಕಾಮಗಾರಿ	10.00
46.	ಕನ್ನಮೇಡಿ ರಿ.ಸ.ನಂ. 130ರಲ್ಲಿ ಪಿಕಪ್ ನಿರ್ಮಾಣ	20.00
	ಒಟ್ಟು	**600.00**

ರುದ್ರಮೂರ್ತಿ
ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ (ಸೈಟ್-2) ಗ್ರಾಮದ ಹತ್ತಿರ ಕೆರೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-1/2012-13/2144, ದಿನಾಂಕ: 11-04-2012.

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 12 ಮಸಾವಿ 2011(5) (ತಾಂತ್ರಿಕ) ದಿನಾಂಕ: 27-06-2011ರಲ್ಲಿ

ಪ್ರಸ್ತಾವನೆ :

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ (ಸೈಟ್-2) ಗ್ರಾಮದ ಹತ್ತಿರ ಕೆರೆ ನಿರ್ಮಾಣ ಕಾಮಗಾರಿಯು ಭಾರತ ಸರ್ಕಾರದ ಎ.ಐ.ಬಿ.ಪಿ. ಕಾರ್ಯಕ್ರಮದಡಿ ಅನುಮೋದನೆಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	27-02-2012
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	04-03-2012
ಕನ್ನಡ ಪ್ರಭ ದಿನ ಪತ್ರಿಕೆ	09-03-2012
ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆ	03-03-2012

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್ ಅನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್ ಅನ್ನು ದಿನಾಂಕ: 27-03-2012ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 81,07,371/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 81,20,886/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ

ಹೆಚ್. ಕರುಣಾಕರ ಶೆಟ್ಟಿ ಒಂದನೇ ದರ್ಜೆ ಗುತ್ತಿಗೆದಾರರು	97,56,304/-	20.338 ಹೆಚ್ಚು	20.138 ಹೆಚ್ಚು
ಜಯಶೀಲ ನಾರಾಯಣ ಶೆಟ್ಟಿ ಒಂದನೇ ದರ್ಜೆ ಗುತ್ತಿಗೆದಾರರು	1,10,39,256/-	36.163 ಹೆಚ್ಚು	35.937 ಹೆಚ್ಚು

ಮೇಲ್ಕಂಡಂತೆ ಶ್ರೀ ಹೆಚ್. ಕರುಣಾಕರ ಶೆಟ್ಟಿ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 20.138ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನ ಮಾಡಿ ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 81,20,886/- ಮೇಲೆ ಶೇ. 13 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 91,76,601/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 04 ಹೊಕನಿ (ತಾಂತ್ರಿಕ) 2012, ಬೆಂಗಳೂರು, ದಿನಾಂಕ: 09ನೇ ಮೇ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ (ಸೈಟ್-2) ಗ್ರಾಮದ ಹತ್ತಿರ ಕೆರೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಮೊತ್ತ ರೂ.81,20,886/- ಮೇಲೆ ಶೇ.13 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 91,76,601/- ಗಳಿಗೆ (ರೂ. ತೊಂಭತ್ತೊಂದು ಲಕ್ಷ ಎಪ್ಪತ್ತಾರು ಸಾವಿರದ ಆರುನೂರ ಒಂದು ಮಾತ್ರ)ಗಳಿಗೆ ಶ್ರೀ ಹೆಚ್. ಕರುಣಾಕರ ಶೆಟ್ಟಿ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1512 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ ಮುದ್ದೇಬಿಹಾಳ್ ತಾಲ್ಲೂಕಿನ ಬಸರಕೋಡ ಗ್ರಾಮದ ಸರ್ವೆ ನಂ. 56, 160 ಯಮನಪ್ಪ ಶಿವಪ್ಪ ಮಾದರ ಹಾಗೂ ಇತರರ ಜಮೀನುಗಳಿಗೆ ಬೋರ್ ವೆಲ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ-9/ಬಸರಕೋಡ ಏನೀಯೋ/2012-13/2139, ದಿನಾಂಕ:11-04-2012.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ಬಸರಕೋಡ ಗ್ರಾಮದ ಸರ್ವೆ ನಂ. 56, 160 ಯಮನಪ್ಪ ಶಿವಪ್ಪ ಮಾದರ ಹಾಗೂ ಇತರರ ಜಮೀನುಗಳಿಗೆ ಬೋರ್ ವೆಲ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯು 2011-12ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಕಾರ್ಯಪಾಲಕ ಇಂಜನಿಯರ್ ಸಣ್ಣ ನೀರಾವರಿ ವಿಭಾಗ, ಬಿಜಾಪುರರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	30-01-2012
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	28-01-2012

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 2,18,225/-

ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಐ.ಎಸ್. ಹುಲಸೂರ, ಗುತ್ತಿಗೆದಾರರು	2,45,951/-	12.705 ಹೆಚ್ಚು

ಮೇಲ್ಕಂಡಂತೆ ಶ್ರೀ ಐ. ಎಸ್. ಹುಲಸೂರ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 12.705ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,18,225/-ಗಳ ಮೇಲೆ ಶೇ. 12.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.2,44,412/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 35 ಏನೀಯೋ(ತಾಂತ್ರಿಕ) 2012 ಬೆಂಗಳೂರು, ದಿನಾಂಕ: 09ನೇ ಮೇ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ಬಸರಕೋಡ ಗ್ರಾಮದ ಸರ್ವೆ ನಂ.56, 160 ಯಮನಪ್ಪ ಶಿವಪ್ಪ ಮಾದರ ಹಾಗೂ ಇತರರ ಜಮೀನುಗಳಿಗೆ ಬೋರ್ ವೆಲ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,18,225/-ಗಳ ಮೇಲೆ ಶೇ.12.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.2,44,412/-ಗಳಿಗೆ (ರೂ. ಎರಡು ಲಕ್ಷ ನಲವತ್ತನಾಲ್ಕು ಸಾವಿರದ ನಾಲ್ಕು ನೂರ ಹನ್ನೆರಡು ಮಾತ್ರ)ಗಳಿಗೆ ಶ್ರೀ ಐ.ಎಸ್. ಹುಲಸೂರ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1513

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಸಂಗಾವಿ ಗ್ರಾಮದ ಹತ್ತಿರ ಕಾಗಿಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ-14/2012-13/2225, ದಿನಾಂಕ:16-04-2012

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 96 ಮಸಾವಿ 2011(3) (ತಾಂತ್ರಿಕ) ದಿನಾಂಕ: 20-10-2011.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಸಂಗಾವಿ ಗ್ರಾಮದ ಹತ್ತಿರ ಕಾಗಿಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯು ಭಾರತ ಸರ್ಕಾರದ ಎ.ಐ.ಬಿ.ಪಿ. ಕಾರ್ಯಕ್ರಮದಡಿ ಅನುಮೋದನೆಗೊಂಡಿರುತ್ತದೆ. ಈ ಕಾಮಗಾರಿಯು ಅಂದಾಜು ಪಟ್ಟಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	06-01-2012
ಜಿಲ್ಲಾ ಟೆಂಡರ್ ಬುಲೆಟಿನ್	07-01-2012
ಕನ್ನಡ ಪ್ರಭ ದಿನಪತ್ರಿಕೆ	09-01-2012

ಇ--ಪ್ರೊಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಇಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ: 21-03-2012ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 9,17,27,682/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ.9,21,19,264/-

ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಮೆ. ಅಮೃತಾ ಕನ್‌ಸ್ಟ್ರಕ್ಷನ್ಸ್.ಪ್ರೈ ಲಿ., ಒಂದನೇ ದರ್ಜೆ ಗುತ್ತಿಗೆದಾರರು	8,25,86,180/-	9.965 ಕಡಿಮೆ	10.3486 ಕಡಿಮೆ
ಶ್ರೀ ಸೋಮಶೇಖರ ವೆಂಕಪ್ಪಾ ಬಂಡಿ, ಒಂದನೇ ದರ್ಜೆ ಗುತ್ತಿಗೆದಾರರು	8,71,48,959/-	4.992 ಕಡಿಮೆ	5.395 ಕಡಿಮೆ

ಮೇಲ್ಕಂಡಂತೆ ಮೆ. ಅಮೃತಾ ಕನ್‌ಸ್ಟ್ರಕ್ಷನ್ಸ್.ಪ್ರೈ ಲಿ., ಒಂದನೇ ದರ್ಜೆ ಗುತ್ತಿಗೆದಾರರು, ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 10.3486 ರಷ್ಟು ಕಡಿಮೆಯಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಷ್ಕೃತ ಮೊತ್ತ ರೂ.9,21,19,264/-ಗಳ ಮೇಲೆ ಶೇ.10.3486ರಷ್ಟು ಕಡಿಮೆ ದರದಲ್ಲಿ ಅಂದರೆ ರೂ.8,25,86,180/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 63 ಅಪಿಬಂ(ತಾಂತ್ರಿಕ) 2012 ಬೆಂಗಳೂರು, ದಿನಾಂಕ: 09ನೇ ಮೇ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಸಂಗಾವಿ ಗ್ರಾಮದ ಹತ್ತಿರ ಕಾಗಿಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ.9,21,19,264/-ಗಳ ಮೇಲೆ ಶೇ. 10.3486ರಷ್ಟು ಕಡಿಮೆ ದರದಲ್ಲಿ ಅಂದರೆ ರೂ.8,25,86,180/-ಗಳಿಗೆ (ರೂ. ಎಂಟು ಕೋಟಿ ಇಪ್ಪತ್ತೈದು ಲಕ್ಷ ಎಂಭತ್ತಾರು ಸಾವಿರದ ನೂರ ಎಂಭತ್ತು ಮಾತ್ರ)ಗಳಿಗೆ ಮೆ. ಅಮೃತಾ ಕನ್‌ಸ್ಟ್ರಕ್ಷನ್ಸ್.ಪ್ರೈಲಿ., ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1514 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ತೋಟಗಾರಿಕೆ ಸಚಿವಾಲಯ

ವಿಷಯ : ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಗೆ ಬೋಧಕ/ಬೋಧಕೇತರ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1. ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆರವರ ಪತ್ರ ಸಂಖ್ಯೆ : ಕುಪ/ಹುಸ್ಯಮ/6074/10-11 ದಿನಾಂಕ : 30-10-2012.

2. ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆರವರ ಪತ್ರ ಸಂಖ್ಯೆ : ಕುಪ/ಹುಸ್ಯಮ/1049/2011-12 ದಿನಾಂಕ : 07-10-2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ : 1 ಮತ್ತು 2ರಲ್ಲಿ ಓದಲಾದ ಪತ್ರಗಳಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವ್ಯಾಪ್ತಿಯಲ್ಲಿ

ಸಂಶೋಧನಾ ಕೇಂದ್ರಗಳು, ವಿಸ್ತರಣಾ ನಿರ್ದೇಶನಾಲಯ ಸೇರಿದಂತೆ ಅಗತ್ಯವಾಗಿ ಬೇಕಾಗಿರುವ 129 ಬೋಧಕ ಹಾಗೂ 253 ಬೋಧಕೇತರ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು ವ್ಯವಸ್ಥಾಪಕ ಮಂಡಳಿಯು ಒಪ್ಪಿಗೆ ನೀಡಿದೆ. ಈ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ನೀಡುವಂತೆ ಕೋರಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ತೋಇ 346 ತೋಇವಿ 2010, ಬೆಂಗಳೂರು, ದಿನಾಂಕ : 29 ನೇ ಮೇ 2012

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸರ್ಕಾರವು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಕಛೇರಿ ಹಾಗೂ ಅದರ ಅಧೀನದಲ್ಲಿ ಬರುವ ತೋಟಗಾರಿಕೆ ಕಾಲೇಜುಗಳು, ಸಂಶೋಧನಾ ಕೇಂದ್ರಗಳು ಮತ್ತು ವಿಸ್ತರಣಾ ನಿರ್ದೇಶನಾಲಯಗಳಿಗೆ ಅಗತ್ಯವಾಗಿ ಬೇಕಾಗಿರುವ ಈ ಕೆಳಕಂಡಂತೆ 129 ಬೋಧಕ ಹಾಗೂ 253 ಬೋಧಕೇತರ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು ಅನುಮತಿಯನ್ನು ನೀಡಲಾಗಿದೆ.

Sl. No.	Name of the Post	No. of posts
TEACHING STAFF		
1	Professor	21
2	Associate Professor	38
3	Assistant Professor	66
4	Technical Assistant	04
	Total	**129**
NONTEACHING STAFF		
1	Deputy Administrative Officer	21
2	Deputy Registrar	02
3	Deputy Comptroller	01
4	Executive Engineer	01
5	Assistant Administrative Officer	01
6	Assistant Controller	05
7	Assistant Executive Engineer (Civil)	01
8	Assistant Medical Officer	03
9	Superintendent (Accounts)	07
10	Superintendent (General)	08
11	Personal Secretary	05
12	Assistant Engineer (Civil/Electrical	01
13	Assistant Engineer (Auto)	01
14	Senior Assistant	19
15	Stenographer	10
16	Junior Engineer (Civil)	05
17	Assistant Cum Computer Operator	30
18	Lab. Assistant	20
19	Field Assistant	20
20	Care Taker	01
21	Electrical Wireman	05
22	Pharmacist	01
23	Shelf Assistant	05
24	Tractor Driver	05
25	Driver (HV)	05
26	Draft Man	01
27	Driver (LV)	10
28	Cook cum Caretaker	01

29	Attender	01
30	Plumber	04
31	Asst. Cook cum Caretaker	05
32	Pump Attender	05
33	Ward Boy	01
34	Messenger	25
35	Helper	05
36	Gardener	16
37	Watchman	14
38	Janitor	02
	Total	253

ಮೇಲೆ ಸೃಜಿಸಲಾದ ಹುದ್ದೆಗಳಲ್ಲಿ ಕ್ರಮ ಸಂಖ್ಯೆ : 20 ರಿಂದ 38ರ ವರೆಗಿನ ಹುದ್ದೆಗಳಿಗೆ ಸೇವೆಯನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 389 Exp. 4/2010 ದಿನಾಂಕ : 10-05-2012 ರ ಸಹಮತಿ ಅನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1574

ಬಿ.ಸಿ. ಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ತೋಟಗಾರಿಕೆ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : 2011-12ನೇ ಸಾಲಿನ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ {One Time Additional Central Assistance (OTACA)} ದಡಿ ಮೊಬೈಲ್ ಆಡಳಿತ (Mobile Governance under innovative project) ಮತ್ತು ಕೌಂಟರ್‌ನಲ್ಲಿ ನಾಗರೀಕರಿಗೆ ಸೇವೆಗಳ ವಿತರಣೆ (Over the counter delivery of citizen services) ಈ ಯೋಜನೆಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :

1. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ದಿನಾಂಕ : 07-09-2011 ರ ಅನದಿಕೃತ ಟಿಪ್ಪಣಿ ಸಂಖ್ಯೆ : ಪಿಡಿ 31 ಪಿಎಫ್‌ಆರ್ 2009.
2. ದಿನಾಂಕ : 12-10-2011ರ ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 1 ಎಸಿಎ 2011.
3. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ದಿನಾಂಕ : 13-11-2011 ರ ಅ.ಸ. ಪತ್ರ ಸಂಖ್ಯೆ : ಪಿಡಿ 31 ಎಫ್‌ಆರ್‌ಬಿ 2009.
4. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ದಿನಾಂಕ : 16-02-2012 ರ ಅನಧಿಕೃತ ಟಿಪ್ಪಣಿ ಸಂಖ್ಯೆ : ಪಿಡಿ 26 ಎಫ್‌ಆರ್‌ಬಿ 2011.

ಪ್ರಸ್ತಾವನೆ :

1. 2011-12ನೇ ಸಾಲಿನ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ {One Time Additional Central Assistance (OTACA)} ಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ : 02-09-2011 ರಂದು ನಡೆದ ಸಭೆಯ ನಡವಳಿಯು, ಯೋಜನೆ, ಕಾರ್ಯಕ್ರಮ ಸಂಯೋಜಿಸಿ ಮತ್ತು ಸಾಂಖ್ಯಿಕ ಇಲಾಖೆಯ ಯೋಜನೆ ಹಣಕಾಸು ಮತ್ತು ಸಂಪನ್ಮೂಲ ವಿಭಾಗ (ಪಿಎಫ್‌ಆರ್)ದ, ಮೇಲೆ (1)ರಲ್ಲಿ ಓದಲಾದ ದಿನಾಂಕ : 07-09-2011ರ ಅನಧಿಕೃತ ಟಿಪ್ಪಣಿಯೊಂದಿಗೆ ಸ್ವೀಕೃತವಾಯಿತು. ಅದರಲ್ಲಿ ಉಲ್ಲೇಖಿಸಿದ ಮೊಬೈಲ್ ಆಡಳಿತ (Mobile Governance under innovative project) ಮತ್ತು ಕೌಂಟರ್‌ನಲ್ಲಿ ನಾಗರೀಕರಿಗೆ ಸೇವೆಗಳ ವಿತರಣೆ (Over the counter delivery of citizen services) ಈ ಯೋಜನೆಗಳಿಗೆ ಸಂಬಂಧಿಸಿದಂತೆ ಯೋಜನಾ ಪ್ರಸ್ತಾವನೆ (project proposal) ಗಳನ್ನು ಇ-ಆಡಳಿತ ಕೇಂದ್ರದ ವತಿಯಿಂದ ತಯಾರಿಸಲಾಗಿದೆ. ಸದರಿ ಯೋಜನೆಗಳಿಗಾಗಿ ಕ್ರಮವಾಗಿ ` 22.00 (ಇಪ್ಪತ್ತೆರಡು) ಕೋಟಿ ಮತ್ತು ` 15.00 (ಹದಿನೈದು) ಕೋಟಿ ವೆಚ್ಚವಾಗಲಿದೆಯೆಂದು ಅಂದಾಜು ಮಾಡಲಾಗಿದೆ. ಮೇಲೆ (2)ರಲ್ಲಿ ಓದಲಾದ ದಿನಾಂಕ : 12-10-2011ರ ಅನಧಿಕೃತ ಟಿಪ್ಪಣಿಯನ್ವಯ ಸದರಿ ಯೋಜನಾ ಪ್ರಸ್ತಾವನೆ (project proposal) ಗಳನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಕಳುಹಿಸಲಾಯಿತು. ಆ ಇಲಾಖೆಯ ಮೇಲೆ (3)ರಲ್ಲಿ ಓದಲಾದ ದಿನಾಂಕ

: 13-11-2011ರ ಆ.ಸ.ಪತ್ರದನ್ವಯ ಸದರಿ ಯೋಜನ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಮಹಿತಿಯನ್ನು ನೀಡಬೇಕೆಂದು ಕೋರಲಾಯಿತು. ಅದಾದ ನಂತರ, ಆ ಇಲಾಖೆಯು, ಮೇಲೆ (4) ರಲ್ಲಿ ಓದಲಾದ ದಿನಾಂಕ : 16-02-2012ರ ಅದರ ಅನಧಿಕೃತ ಟಿಪ್ಪಣಿಯನ್ವಯ ಈ ಕೆಳಕಂಡ ಅಂಶಗಳನ್ನು ಸೂಚಿಸಿತು :-

1. ಸದರಿ ಯೋಜನಾ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಯೋಜನಾ ಆಯೋಗದ ದಿನಾಂಕ : 18-10-2011 ಮತ್ತು 04-11-2011ರ ತನ್ನ ಪತ್ರಗಳನ್ವಯ ಅನುಮೋದನೆ ನೀಡಿರುವುದು;
2. ಅದಕ್ಕಾಗಿ ತಗಲುವ ಒಟ್ಟು ಯೋಜನಾ ವೆಚ್ಚದ ಶೇ. 30 ರಷ್ಟು ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಲು ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಾಲಯ ಅದರ ದಿನಾಂಕ : 14-02-2012ರ ಪತ್ರದನ್ವಯ ಮಂಜೂರಾತಿ ನೀಡಿರುವುದು ಮತ್ತು
3. ಶೇ. 30 ರಷ್ಟು ಅನುದಾನದ ಸದರಿ ಮೊತ್ತವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿಕೊಳ್ಳಲು ಮತ್ತು ಆಯಾಯ ಪ್ರಸ್ತಾವನೆಯಲ್ಲಿ ನಮೂದಿಸಿದ ರಾಜ್ಯ ಸರ್ಕಾರದ ಪಾಲಿನ ಶೇ. 70 ರಷ್ಟು ಅನುದಾನದ ಮೊತ್ತವನ್ನು ಪಡೆದುಕೊಳ್ಳಲು ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲು.

2. ಮೇಲಿನ ಅಂಶ (3) ರಂತೆ 2011-12ನೇ ಸಾಲಿನ ವಾರ್ಷಿಕ ಯೋಜನೆಯಡಿ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ {One Time Additional Central Assistance (OTACA)} ದಡಿಯಲ್ಲಿ ಸದರಿ ಯೋಜನೆಗಳನ್ನು ಜಾರಿಗೊಳಿಸಲು ಸಹಮತಿ ನೀಡುವಂತೆ ಹಾಗೂ ಅಗತ್ಯ ಅನುದಾನವನ್ನು ಇ-ಆಡಳಿತ ಕೇಂದ್ರಕ್ಕೆ ಬಿಡುಗಡೆ ಮಾಡಲು ಸಹಮತಿ ನೀಡಲು ಆರ್ಥಿಕ ಇಲಾಖೆಯನ್ನು ಕೋರಲಾಯಿತು. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಎಸಿಎ 2011, ಬೆಂಗಳೂರು, ದಿನಾಂಕ : 31ನೇ ಮಾರ್ಚ್ 2012

3. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ, 2011-12ನೇ ಸಾಲಿನ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ {One Time Additional Central Assistance (OTACA)} ದಡಿ ಮೊಬೈಲ್ ಆಡಳಿತ (Mobile governance under innovative project) ಮತ್ತು ಕೌಂಟರ್‌ನಲ್ಲಿ ನಾಗರೀಕರಿಗೆ ಸೇವೆಗಳ ವಿತರಣೆ (Over the counter delivery of citizen services) ಈ ಯೋಜನೆಗಳನ್ನು ಜಾರಿಗೊಳಿಸಲು ಈ ಮೂಲಕ ಸರ್ಕಾರದ ಮಂಜೂರಾತಿ ನೀಡಲಾಗಿದೆ.

4. ಈ ಉದ್ದೇಶಕ್ಕಾಗಿ ಇ-ಆಡಳಿತ ಕೇಂದ್ರ ಬೆಂಗಳೂರು ಇದಕ್ಕೆ ` 5.00 (ಐದು) ಕೋಟಿಗಳ ಮೊತ್ತವನ್ನು ಈ ಮೂಲಕ ಬಿಡುಗಡೆ ಮಾಡಿದೆ.

5. ಸದರಿ ಮೊತ್ತವನ್ನು ಅನುದಾನದ ಬಿಲ್ಲು/ಸ್ವೀಕರ್ತನ ರಸೀದಿಯಲ್ಲಿ ಡ್ರಾ ಮಾಡಲು ಮತ್ತು ಈ ಬಿಲ್ಲನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ರ ಬಡವಾಡೆ ಅಧಿಕಾರಿಯು ದೃಢೀಕರಿಸಲು ಅನುಮತಿ ನೀಡಿದೆ.

6. ಈ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "3451-00-090-2-04-059" ವಿದ್ಯುನ್ಮಾನ ಆಡಳಿತ ಯೋಜನೆ ಇತರೆ ವೆಚ್ಚಗಳು (ಯೋಜನೆ)", ಅಡಿಯಲ್ಲಿ ಭರಿಸತಕ್ಕದ್ದು.

7. ಆರ್ಥಿಕ ಇಲಾಖೆಯ ದಿನಾಂಕ : 30-03-2012ರ ಟಿಪ್ಪಣಿ ಸಂಖ್ಯೆ : ಆಇ/322/ವೆಚ್ಚ-12/2012ರನ್ವಯ ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಿದ ಉಳಿತಾಯವನ್ನು ಸಡಲಿಸಿ ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ನೀಡಿದ ಸಹಮತಿಯಂತೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪ್ರಶಾಂತ್‌ಕುಮಾರ್ ಎಸ್.ಬಿ)
ಪೀಠಾಧಿಕಾರಿ-2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ಪಿ.ಆರ್.1575

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಓದಲಾಗಿದೆ :
1. ಆರ್ಥಿಕ ಇಲಾಖೆಯು ನೀಡಿರುವ ಕ್ರಮಾಂಕ ಆಇ 310 ವೆಚ್ಚ-12/2012 ದಿನಾಂಕ : 10-05-2012.ರ ಸಹಮತಿ
2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 08 ಈಸಪ 2011 ದಿನಾಂಕ : 15-05-2012 ಮತ್ತು ತಿದ್ದುಪಡಿ ದಿನಾಂಕ 15-05-2012.

ಪ್ರಸ್ತಾವನೆ :

ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಲ್ಲಿ ಡಾಟಾ ಎಂಟ್ರಿ ಆಪರೇಟರುಗಳನ್ನು ಹಾಗೂ ಇನ್ನಿತರ ಅವಶ್ಯಕವಾದ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ತಕ್ಷಣ 6 ತಿಂಗಳ ಅವಧಿಗೆ ನಿವೃತ್ತ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಬಗ್ಗೆ ಆರ್ಥಿಕ ಇಲಾಖೆಯು ಮೇಲೆ (1) ರಲ್ಲಿ ನೀಡಿರುವ ಸಹಮತಿಯನ್ವಯ ಮೇಲೆ (2) ರಲ್ಲಿ ಹೇಳಿರುವ ಆದೇಶವನ್ನು ಹೊರಡಿಸಲಾಗಿದೆ.

ನಂತರದಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೇವೆಗಳನ್ನು ಒದಗಿಸಲು ಇಲಾಖೆಗಳು ಕೋರಿರುವಂತೆ ಡಾಟಾ ಎಂಟ್ರಿ ಆಪರೇಟರುಗಳು ಹಾಗೂ ಇನ್ನಿತರ ಅವಶ್ಯವಾದ ಸಿಬ್ಬಂದಿಯನ್ನು ಭರ್ತಿ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಸಚಿವಸಂಪುಟದ ಅನುಮೋದನೆಗೆ ಮಂಡಿಸಲಾಗಿತ್ತು. ದಿನಾಂಕ : 26–05–2012 ರಂದು ನಡೆದ ಸಚಿವಸಂಪುಟದ ಸಭೆಯಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹಾಗೂ ಅವಶ್ಯವಾಗಿ ಬೇಕಾದ 400 ಹುದ್ದೆಗಳನ್ನು ಮೇಲಿನ (1) ರಲ್ಲಿನ ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದಂತೆ ತಕ್ಷಣ ತುಂಬಲು ಸಚಿವಸಂಪುಟವು ಅನುಮೋದನೆ ನೀಡಿದೆ. ಈಗಾಗಲೇ ಸದರಿ ಹುದ್ದೆಗಳನ್ನು ತುಂಬಲು ಮೇಲಿನ (2) ರಲ್ಲಿ ಓದಲಾದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ಮುಂದುವರೆದು ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬುವ ವಿಷಯದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಒಂದು ಸಭೆಯನ್ನು ನಡೆಸಿ ನಂತರ ಸೂಕ್ತ ಶಿಫಾರಸುಗಳೊಂದಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮಂಡಿಸಿ, ಅವರಿಂದ ಅನುಮೋದನೆ ಪಡೆದು ನಂತರ ಉಳಿದ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಬೇಕೆಂದು ಸಚಿವ ಸಂಪುಟವು ನಿರ್ಧರಿಸಿದೆ.

ಅದರಂತೆ, ದಿನಾಂಕ : 28–05–2012 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಆಸು) ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ) ಇವರೊಂದಿಗೆ ನಡೆಸಿದ ಸಭೆಯಲ್ಲಿ ಒಟ್ಟಾರೆಯಾಗಿ ಚರ್ಚಿಸಿ ತೆಗೆದುಕೊಂಡಿರುವ ತೀರ್ಮಾನದ ಹಿನ್ನೆಲೆಯಲ್ಲಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 08 ಈಸಪ 2011, ಬೆಂಗಳೂರು ದಿನಾಂಕ: 5ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ದಿನಾಂಕ : 28–05–2012 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನದಂತೆ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಲ್ಲಿ ಕೆಳಕಂಡಂತೆ ಡಾಟಾ ಎಂಟ್ರಿ ಆಪರೇಟರುಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

(ಅ) ಸಾರಿಗೆ ಇಲಾಖೆಯ ಸಾರಿಗೆ ನಿಗಮಗಳು : ಬಸ್ ಪಾಸುಗಳಿಗೆ ಈಗ ಬೇಡಿಕೆಯಿರುವುದರಿಂದ ಸಾರಿಗೆ ನಿಗಮಗಳು ಮೂರು ತಿಂಗಳ ಅವಧಿಗೆ ಮಾತ್ರ ಸೀಮಿತಗೊಳಿಸಿ ಅತ್ಯಂತ ಅವಶ್ಯವಾಗಿ ಬೇಕಾದಂತಹ ಕನಿಷ್ಠ ಸಂಖ್ಯೆಯಲ್ಲಿ ಡಾಟಾ ಎಂಟ್ರಿ ಆಪರೇಟರುಗಳನ್ನು ನೇಮಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ.

(ಆ) ಶಿಕ್ಷಣ ಇಲಾಖೆ : 20 ಹುದ್ದೆಗಳು

(ಇ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ : 30 ಹುದ್ದೆಗಳು (ಜಿಲ್ಲೆಗೆ ಒಂದರಂತೆ)

ಮೇಲಿನ ಡಾಟಾ ಎಂಟ್ರಿ ಆಪರೇಟರುಗಳನ್ನು ಇಲಾಖೆಯಲ್ಲಿ ಮಂಜೂರಾಗಿರುವ ಹುದ್ದೆಗಳಲ್ಲಿ ಖಾಲಿ ಇರುವ ಬೆರಳಚ್ಚುಗಾರರು/ದ್ವಿತೀಯ ದರ್ಜೆ ಸಹಾಯಕರು ಹುದ್ದೆಗಳೆದುರಾಗಿ ಸದರಿ ಹುದ್ದೆಗಳು ನಿಯಮಾನುಸಾರ ಭರ್ತಿಯಾಗುವವರೆಗೆ ಅಥವಾ ಆರು ತಿಂಗಳ ಅವಧಿಗೆ ಸಂಚಿತ ವೇತನದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳತಕ್ಕದ್ದು.

ಈ ಮೇಲಿನ ನೇಮಕಾತಿಗಳಿಗೆ ತಗಲುವ ವೆಚ್ಚವನ್ನು ಸಂಬಂಧಿತ ಇಲಾಖೆಗಳು ಆಯಾ ಇಲಾಖೆಗಳ ಕಚೇರಿ ವೆಚ್ಚಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸುವುದು.

ಈ ಆದೇಶವನ್ನು ದಿನಾಂಕ : 28–05–2012 ರಂದು ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1576

ಕೆ.ಜಿ. ಶಶಿಕಲಾ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ.)

ಸಿಆಸುಇ (ಆಸು–ಕಾರ್ಯಾಧ್ಯಯನ)

ಇಂಧನ ಸಚಿವಾಲಯ

ವಿಷಯ : ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ 2005–06ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಪವನ ವಿದ್ಯುತ್ ಯೋಜನೆ ಸಾಮರ್ಥ್ಯದಲ್ಲಿ ಪ್ರಗತಿ ಕಾಣದ ಯೋಜನೆಗಳನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 283 ಎನ್‌ಸಿಇ 2005, ದಿನಾಂಕ : 14–10–2005.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 284 ಎನ್‌ಸಿಇ 2005, ದಿನಾಂಕ : 14–10–2005.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 463 ಎನ್‌ಸಿಇ 2006, ದಿನಾಂಕ : 22–12–2006.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : KRED/08VWTIPL-36.3 MW/2011/4717 ದಿನಾಂಕ : 24–12–2011.

5. ಕಾರಣ ಕೇಳುವ ನೋಟೀಸ್ ಸಂಖ್ಯೆ ಇಎನ್ 441 ಎನ್ ಸಿಇ 2011 ದಿನಾಂಕ : 18-04-2012.

6. ಅಭಿವೃದ್ಧಿದಾರರ ಪತ್ರ ದಿನಾಂಕ : 26-04-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ॥ ಎನ್.ಇ.ಜಿ. ಮೈಕಾನ್ ಇಂಡಿಯ ಲಿಮಿಟೆಡ್ ಕಂಪನಿಗೆ ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ಒಟ್ಟು 26.4 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಕೆಲವೊಂದು ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (2) ರ ಸರ್ಕಾರಿ ಆದೇಶದಲ್ಲಿ ಮೆ॥ ಎನ್.ಇ.ಜಿ. ಮೈಕಾನ್ ಇಂಡಿಯಾ ಲಿಮಿಟೆಡ್ ಕಂಪನಿಗೆ ಬೆಳಗಾಂ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಒಟ್ಟು 9.9 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಕೆಲವೊಂದು ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (3) ರ ಸರ್ಕಾರಿ ಆದೇಶದಲ್ಲಿ ಮೆ॥ ಎನ್.ಇ.ಜಿ. – ಮೈಕಾನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರನ್ನು ಮೆ॥ ವೆಸ್ಟಾಸ್ ವಿಂಡ್ ಟೆಕ್ನಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಗೆ 2005-06 ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಮೇಲ್ಕಂಡ 36.30 ಮೆ.ವ್ಯಾ. ಪವನ ವಿದ್ಯುತ್ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಕಾಣದೇ ಇರುವ ಕಾರಣ ಸದರಿ ಯೋಜನೆಗಳನ್ನು ರದ್ದುಪಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಮೆ॥ ವೆಸ್ಟಾಸ್ ಏಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿಯನ್ನು ಸಾಧಿಸಿಲ್ಲದ್ದರಿಂದ ಅಭಿವೃದ್ಧಿದಾರರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಕಾರಣ ಕೇಲುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಪತ್ರದಲ್ಲಿ ಅಭಿವೃದ್ಧಿದಾರರು ಕಾರಣ ಕೇಳುವ ನೋಟೀಸಿಗೆ ಉತ್ತರಿಸುತ್ತಾ ಸದರಿ ಯೋಜನೆಯು ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಬರುತ್ತಿದ್ದು ಅರಣ್ಯ ಇಲಾಖೆಯು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಒಂದು ನಿರ್ಣಯವನ್ನು ಕೈಗೊಳ್ಳುವವರೆಗೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ.

ಯೋಜನೆಯು 2005-06 ನೇ ಸಾಲಿನಲ್ಲಿ ಹಂಚಿಕೆಯಾಗಿದ್ದರೂ ಸಹ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಾಗೂ ಸದರಿ ಯೋಜನೆಗಳು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಬರುವುದರಿಂದ ಮತ್ತು ಅರಣ್ಯ ಇಲಾಖೆಯ ವಿಂಡ್ ಮಾಸ್ಟ್ ಹಾಕಲು ನೀಡಲಾಗಿದ್ದ ಅನುಮತಿಯನ್ನು ಪಡೆದಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ : ಇನ್ 441 ಎನ್ ಸಿಇ 2011, ಬೆಂಗಳೂರು, ದಿನಾಂಕ: 28ನೇ ಮೇ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೆ॥ ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಸರ್ಕಾರಿ ಆದೇಶ ಸಂಖ್ಯೆ ಇಎನ್ 283 ಎನ್ ಸಿಇ 2005 ದಿನಾಂಕ : 14-10-2005 ಮತ್ತು ಆದೇಶ ಸಂಖ್ಯೆ ಇಎನ್ 284 ಎನ್‌ಸಿಇ 2005 ದಿನಾಂಕ : 14-10-2005 ರಲ್ಲಿ ಈ ಕೆಳಗೆ ವಿವರಿಸಿರುವಂತೆ ಪಂಚಿಕೆಯಾಗಿರುವ ಒಟ್ಟು 36.30 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ	ಯೋಜನಾ ಸ್ಥಳ	ಸಾಮರ್ಥ್ಯ (ಮೆಗಾವ್ಯಾಟ್ ಗಳಲ್ಲಿ)
ಇನ್ 283 ಎನ್ ಸಿ ಇ 2005 ದಿನಾಂಕ : 14-10-2005	ಉತ್ತರ ಕನ್ನಡ ಜಿಲ್ಲೆಯ ನ್ಯಾಸರ್ಗಿ, ಸನ್ವಳ್ಳಿ, ಅಯ್ಯನ್ಕೇರಿಗುಡ್ಡ ಮತ್ತು ಯಲ್ಲಾಪುರ ಗ್ರಾಮಗಳಲ್ಲಿ	26.4
ಇನ್ 284 ಎನ್ ಸಿಇ 2005 ದಿನಾಂಕ : 14-10-2005	ಬೆಳಗಾವಿ ಜಿಲ್ಲೆಯ ಚಂದು ಡೊಂಗಾರ್, ಸಂಶೇರ್ಗಡ್ ಮತ್ತು ಸವರ್ಗಾಲಿ.	9.9
	ಒಟ್ಟು	36.30

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್.1577

ಇಂಧನ ಸಚಿವಾಲಯ

ವಿಷಯ : ಮೆ॥ ಎನ್‌ಎಸ್‌ಬಿ ಇನ್ಫ್ರಾಸ್ಟ್ರಕ್ಚರ್ ಮತ್ತು ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ 0.85 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ॥ ಆರ್ ಎಸ್ ಆರ್ ಪವರ್ ಪ್ರೈವೇಟ್ ಲಿಮಿಟೆಡ್ ರವರಿಂದ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 337 ಎನ್‌ಸಿಇ 2006, ದಿನಾಂಕ : 16-10-2006.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 9 ಎನ್‌ಸಿಇ 2007, ದಿನಾಂಕ : 12-01-2007.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 432 ಎನ್‌ಸಿಇ 2010, ದಿನಾಂಕ : 16-12-2010.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : KRED/08/NSBIPPL-10-20 MW (RSR 30.6)/2011/2684 ದಿನಾಂಕ : 09/10-09-2011.
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : KRED/08/NSBIPPL-10-20 MW (RSR 30.6)/2012/1434 ದಿನಾಂಕ : 18/05-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ॥ ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಕಂಪನಿಗೆ ದಾವಣಗೆರೆ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 63 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (2) ರ ಸರ್ಕಾರಿ ಆದೇಶದಲ್ಲಿ ಮೆ॥ ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಹೆಸರನ್ನು ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (3) ರ ಆದೇಶದಲ್ಲಿ ಹಂಚಿಕೆಯಾಗಿರುವ ಒಟ್ಟು ಸಾಮರ್ಥ್ಯದ ಅಂಶಿಕ ಸಾಮರ್ಥ್ಯವಾಗಿರುವ 7 ಮೆ.ವ್ಯಾ. ಸಾಮರ್ಥ್ಯವನ್ನು 30.60 ಮೆ.ವ್ಯಾ.ಗೆ ಹೆಚ್ಚಿಸಿ ಬೆಳಗಾವಿ ಜಿಲ್ಲೆಯ, ಶಿರ್ಗಾಂವ್, ನಗರಹಾಳ್ ಮತ್ತು ಗಿರ್ಗಾಂವ್ ಇಲ್ಲಿ ಅನುಷ್ಠಾನ ಮಾಡಲು ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಅನುಮತಿಸಲಾದ 30.6 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 10.20 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ॥ ಎನ್‌ಎಸ್‌ಬಿ ಇನ್ಫ್ರಾಸ್ಟ್ರಕ್ಚರ್ ಮತ್ತು ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಸದರಿ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದ ಸಮಯದಲ್ಲಿ ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಮೆ॥ ಎನ್‌ಎಸ್‌ಬಿ ಇನ್ಫ್ರಾಸ್ಟ್ರಕ್ಚರ್ ಮತ್ತು ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಹಣಕಾಸಿನ ತೊಂದರೆಯನ್ನು ಎದುರಿಸುತ್ತಿರುವುದರಿಂದ ವರ್ಗಾವಣೆ ಆದೇಶವನ್ನು ತಡೆಹಿಡಿಯುವಂತೆ ಕೋರಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಪರಿಶೀಲಿಸಿ ವರದಿ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಮಿತ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ : ಮೆ॥ ಆರ್ ಎಸ್ ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಅನುಮತಿಸಲಾದ 30.6 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ0.85 ಮೆ.ವ್ಯಾ. (GNS-19) ಸಾಮರ್ಥ್ಯದ ಯೋಜನೆಯನ್ನು ಮೆ॥ ಎನ್ ಎಸ್ ಬಿ ಇನ್ಫ್ರಾಸ್ಟ್ರಕ್ಚರ್ ಮತ್ತು ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ವರ್ಗಾಯಿಸುವ ಅಭಿವೃದ್ಧಿದಾರರ ಕೋರಿಕೆಯನ್ನು ಪರಿಗಣಿಸಬಹುದಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಮೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ತಿಳಿಸಿರುತ್ತಾರೆ ಹಾಗೂ ಪ್ರಸ್ತಾವಿತ ಅಭಿವೃದ್ಧಿದಾರರು ಈ ಯೋಜನೆಯನ್ನು ದಿನಾಂಕ : 30-06-2012ರೊಳಗೆ ಅನುಷ್ಠಾನಗೊಳಿಸಲಾಗುವುದೆಂದು ಮತ್ತು ಉತ್ಪಾದನೆ ಆಗುವ ವಿದ್ಯುತ್ತನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದದ ಮೂಲಕ ಸರಬರಾಜು ಮಾಡಲಾಗುವುದೆಂದು ತಿಳಿಸಿರುತ್ತಾರೆಂದು ವರದಿ ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ : ಇಎನ್ 362 ಎನ್‌ಸಿಇ 2011, ಬೆಂಗಳೂರು, ದಿನಾಂಕ: 4ನೇ ಜೂನ್ 2012

ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಅನುಮತಿಸಲಾದ 30.6 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.85 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ॥ ಎನ್ ಎಸ್ ಬಿ ಇನ್ಫ್ರಾಸ್ಟ್ರಕ್ಚರ್ ಮತ್ತು ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಈ ಕೆಳಕಂಡ ಶೆಡ್ಯೂಲ್ ನಲ್ಲಿ ವಿವರಿಸಿರುವಂತೆ ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲು ಸರ್ಕಾರದ ಅನುಮತಿ ನೀಡಲಾಗಿದೆ :-

Village Name	Taluk & District	Land survey Number	Estent in Land (Ac)	WTG Number
Nej	Chikkodi/Belgau m	50	2 Acres per WTG of capacity 0.85 MW	GNS-19

1. ಮೆ॥ ಎನ್ ಎಸ್ ಬಿ ಇನ್ಫ್ರಾಸ್ಟ್ರಕ್ಚರ್ ಮತ್ತು ಪ್ರಾಜೆಕ್ಟ್ಸ್ ಲಿಮಿಟೆಡ್ ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್ ಸಿಇ 06–01–2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಮೆ॥ ಎನ್ ಎಸ್ ಬಿ ಇನ್ಫ್ರಾಸ್ಟ್ರಕ್ಚರ್ ಮತ್ತು ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ಮಾಡಿಕೊಳ್ಳತಕ್ಕದ್ದು.
3. ಸದರಿ ಯೋಜನೆಯನ್ನು ದಿನಾಂಕ : 30–06–2012 ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು. (Commitment letter)
4. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್.1578 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ 2012–13ರ ಹಣಕಾಸು ವರ್ಷದಲ್ಲಿ ಮೊದಲ ತ್ರೈಮಾಸಿಕ ಅವಧಿಗೆ ಕಂತು ಸಹಾಯಾನುದಾನದ ಹಣ ಬಿಡುಗಡೆ ಕುರಿತು.

ಓದಲಾಗಿದೆ : ಕವಿನಿ ಆಯೋಗದ ಪತ್ರ ಸಂಖ್ಯೆ : ನಂ. ಎಫ್/01/3/772 ದಿನಾಂಕ : 11–05–2012.

ಪ್ರಸ್ತಾವನೆ :

1. 2012–13 ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಹಾಯನುದಾನ ಸಲುವಾಗಿ ರೂ. 425.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಈ ಸಹಾಯಾನುದನವನ್ನು 4 ಕಂತುಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.
2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ 2012–14 ನೇ ಸಾಲಿಗೆ ಮೊದಲ ತ್ರೈಮಾಸಿಕ ಅವಧಿಗೆ ಸಹಾಯಾನುದನ ರೂ. 106.25 ಲಕ್ಷಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗಕ್ಕೆ ಬಿಡುಗಡೆ ಮಾಡು ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 19 ಪಿಎಸ್ ಆರ್ 2012, ಬೆಂಗಳೂರು, ದಿನಾಂಕ: 2ನೇ ಜೂನ್ 2012

ಸರ್ಕಾರವು, 2012–13ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕ ಅವಧಿಗೆ ಲೆಕ್ಕ ಶೀರ್ಷಿಕೆ "2801–80–101–1–07–101 ಸಹಾಯಾನುದಾನ (ಯೋಜನೇತರ)" ಯಡಿ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ ರೂ. 106.25/– ಲಕ್ಷ (ಒಂದು ನೂರ ಆರು ಲಕ್ಷ ಮತ್ತು ಇಪ್ಪತ್ತೈದು ಸಾವಿರ ರೂ.ಗಳು ಮಾತ್ರ) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಿ ಆದೇಶಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ ಇವರ ಮೇಲು ರುಜುವನ್ನು "Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2012 ದಿನಾಂಕ: 27–04–2012 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಪಿ.ಆರ್.1579

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ 09 ದ್ವಿತೀಯ ದರ್ಜೆ ಸಹಾಯಕರ ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂ:ಲಾ 130 ಎಲ್ಎಜಿ 79, ದಿನಾಂಕ:07-10-1980
2. ಸರ್ಕಾರದ ಆದೇಶ ಸಂ:ಒಇ 428 ಪಿಪಿಇ 2010, ದಿನಾಂಕ:13-07-2011.
3. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ:ಡಿಪಿಎನ್/ಕೇಂಸ/ವಿವ/33/2011-12, ದಿನಾಂಕ:07-07-2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ:07-10-1980ರ ಸರ್ಕಾರದ ಆದೇಶದನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ 23 ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಮೊದಲಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:13-07-2011ರ ಸರ್ಕಾರದ ಆದೇಶದನ್ವಯ, ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಸೃಜಿಸಲಾದ 23 ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಲ್ಲಿ 02 ಹುದ್ದೆಗಳು ರದ್ದಾಗಿದ್ದರಿಂದ, ಇನ್ನುಳಿದ 21 ತಾತ್ಕಾಲಿಕ ಹುದ್ದೆಗಳನ್ನು ಕಾಲ-ಕಾಲಕ್ಕೆ ಮುಂದುವರಿಸಿಕೊಂಡು ಬಂದು, ಪ್ರಸ್ತುತ ದಿನಾಂಕ:31-03-2012ರವರೆಗೆ ಮುಂದುವರೆಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ದಿನಾಂಕ:07-07-2011ರ ಪತ್ರದಲ್ಲಿ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ಸೃಜಿಸಿ ಕಾಲ-ಕಾಲಕ್ಕೆ ಮುಂದುವರಿಸಿಕೊಂಡು ಬಂದು ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ದಿನಾಂಕ:31-03-2012ರವರೆಗೆ ಮುಂದುವರೆಸಿರುವ ತಾತ್ಕಾಲಿಕ ಹುದ್ದೆಗಳಲ್ಲಿ 09 ಹುದ್ದೆಗಳನ್ನು ಖಾಯಂಗೊಳಿಸುವುದು ಇಲಾಖೆಯ ದೈನಂದಿನ ಆಡಳಿತಾತ್ಮಕ ಕಾರ್ಯದ ದೃಷ್ಟಿಯಿಂದ ಅತಿ ಅವಶ್ಯಕ ಹುದ್ದೆಗಳಾಗಿದ್ದು, ಇವುಗಳನ್ನು ಇಲಾಖೆಯ ಹಿತದೃಷ್ಟಿಯಿಂದ ಅವಶ್ಯಕವಾಗಿದೆ. ಆದ್ದರಿಂದ, ಸದರಿ 09 ದ್ವಿತೀಯ ದರ್ಜೆ ಸಹಾಯಕರ ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸದರ್‍ರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 297 ಪಿಪಿಇ 2011, ಬೆಂಗಳೂರು, ದಿನಾಂಕ: 02ನೇ ಜೂನ್ 2012

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಈ ಮುಂದಿನ ಅಂಕಣ (2)ರಲ್ಲಿನ ಕಛೇರಿಗಳಿಗೆ ಹೊಂದಿಕೊಂಡಂತೆ ಅಂಕಣ (3)ರ ಸರ್ಕಾರಿ ಆದೇಶದನ್ವಯ ಸೃಜನೆಯಾಗಿರುವ 09 ದ್ವಿತೀಯ ದರ್ಜೆ ಸಹಾಯಕರ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸಿದೆ.

ಕ್ರಸಂ.	ಕಛೇರಿ	ಹುದ್ದೆಯ ಮಂಜೂರಾದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ
(1)	(2)	(3)
1	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 130 ಎಲ್ಎಜಿ 79, ದಿನಾಂಕ:07-10-1980
2.	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	ಲಾ 130 ಎಲ್ಎಜಿ 79, ದಿನಾಂಕ:07-10-1980
3	ಸರ್ಕಾರಿ ಅಭಿಯೋಜಕರ ಕಛೇರಿ, ಬೆಂಗಳೂರು ನಗರ	ಲಾ 130 ಎಲ್ಎಜಿ 79, ದಿನಾಂಕ:07-10-1980
4	ಸರ್ಕಾರಿ ಅಭಿಯೋಜಕರ ಕಛೇರಿ, ಬೆಂಗಳೂರು ನಗರ	ಲಾ 130 ಎಲ್ಎಜಿ 79, ದಿನಾಂಕ:07-10-1980
5	ಸರ್ಕಾರಿ ಅಭಿಯೋಜಕರ ಕಛೇರಿ, ಬೆಂಗಳೂರು ಗ್ರಾಮಾಂತರ	ಲಾ 130 ಎಲ್ಎಜಿ 79, ದಿನಾಂಕ:07-10-1980
6	ಸರ್ಕಾರಿ ಅಭಿಯೋಜಕರ ಕಛೇರಿ, ತುಮಕೂರು	ಲಾ 130 ಎಲ್ಎಜಿ 79, ದಿನಾಂಕ:07-10-1980

7	ಸರ್ಕಾರಿ ಅಭಿಯೋಜಕರ ಕಛೇರಿ, ಕೋಲಾರ	ಲಾ 130 ಎಲ್‌ಎಜಿ 79, ದಿನಾಂಕ:07-10-1980
8	ಸರ್ಕಾರಿ ಅಭಿಯೋಜಕರ ಕಛೇರಿ, ಮೈಸೂರು	ಲಾ 130 ಎಲ್‌ಎಜಿ 79, ದಿನಾಂಕ:07-10-1980
9.	ಸರ್ಕಾರಿ ಅಭಿಯೋಜಕರ ಕಛೇರಿ, ಮಂಡ್ಯ	ಲಾ 130 ಎಲ್‌ಎಜಿ 79, ದಿನಾಂಕ:07-10-1980

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ '2014-ನ್ಯಾಯಾಪರಿಪಾಲನೆ-00-114-ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು-0-02 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು' ಇದರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಸರ್ಕಾರದ ಆದೇಶ ಸಂ:ಎಫ್‌ಡಿ 58 ಎಸ್‌ಆರ್‌ಎಸ್ 79, ದಿನಾಂಕ:27-09-1979ರ ಕಂಡಿಕೆ 2 (iii) ರನ್ವಯ ಹಾಗೂ ಆರ್ಥಿಕ ಇಲಾಖೆ ಟಿಪ್ಪಣಿ ಸಂ:ಆಇ 88 ವೆಚ್ಚ-11/2012, ದಿನಾಂಕ:09-05-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1591

ಹೆಚ್.ಕೆ.ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ,
(ಪೊಲೀಸ್ ಸೇವೆಗಳು-ಬಿ)

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಸಂಕೇಶ್ವರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ.2700.00 ಲಕ್ಷಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಒಳ ಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ:ಕಜಮಂ/ ಮುಅ(ಉ)/ಆಶ್ರೇಕಾಅ(ಬಿಜಿಎಂ)/ಉಮುಅ-1/ತಾ.ಸ.-2/ಸಅ-5/ಸಂಕೇಶ್ವರ.ಒ.ಚ.ಯೋ/ 3559/2011-12, ದಿ:22-01-2012.

ಪ್ರಸ್ತಾವನೆ :

ಸಂಕೇಶ್ವರ ಪಟ್ಟಣವು ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕಿನ ಪಟ್ಟಣವಾಗಿದ್ದು, 2001ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆಯು 32511 ಇದ್ದು ಪ್ರಸ್ತುತ 35000 ಇರುತ್ತದೆ, 2030ರ ಮಧ್ಯಂತರ ಅವಧಿಯಲ್ಲಿ 53,000 ಹಾಗೂ 2045ರಲ್ಲಿ 72,000 ಆಗಬಹುದೆಂದು ನಿರೀಕ್ಷಿಸಲಾಗಿದೆ. ಸಂಕೇಶ್ವರ ಪಟ್ಟಣಕ್ಕೆ ಪ್ರಸ್ತುತ ಘಟಪ್ರಭಾ ಮತ್ತು ಹಿರಣ್ಯಕೇಶಿ ನದಿಗಳಿಂದ ಹಾಗೂ ಪ್ರಾದೇಶಿಕ ನೀರು ಸರಬರಾಜು ಯೋಜನೆಯಡಿ ಹುಕ್ಕೇರಿ ಸಂಕೇಶ್ವರ ಹಾಗೂ ಮಾರ್ಗ ಮಧ್ಯದ 16 ಹಳ್ಳಿಗಳಿಗೆ ಘಟಪ್ರಭಾ ನದಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಹಿರಣ್ಯಕೇಶಿ ನದಿಯಿಂದ ನೀರು ಸರಬರಾಜು ಯೋಜನೆಯನ್ನು 1971ರಲ್ಲಿ ಮತ್ತು ಘಟಪ್ರಭಾ ನದಿಯಿಂದ 1999ರಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಿಂದ ಪಟ್ಟಣಕ್ಕೆ 3.5 ಎಂ.ಜಿ.ಡಿ., ಮತ್ತು 0.75 ಎಂ.ಜಿ.ಡಿ. ನೀರನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತುತ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ, ಪಟ್ಟಣದ ಜನತೆಯು ಸೋಕ್ ಪಿಟ್‌ಗಳನ್ನು ಮತ್ತು ಸೆಪ್ಟಿಕ್ ಟ್ಯಾಂಕ್‌ಗಳನ್ನು ಉಪಯೋಗಿಸುತ್ತಿದ್ದು, ಮಲಿನ ನೀರನ್ನು ತೆರೆದ ಒಳಚರಂಡಿಗಳಿಗೆ ಹರಿಯಲು ಬಿಡುತ್ತಿದ್ದು, ಇದರಿಂದಾಗಿ ನೈರ್ಮಲ್ಯ ಸಮಸ್ಯೆ ಹಾಗೂ ಅಂತರ್ಜಲ ಮತ್ತು ಮೇಲ್ಮೈ ನೀರಿನ ಮೂಲ ಕಲುಷಿತಗೊಳ್ಳುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವ ಸಾಧ್ಯತೆ ಇದೆ ಆದ್ದರಿಂದ ಒಳಚರಂಡಿ ಯೋಜನೆ ಕಲ್ಪಿಸುವುದು ಅವಶ್ಯಕವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಯೋಜನೆಯ ಆರ್ಥಿಕ ಮಾದರಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 07 ಯುಡಬ್ಲ್ಯೂಎಸ್ 2011, ದಿನಾಂಕ:20-07-2011ರಲ್ಲಿ ಹೊರಡಿಸಲಾದ ಹೊಸ ಆರ್ಥಿಕ ಮಾದರಿ ನಿಗದಿಪಡಿಸಿದಂತೆ ಸದರಿ ಪಟ್ಟಣವು ಪುರಸಭೆ ವ್ಯಾಪ್ತಿಯಲ್ಲಿ ಬರುವುದರಿಂದ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಅನುದಾನ (75%)	ರೂ. 2025.00 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (20%)	ರೂ. 540.00 ಲಕ್ಷಗಳು
ಪುರಸಭೆಯ ಪಾಲು (05%)	ರೂ. 135.00 ಲಕ್ಷಗಳು
ಒಟ್ಟು	ರೂ.2700.00 ಲಕ್ಷಗಳು

ಈ ಯೋಜನೆಯನ್ನು ಮಂಡಳಿಯ 2011-12ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿ ಸೇರಿಸಿ ರೂ.900.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಯೋಜನೆಯಲ್ಲಿನ ಇಟಿಪಿ ಮತ್ತು ಸಾಧಿಲ್ವಾರು ವೆಚ್ಚಗಳನ್ನು ಶೇಕಡ 5ಕ್ಕೆ ಮಿತಿಗೊಳಿಸಲು ಯೋಜನೆಯ ಮೂಲ ಅಂದಾಜು ಮೊತ್ತವಾದ ರೂ.1886.10 ಲಕ್ಷಗಳಿಗೆ ಶೇಕಡ 5ರಂತೆ ಇಟಿಪಿ ಮತ್ತು ಸಾಧಿಲ್ವಾರು ವೆಚ್ಚಗಳಾದ ರೂ.94.31 ಲಕ್ಷಗಳನ್ನು ಇತರೆ ವೆಚ್ಚಗಳಾದ ರೂ.0.59 ಲಕ್ಷಗಳು ಸೇರಿಸಿ ಯೋಜನೆಯ ಅಂದಾಜನ್ನು ರೂ.1981.00 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿರುತ್ತದೆ. ಇದಲ್ಲದೆ ಯೋಜನೆಯಡಿಯಲ್ಲಿ ಕಾಮಗಾರಿಗಳ ಪ್ರಗತಿಯಲ್ಲಿ

ಉದ್ಭವಿಸಬಹುದಾದ ಎಸ್ಕಲೇಷನ್ ಮತ್ತು ಟೆಂಡರ್ ಪ್ರೀಮಿಯಂ ದರಗಳನ್ನು ಸ್ಥಳೀಯ ಸಂಸ್ಥೆಯೇ ಭರಿಸಲು ಒಪ್ಪಿರುವುದರಿಂದ ಈ ಮೊತ್ತವನ್ನು ಯೋಜನೆಯ ಅಂದಾಜಿನಿಂದ ಕೈಬಿಡಲಾಗಿದೆ.

ಸದರಿ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 03 ಯುಡಿಎಸ್ 2012 ಬೆಂಗಳೂರು, ದಿನಾಂಕ: 05ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಂಕೇಶ್ವರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ.1981.00 ಲಕ್ಷಗಳಲ್ಲಿ (ರೂ.ಒಂದು ಸಾವಿರದ ಒಂಭೈನೂರ ಎಂಬತ್ತೊಂದು ಲಕ್ಷಗಳು ಮಾತ್ರ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) The board shall invite the tender immediately after the handing over the land required under the scheme in order to avoid time and cost run over.
3) Adequate provision to be made by the Board in the following Years for timely completion of the Project.
4) Escalation and Tender premium should be borne by the ULB.
5) Water rates as proposed by KUWS&DB have to be implemented to meet) O & M cost of UGD.
6) KTPP provisions, quality control and timely completion should be ensured.
7) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
8) ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.
9) ಸರ್ಕಾರವು ಯೋಜನೆಯ ಆರ್ಥಿಕ ಮಾದರಿಯನ್ನು ಬದಲಾಯಿಸಿ ಆದೇಶ ಹೊರಡಿಸಿರುವ ಹಿನ್ನಲೆಯಲ್ಲಿ ಯೋಜನೆಗಳ ಆರ್ಥಿಕ ಮಾದರಿಗಳನ್ವಯ ರಾಜ್ಯಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು/ಸಾಲವನ್ನು ಯೋಜನಾ ಆರ್ಥಿಕ ಮಾದರಿಗಳಂತೆ ಸೂಕ್ತವಾಗಿ ಮಾರ್ಪಡಿಸಲು ಸೂಕ್ತ ಕ್ರಮವನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳತಕ್ಕದ್ದು ಈ ನಿಟ್ಟಿನಲ್ಲಿ ಅಗತ್ಯವಿದ್ದರೆ ಲೆಕ್ಕಶೀರ್ಷಿಕೆಗಳ ಮರು ಹೊಂದಾಣಿಕೆಯನ್ನು ಸದರಿ ಇಲಾಖೆಯೊಂದಿಗೆ ವ್ಯವಹರಿಸಿ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 122 Exp-9:2011, ದಿನಾಂಕ:09-04-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1592

ಟಿ.ಎಂ.ವಾಸುದೇವರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಕೂಡ್ಲಿಗಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ.3154.00 ಲಕ್ಷಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಒಳ ಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ:ಕಜಮಂ/ಮುಅ(ಉ)/ಅಶ್ರೇಕಾಅ (ಗು)/ಉಮುಅ-2/ತಾ.ಸ.-1/ಸಅ-4/ 3561 / 2011-12, ದಿ:25-01-2012.

ಪ್ರಸ್ತಾವನೆ :

ಕೂಡ್ಲಿಗಿ ಪಟ್ಟಣವು ಬಳ್ಳಾರಿ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆಯು 21849 ಇದ್ದು ಪ್ರಸ್ತುತ ಜನಸಂಖ್ಯೆ 25,000 ಇರುತ್ತದೆ. ಹಾಲಿ ಈ ಪಟ್ಟಣಕ್ಕೆ ತುಂಗಭದ್ರಾ ನದಿಯಿಂದ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಮತ್ತು ಕೊಟ್ಟೂರು ಪಟ್ಟಣಗಳಿಗೆ ಸಂಯುಕ್ತ ನೀರು ಸರಬರಾಜು ಯೋಜನೆಯನ್ನು ಸದರಿ ಪಟ್ಟಣಗಳ ಜನಸಂಖ್ಯೆಯು 2016ರಲ್ಲಿ 95000 ಮತ್ತು 2031ರಲ್ಲಿ 1,31,000 ಆಗಬಹುದೆಂದು ಅಂದಾಜಿಸಿ ತಲಾ ದಿನಂ ಪ್ರತಿ 70 ಎಲ್.ಪಿ.ಸಿ.ಡಿ. ನೀರನ್ನು ಒದಗಿಸಲು ಯೋಜನೆ ರೂಪಿಸಿ, 2007ರಲ್ಲಿ ಚಾಲನೆಗೊಳಿಸಲಾಗಿದೆ. ಪ್ರಸ್ತುತ ಕೂಡ್ಲಿಗಿ ಪಟ್ಟಣಕ್ಕೆ 5.45 ಎಂ.ಎಲ್.ಡಿ. ನೀರನ್ನು ಅಂದರೆ 2.51 ಎಂ.ಎಲ್.ಡಿ. ಮೇಲಿನ ಯೋಜನೆಯಿಂದ ಮತ್ತು 2.94 ಎಂ.ಎಲ್.ಡಿ. ಕೊಳವೆ ಬಾವಿಗಳ ಮೂಲದಿಂದ ಒಟ್ಟು ಸೇರಿ ತಲಾ ದಿನಂ ಪ್ರತಿ 135 ಲೀಟರ್ ನೀರು ಸರಬರಾಜು ಮಾಡಲಾಗುತ್ತದೆ.

ಈ ಪಟ್ಟಣಕ್ಕೆ ಪ್ರಸ್ತುತ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಹೆಚ್ಚಿನ ಮನೆಯವರು ಸೋಕ್ ಪಿಟ್, ಸೆಪ್ಟಿಕ್ ಟ್ಯಾಂಕ್ ಇತ್ಯಾದಿ ವ್ಯವಸ್ಥೆಗಳನ್ನು ಮಾಡಿಕೊಂಡಿರುತ್ತಾರೆ. ಮತ್ತು ಕೆಲವು ಪ್ರದೇಶಗಳಲ್ಲಿ ಮಲಿನ ನೀರನ್ನು ತೆರೆದ ಚರಂಡಿಗೆ ಹರಿಯಲು ಬಿಡುತ್ತಿದ್ದು, ಇದರಿಂದ ಮೇಲ್ಮೈ ಜಲಮೂಲ ಹಾಗೂ ಅಂತರ್ ಜಲ ನೀರು ಕಲುಷಿತಗೊಳ್ಳುತ್ತಿದ್ದು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಆದ್ದರಿಂದ ಶಾಶ್ವತ ಪರಿಹಾರಕ್ಕಾಗಿ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ ಶಾಶ್ವತ ಪರಿಹಾರಕ್ಕಾಗಿ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ

ಕಲ್ಪಿಸುವುದು ಅವಶ್ಯವಾಗಿರುತ್ತದೆ. ಈ ಯೋಜನೆಯನ್ನು 2030ರಲ್ಲಿ 42738 ಹಾಗೂ 2045ರಲ್ಲಿ 60204 ಜನಸಂಖ್ಯೆಯನ್ನು ನಿರೀಕ್ಷಿಸಿ ಯೋಜನೆಯನ್ನು ರೂಪಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಯೋಜನೆಯ ಆರ್ಥಿಕ ಮಾದರಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 07 ಯುಡಬ್ಲ್ಯೂಎಸ್ 2011, ದಿನಾಂಕ:20-07-2011ರಲ್ಲಿ ಹೊರಡಿಸಲಾದ ಹೊಸ ಆರ್ಥಿಕ ಮಾದರಿ ನಿಗದಿಪಡಿಸಿದಂತೆ ಈ ಕೆಳಕಂಡ ಆರ್ಥಿಕ ಮಾದರಿಯಂತೆ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಅನುದಾನ (95%)	ರೂ. 2996.30 ಲಕ್ಷಗಳು
ಸ್ಥಳೀಯ ಸಂಸ್ಥೆಯ ಕೊಡುಗೆ (05%)	ರೂ. 157.70 ಲಕ್ಷಗಳು
ಒಟ್ಟು	ರೂ. 3154.00 ಲಕ್ಷಗಳು

ಈ ಯೋಜನೆಯನ್ನು ಮಂಡಳಿಯ 2011-12ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿ ಸೇರಿಸಿ ರೂ.1000.00 ಲಕ್ಷಗಳನ್ನು ಒದಗಿಸಲಾಗಿದೆ.

ಯೋಜನೆಯಲ್ಲಿ ಇಟಿಪಿ ಮತ್ತು ಸಾಧಿಲ್ವಾರು ವೆಚ್ಚಗಳನ್ನು ಶೇಕಡ 5ಕ್ಕೆ ಮಿತಿಗೊಳಿಸಲು ಯೋಜನೆಯ ಮೂಲ ಅಂದಾಜು ಮೊತ್ತವಾದ ರೂ.2377.85 ಲಕ್ಷಗಳಿಗೆ ಶೇಕಡ 5ರಂತೆ ಇಟಿಪಿ ಮತ್ತು ಸಾಧಿಲ್ವಾರು ವೆಚ್ಚಗಳಾದ ರೂ.119.00 ಲಕ್ಷಗಳನ್ನು ಠೇವಣಿ ಮೊತ್ತವಾದ ರೂ. 10.00 ಲಕ್ಷಗಳನ್ನು ಇತರ ವೆಚ್ಚಗಳಾದ ರೂ.0.15 ಲಕ್ಷಗಳು ಸೇರಿಸಿ ಯೋಜನೆಯ ಅಂದಾಜನ್ನು ರೂ.2507.00 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿರುತ್ತದೆ. ಇದಲ್ಲದೆ ಯೋಜನೆಯಡಿಯಲ್ಲಿ ಕಾಮಗಾರಿಗಳ ಪ್ರಗತಿಯಲ್ಲಿ ಉದ್ಭವಿಸಬಹುದಾದ ಎಸ್ಕಲೇಷನ್ ಮತ್ತು ಟೆಂಡರ್ ಪ್ರೀಮಿಯಂ ದರಗಳನ್ನು ಸ್ಥಳೀಯ ಸಂಸ್ಥೆಯೇ ಭರಿಸಲು ಒಪ್ಪಿರುವುದರಿಂದ ಈ ಮೊತ್ತವನ್ನು ಯೋಜನೆಯ ಅಂದಾಜಿನಿಂದ ಕೈಬಿಡಲಾಗಿದೆ. ಇದಲ್ಲದೆ ಯೋಜನೆಯಡಿಯಲ್ಲಿ ಅಗತ್ಯವಿರುವ ಭೂಮಿಯನ್ನು ಸ್ಥಳೀಯ ಸಂಸ್ಥೆಯೇ ಒದಗಿಸಬೇಕಾಗಿರುವುದರಿಂದ ಸದರಿ ಜಾಗವನ್ನು ಸ್ಥಳೀಯ ಸಂಸ್ಥೆ ಒದಗಿಸಿದ ನಂತರ ಯೋಜನೆಯ ಟೆಂಡರ್ ಗಳನ್ನು ಕರೆಯಲು ಮಂಡಳಿ ಕ್ರಮ ವಹಿಸಬೇಕಾಗಿದೆ.

ಸದರಿ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 22 ಯುಡಿಎಸ್ 2011 ಬೆಂಗಳೂರು, ದಿನಾಂಕ: 05ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಕೂಡ್ಲಿಗಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ.2507.00 ಲಕ್ಷಗಳನ್ನು (ರೂ.ಎರಡು ಸಾವಿರದ ಐದುನೂರ ಏಳು ಲಕ್ಷಗಳು ಮಾತ್ರ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು **ಒಳಚರಂಡಿ ಯೋಜನೆಯಡಿ** ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುದಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) The board shall invite the tender immediately after the handing over the land required under the scheme in order to avoid time and cost run over.
3) Adequate provision to be made by the Board in the following Years for timely completion of the Project.
4) Escalation and Tender premium should be borne by the ULB.
5) Water rates as proposed by KUWS&DB have to be implemented to meet O & M cost of UGD.
6) KTPP provisions, quality control and timely completion should be ensured.
7) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
8) ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.
9) ಸರ್ಕಾರವು ಯೋಜನೆಯ ಆರ್ಥಿಕ ಮಾದರಿಯನ್ನು ಬದಲಾಯಿಸಿ ಆದೇಶ ಹೊರಡಿಸಿರುವ ಹಿನ್ನಲೆಯಲ್ಲಿ ಯೋಜನೆಗಳ ಆರ್ಥಿಕ ಮಾದರಿಗಳನ್ವಯ ರಾಜ್ಯಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು/ಸಾಲವನ್ನು ಯೋಜನಾ ಆರ್ಥಿಕ ಮಾದರಿಗಳಂತೆ ಸೂಕ್ತವಾಗಿ ಮಾರ್ಪಡಿಸಲು ಸೂಕ್ತ ಕ್ರಮವನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳತಕ್ಕದ್ದು ಈ ನಿಟ್ಟಿನಲ್ಲಿ ಅಗತ್ಯವಿದ್ದರೆ ಲೆಕ್ಕಶೀರ್ಷಿಕೆಗಳ ಮರು ಹೊಂದಾಣಿಕೆಯನ್ನು ಸದರಿ ಇಲಾಖೆಯೊಂದಿಗೆ ವ್ಯವಹರಿಸಿ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 168 Exp-9:2011, ದಿನಾಂಕ:09-04-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1593

ಟಿ.ಎಂ.ವಾಸುದೇವರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಹುಕ್ಕೇರಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ.1900.00 ಲಕ್ಷಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ:ಕಜಮಂ/ಮುಅ(ಉ)/ಆಶ್ರೇಕಾಅ(ಬಿಜಿಎಂ)/ಉಮುಅ-1/ತಾ.ಸ.-2/ಸಅ5/ಹುಕ್ಕೇರಿ.ಒ.ಚ.ಯೋ: /3562/2011-12, ದಿ:25-01-2012.

ಪ್ರಸ್ತಾವನೆ :

ಹುಕ್ಕೇರಿ ಪಟ್ಟಣವು ಬೆಳಗಾಂ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆಯು 19906 ಇದ್ದು ಪ್ರಸ್ತುತ 21000 ಇರುತ್ತದೆ, 2030ರ ಮಧ್ಯಂತರ ಅವಧಿಯಲ್ಲಿ 31,500 ಹಾಗೂ 2045ರಲ್ಲಿ 42,000 ಆಗಬಹುದೆಂದು ನಿರೀಕ್ಷಿಸಲಾಗಿದೆ. ಹುಕ್ಕೇರಿ ಪಟ್ಟಣಕ್ಕೆ ಪ್ರಸ್ತುತ ಪ್ರಾದೇಶಿಕ ನೀರು ಸರಬರಾಜು ಯೋಜನೆಯಾದ ಹುಕ್ಕೇರಿ ಸಂಕೇಶ್ವರ ಹಾಗೂ ಮಾರ್ಗದ ಮಧ್ಯದ 16 ಹಳ್ಳಿಗಳಿಗೆ ಘಟಪ್ರಭಾ ನದಿಯಿಂದ ನೀರು ಸರಬರಾಜು ಮಾಡುತ್ತಿದ್ದು, ಈ ಯೋಜನೆಯನ್ನು 1999ರಲ್ಲಿ ಚಾಲ್ತಿಗೊಳಿಸಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಿಂದ ಪಟ್ಟಣಕ್ಕೆ 0.75 ಎಂ.ಜಿ.ಡಿ., ನೀರನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತುತ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ, ಪಟ್ಟಣದ ಜನತೆಯು ಸೋಕ್ ಪಿಟ್‌ಗಳನ್ನು ಮತ್ತು ಸೆಪ್ಟಿಕ್ ಟ್ಯಾಂಕ್‌ಗಳನ್ನು ಉಪಯೋಗಿಸುತ್ತಿದ್ದು, ಮಲಿನ ನೀರನ್ನು ತೆರೆದ ಒಳಚರಂಡಿಗಳಿಗೆ ಹರಿಯಲು ಬಿಡುತ್ತಿದ್ದು, ಇದರಿಂದಾಗಿ ನೈರ್ಮಲ್ಯ ಸಮಸ್ಯೆ ಹಾಗೂ ಅಂತರ್ಜಲ ಮತ್ತು ಮೇಲ್ಮೈ ನೀರಿನ ಮೂಲ ಕಲುಷಿತಗೊಳ್ಳುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವ ಸಾಧ್ಯತೆ ಇದೆ ಆದ್ದರಿಂದ ಒಳಚರಂಡಿ ಯೋಜನೆ ಕಲ್ಪಿಸುವುದು ಅವಶ್ಯಕವಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಯೋಜನೆಯ ಆರ್ಥಿಕ ಮಾದರಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 07 ಯುಡಬ್ಲ್ಯೂಎಸ್ 2011, ದಿನಾಂಕ:20-07-2011ರಲ್ಲಿ ಹೊರಡಿಸಲಾದ ಹೊಸ ಆರ್ಥಿಕ ಮಾದರಿ ನಿಗದಿಪಡಿಸಿದಂತೆ ಸದರಿ ಪಟ್ಟಣವು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವುದರಿಂದ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಅನುದಾನ (95%)	ರೂ. 1805.00 ಲಕ್ಷಗಳು
ಪುರಸಭೆಯ ಪಾಲು (05%)	ರೂ. 95.00 ಲಕ್ಷಗಳು
ಒಟ್ಟು	ರೂ. 1900.00 ಲಕ್ಷಗಳು

ಈ ಯೋಜನೆಯನ್ನು ಮಂಡಳಿಯ 2011-12ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿ ಸೇರಿಸಿ ರೂ.634.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಯೋಜನೆಯಲ್ಲಿ ಇಟಿಪಿ ಮತ್ತು ಸಾಧಿಲ್ವಾರು ವೆಚ್ಚಗಳನ್ನು ಶೇಕಡ 5ಕ್ಕೆ ಮಿತಿಗೊಳಿಸಲು ಯೋಜನೆಯ ಮೂಲ ಅಂದಾಜು ಮೊತ್ತವಾದ ರೂ.1304.64 ಲಕ್ಷಗಳಿಗೆ ಶೇಕಡ 5ರಂತೆ ಇಟಿಪಿ ಮತ್ತು ಸಾಧಿಲ್ವಾರು ವೆಚ್ಚಗಳಾದ ರೂ.65.21 ಲಕ್ಷಗಳನ್ನು ಇತರೆ ವೆಚ್ಚಗಳಾದ ರೂ.0.15 ಲಕ್ಷಗಳು ಸೇರಿಸಿ ಯೋಜನೆಯ ಅಂದಾಜನ್ನು ರೂ.1370.00 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿರುತ್ತದೆ. ಯೋಜನೆಯಡಿಯಲ್ಲಿ ಕಾಮಗಾರಿಗಳ ಪ್ರಗತಿಯಲ್ಲಿ ಉದ್ಭವಿಸಬಹುದಾದ ಏಸ್ಕಲೇಷನ್ ಮತ್ತು ಟೆಂಡರ್ ಪ್ರೀಮಿಯಂ ದರಗಳನ್ನು ಸ್ಥಳೀಯ ಸಂಸ್ಥೆಯೇ ಭರಿಸಲು ಒಪ್ಪಿರುವುದರಿಂದ ಈ ಮೊತ್ತವನ್ನು ಯೋಜನೆಯ ಅಂದಾಜಿನಿಂದ ಕೈಬಿಡಲಾಗಿದೆ. ಈ ಹಿನ್ನಲೆಯಲ್ಲಿ ಯೋಜನೆಯ ಅಂದಾಜನ್ನು ರೂ.1900.00 ಲಕ್ಷಗಳಿಂದ ರೂ. 1370.00 ಲಕ್ಷಗಳಿಗೆ ಮಿತಿಗೊಳಿಸಲಾಗಿದೆ.

ಸದರಿ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 02 ಯುಡಿಎಸ್ 2012 ಬೆಂಗಳೂರು, ದಿನಾಂಕ: 05ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಹುಕ್ಕೇರಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ.1370.00 ಲಕ್ಷಗಳಲ್ಲಿ (ರೂ.ಒಂದು ಸಾವಿರದ ಮೂನ್ನೂರ ಎಪ್ಪತ್ತು ಲಕ್ಷಗಳು ಮಾತ್ರ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) The board shall invite the tender immediately after the handing over of the land required under the scheme in order to avoid time and cost run over.
3) Adequate provision to be made by the Board in the following Years for timely completion of the Project.
4) Escalation and Tender premium should be borne by the ULB.

5) Water rates as proposed by KUWS&DB have to be implemented to meet O & M cost of UGD

6) KTPP provisions, quality control and timely completion should be ensured.

7) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.

8) ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸುವುದು

9) ಸರ್ಕಾರವು ಯೋಜನೆಯ ಆರ್ಥಿಕ ಮಾದರಿಯನ್ನು ಬದಲಾಯಿಸಿ ಆದೇಶ ಹೊರಡಿಸಿರುವ ಹಿನ್ನಲೆಯಲ್ಲಿ ಯೋಜನೆಗಳ ಆರ್ಥಿಕ ಮಾದರಿಗಳನ್ವಯ ರಾಜ್ಯಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು/ಸಾಲವನ್ನು ಯೋಜನಾ ಆರ್ಥಿಕ ಮಾದರಿಗಳಂತೆ ಸೂಕ್ತವಾಗಿ ಮಾರ್ಪಡಿಸಲು ಸೂಕ್ತ ಕ್ರಮವನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳತಕ್ಕದ್ದು ಈ ನಿಟ್ಟಿನಲ್ಲಿ ಅಗತ್ಯವಿದ್ದರೆ ಲೆಕ್ಕಶೀರ್ಷಿಕೆಗಳ ಮರು ಹೊಂದಾಣಿಕೆಯನ್ನು ಸದರಿ ಇಲಾಖೆಯೊಂದಿಗೆ ವ್ಯವಹರಿಸಿ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಯೆಯ ಟಿಪ್ಪಣಿ ಸಂಖ್ಯೆ: FD 121 Exp-9:2011, ದಿನಾಂಕ:09-04-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1594

ಟಿ.ಎಂ.ವಾಸುದೇವರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಆರ್ಯವಿದ್ಯಾ ಶಾಲಾ ಪೇರೆಂಟ್ಸ್ ಅಸೋಸಿಯೇಷನ್ ಗಾಂಧಿನಗರ, ಬೆಂಗಳೂರು ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ : ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಹಾಗೂ ವಿಚಾರಣಾಧಿಕಾರಿಗಳು ಆರ್ಯವಿದ್ಯಾ ಪೇರೆಂಟ್ಸ್ ಅಸೋಸಿಯೇಷನ್ ಬೆಂಗಳೂರು ಇವರ ಪತ್ರ ಸಂಖ್ಯೆ : ಆರ್‌ಸಿಎಸ್ : ಸಿಆರ್‌ಡಿ : ಎ-12 / 2011-12 ದಿನಾಂಕ : 19-11-2011.

ಪ್ರಸ್ತಾವನೆ :

ಬೆಂಗಳೂರಿನ ಆರ್ಯವಿದ್ಯಾಶಾಲಾ ಪೇರೆಂಟ್ಸ್ ಅಸೋಸಿಯೇಷನ್ ಗಾಂಧೀನಗರ ಈ ಸಂಸ್ಥೆಯ ಕುರಿತಂತೆ ಹಲವಾರು ದೂರುಗಳು ಸ್ವೀಕೃತವಾದ ಹಿನ್ನಲೆಯಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರಡಿ ಶಾಸನಬದ್ಧ ವಿಚಾರಣೆಯನ್ನು ಸಹಕಾರ ಸಂಘಗಳ ಅಪರ ನಿಬಂಧಕರು ಮತ್ತು ವಿಚಾರಣಾಧಿಕಾರಿಗಳು ವಿಚಾರಣೆ ಮಾಡಿ ವಿಚಾರಣಾ ವರದಿಯನ್ನು ದಿನಾಂಕ : 19-11-2011 ರಂದು ಸಲ್ಲಿಸಿದ್ದಾರೆ. ಈ ಆರೋಪಗಳನ್ನು ವಿಚಾರಣಾಧಿಕಾರಿಗಳು ಪರಿಶೀಲನೆ ಮಾಡಿ ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿರುತ್ತಾರೆ.

> "ಸಂಸ್ಥೆಯು ಕಾಲಕಾಲಕ್ಕೆ ವಾರ್ಷಿಕ ಮಹಾಸಭೆ ನಡೆಸಿರುವುದಿಲ್ಲ. ಸದಸ್ಯರುಗಳ ಪಟ್ಟಿಯನ್ನು ಪ್ರತಿ ವರ್ಷ ನೋಂದಣಾಧಿಕಾರಿಗಳಿಗೆ ಸಲ್ಲಿಸಿರುವುದಿಲ್ಲ. ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯೊಂದಿಗೆ ವಾರ್ಷಿಕ ಲೆಕ್ಕಪತ್ರ ತಃಖ್ತೆಗಳನ್ನು 2004 ರಿಂದ 2010 ರವರೆಗೂ ಅನುಮತಿಗಾಗಿ ನೋಂದಣಾಧಿಕಾರಿಗಳಿಗೆ ಸಲ್ಲಿಸಿರುವುದಿಲ್ಲ. ಪೋಷಕರ ಹೆಸರಿನಲ್ಲಿ ಇತರೆ ವ್ಯಕ್ತಿಗಳು ಸದಸ್ಯತ್ವ ಪಡೆದು ಆಡಳಿತ ಮಂಡಳಿಗೆ ಸೇರಿಕೊಂಡಿರುವುದು ತಿಳಿದು ಬರುತ್ತದೆ. ಈ ಸಂಸ್ಥೆಯು ತನ್ನ ಬೈಲಾ ಹಾಗೂ ನಿಯಮಗಳ ರೀತ್ಯಾ ಕೆಲಸ ನಿರ್ವಹಿಸುತ್ತಿರುವುದಿಲ್ಲ ಮತ್ತು ಬೈಲಾ ಹಾಗೂ ಕಾಯ್ದೆ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆಡಳಿತ ಮಂಡಳಿ ಸದಸ್ಯರು ಸಂಸ್ಥೆಯಲ್ಲಿ ಕಾನೂನು ಹಾಗೂ ನಿಯಮಗಳನ್ವಯ ನಡೆಸಲು ವಿಫಲರಾಗಿರುವುದು ಸ್ಪಷ್ಟವಾಗಿರುತ್ತದೆ. ಮೇಲ್ಕಂಡ ಸಮರ್ಥನೀಯ ಅಂಶಗಳನ್ನು ಗಮನಿಸಿ ಈ ಸಂಸ್ಥೆಯ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಇದರ ಆಸ್ತಿಯನ್ನು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಗೆ ವರ್ಗಾಯಿಸುವುದು ಸೂಕ್ತವಾಗಿರುತ್ತದೆಂದು ಅಭಿಪ್ರಾಯ ಪಡಲಾಗಿದೆ."

ವಿಚಾರಣಾ ವರದಿಯನ್ವಯ ಸದರಿ ಸಂಸ್ಥೆಯ ಹಿತದೃಷ್ಟಿಯಿಂದ ಮತ್ತು ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ನ್ಯಾಯಯುತ ಸಮಗ್ರ ತನಿಖೆ ನಡೆಸುವುದು ಅವಶ್ಯಕವಿರುವುದರಿಂದ ಹಾಗೂ ಸಂಸ್ಥೆಯ ಪದಾಧಿಕಾರಿಗಳೇ ಸಂಸ್ಥೆಯ ಆಡಳಿತವನ್ನು ನಡೆಸುತ್ತಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27 (ಎ) ರನ್ವಯ ಹಾಲಿ ಆಡಳಿತ ಮಂಡಳಿಯನ್ನು ವಜಾಗೊಳಿಸಿ ಈ ಸಂಸ್ಥೆಗೆ ಜಿಲ್ಲಾಧಿಕಾರಿ ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಇ : 30 ಸಸಂನೋ 2012, ಬೆಂಗಳೂರು, ದಿನಾಂಕ: 7ನೇ ಜೂನ್ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರ್ಯವಿದ್ಯಾಶಾಲಾ ಪೇರೆಂಟ್ಸ್ ಅಸೋಸಿಯೇಷನ್ ಗಾಂಧಿನಗರ, ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ, ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಹಾಲಿ ಇರುವ ಸದಸ್ಯರಿಂದ ಸಂಘಕ್ಕೆ ಚುನಾವಣೆಯನ್ನು ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಅಥವಾ ಆರು (06) ತಿಂಗಳ ಅವಧಿಗೆ ಇವರಲ್ಲಿ ಯಾವುದು ಮೊದಲು ಆಗುತ್ತದೋ ಅಲ್ಲಿಯವರೆಗೆ ನೇಮಿಸಿದೆ. ಸದರಿ ಅವಧಿಯಲ್ಲಿ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ಸಮಗ್ರ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1629

ಎ.ಎಸ್. ವಿಶ್ವೇಶ್ವರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ದಿ. ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು, ಇದರ 2009-10 ಮತ್ತು 2010-11ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಧಿ ವಿಸ್ತರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಸಿಒ 28 ಸಿಎಲ್ಎಂ 2011, ದಿನಾಂಕ : 22-02-2011.

2. ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಹೆಚ್ಎಸ್ಜಿ-2 : 396 : ಹೆಚ್ಹೆಚ್ಎಸ್ 2011-12, ದಿನಾಂಕ : 24-03-2012, ದಿನಾಂಕ : 10-04-2012.

ಪ್ರಸ್ತಾವನೆ :

ದಿ ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮಲ್ಲೇಶ್ವರಂ, ಬೆಂಗಳೂರು ಈ ಸಂಘದ 2009-10 ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 31-03-2012ರೊಳಗಾಗಿ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪ ಬಂಧಗಳನ್ನು ಮಾರ್ಪಡಿಸಿ ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶದಲ್ಲಿ ಅನುಮತಿಯನ್ನು ನೀಡಲಾಗಿದೆ.

ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರು ಮೇಲೆ ಓದಲಾದ ಕ್ರಮಾಂಕ (2) ರ ಪತ್ರಗಳಲ್ಲಿ ಸಂಘದಲ್ಲಿ ನಡೆದಿದೆಯನ್ನಲಾದ ಗುರುತರ ಆರೋಪಗಳ ಕುರಿತು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ಪ್ರಕರಣ 64ರ ವಿಚಾರಣೆಗೆ ಆದೇಶಿಸಿರುತ್ತಾರೆ. ವಿಚಾರಣೆಯು ಪ್ರಗತಿಯಲ್ಲಿದ್ದು, ವರದಿ ಸ್ವೀಕೃತವಾದ ನಂತರ ವರದಿಯಲ್ಲಿನ ಅಂಶಗಳ ಬಗ್ಗೆ ಪರಿಶೀಲಿಸಿ, ಸಂಘದ ನ್ಯೂನತೆಗಳ ಸ್ವರೂಪದ ಆಧಾರದ ಮೇಲೆ ನಿಯಮಾನುಸಾರ ಕ್ರಮ ವಹಿಸುವ ಷರತ್ತಿಗೊಳಪಟ್ಟು 2009-10 ಮತ್ತು 2010-11ನೇ ಸಾಲುಗಳ ವಾರ್ಷಿಕ ಮಹಾಸಭೆಯನ್ನು ದಿನಾಂಕ : 30-09-2012 ರೊಳಗೆ ನಡೆಸಲು ಅನುಮತಿ ನೀಡಬೇಕೆಂದು' ಕೋರಿರುತ್ತಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಒ 62 ಸಿಎಲ್ ಎಮ್ 2012, ಬೆಂಗಳೂರು, ದಿನಾಂಕ: 26ನೇ ಮೇ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ದಿ ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮಲ್ಲೇಶ್ವರಂ, ಬೆಂಗಳೂರು ಇದರ 2009-10 ಮತ್ತು 2010-11ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು ನಡೆಸಲು ದಿನಾಂಕ : 30-09-2012 ರವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಗಳು ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ :

27ರ ಪ್ರಕರಣದಲ್ಲಿ :

27ನೇ ಪ್ರಕರಣ ಉಪಪ್ರಕರಣ(1)ರ ಪರಂತುಕದಲ್ಲಿನ "ಆರು ತಿಂಗಳು" ಎಂಬ ಪದಗಳಿಗೆ ಬದಲಾಗಿ "ಇಪ್ಪತ್ತನಾಲ್ಕು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ :

ಪ್ರಕರಣ 27 (1) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30-09-2012 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1)ರ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಷರತ್ತು :

ಸಂಘದ ವಿರುದ್ಧ ಈಗಾಗಲೇ ಆದೇಶಿಸಿರುವ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರ ವಿಚಾರಣಾ ವರದಿ ಸ್ವೀಕೃತವಾದ ನಂತರ ವರದಿಯಲ್ಲಿನ ಅಂಶಗಳ ಬಗ್ಗೆ ಪರಿಶೀಲಿಸಿ, ಸಂಘದಲ್ಲಿನ ನ್ಯೂನತೆಗಳ ಸ್ವರೂಪದ ಆಧಾರದ ಮೇಲೆ ನಿಯಮಾನುಸಾರ ಕ್ರಮ ವಹಿಸುವ ಷರತ್ತನ್ನು ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1630

ಬಿ.ಸಿ. ಸತೀಶ್

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,

ಸಹಕಾರ ಇಲಾಖೆ.

COMMERCE & INDUSTRIES SECRETARIAT

Sub : Amendment to the project proposal of M/s patel Engineering Ltd to establish an integrated township including Residential, Commercial, IT Park and SEZs approved earlier at Hulimangala, Gollahalli, Thirupalya and Maragondanahalli Villages of Anekal Taluk Bangalore Urban District- extension of time; Reg.

Read :
1. Government Order No. ITD/32/MDA/2007 dated 17-03-2008.
2. Addendum No. ITD 02 MDA 2009, dated 16-01-2009.
3. 27th SHLCC meeting held on 13-04-2012.
4. Government Order No. CI 137 SPI 2012 dated : 21-04-2012.
5. 28th SHLCC meeting held on 23-05-2012.
6. Government Order No. CI 137 SPI 2012 dated : 28-05-2012.

Preamble:

The Proposal of M/s Patel Engineering Ltd., to establish two separate Sector Specific SEZs in Electronic Hardware/Software/IT & ITES area through two SPVs created by the subsidiaries of M/s Patel Engineering Ltd. Namely, M/s Hera Realcon Pvt. Ltd. And M/s Hebe Infracon Pvt. Ltd. In 25.375 and 25.81 acres of land respectively and remaining land for Non-SEZ area in 103 acres, 17 guntas of land at Hulimangala, Gollahalli, Thirupalya and Maragondanahalli villages of Anekal Taluk Bangalore Urban District with an investment of Rs. 490 Cr. Was approved vide GO referred above at (1) & (2).

The Company subsequently has submitted another proposal on 27-11-2011 to establish an integrated township with Residential mixed use including Residential, Commercial and IT Park project in 147 Acres 10.4 guntas of land at different sy. No's detailed in Annexure B at Hulimangala, Gollahalli, Thirupalya and Maragondanahalli villages of Anekal Taluk Bangalore urban district adjacent to their earlier approved project (vide Govt. Order dated : 17-03-2008) with an investment of Rs. 2025 crores and to provide employment to 51452 persons was approved in 27th SHLCC meeting held on 13-04-2012 and GO has been issued accordingly vide No. CI 137 SPI 2012 Bangalore dated : 21-04-2012 read at (4) above.

As the location of the present proposal is adjacent and contiguous land to their earlier approved project and the activity is same, the company vide its letter dated : 05-05-2012 requested;

- To consider the present proposal as expansion and integral to the earlier project approved in 10th SHLCC meeting.
- To recommend to KIADB to approve the building plan and validity for 5 years to implement the project.

The project, integrated township with Residential mixed use including Residential, Commercial and IT Park in 147 acre and 10.4 guntas of land at different Sy. No. which was approved in 27th SHLCC meeting may be considered as additional activity and integral to the earlier approved two SEZ projects of electronic Hardware/Software/IT and ITES in 51.185 acres of land and 52.2 acres of Non SEZ Area vide G.O. No. ITD/32/MDA/2007Dated 17-03-2008.

The subject was discussed in detail in the SHLCC meeting held on 23-05-2012 and the request was considered favourably. Government has examined the recommendations made by the State High Level Clearance Committee meeting and further directions of the Hon'ble Minister for Large & Medium Industries, in all aspects.

Hence the following order.

Government Order No. CI 137 SPI 2012, Bangalore, Dated: 6th June 2012.

Government is pleased to approve :

(1) Extension of time by 3 years from the date of issue of this Order for implementation of the project,

(2) To consider the two projects approved earlier vide G.Os referred at (1), (2) & (4) above as single entity or as single project with following details :

The above amended provision would be applicable only to fully self-financed projects and/or to projects which use self-owned land only and the applications for availing the benefit should have been received on or before 01-01-2002. No. application received thereafter would be considered.

8. One of the conditions which need to be fulfilled is that in the case of owned land project, sale deed/sale agreement is to be registered on or before 31-12-1996. In the case of the petitioner, it is found that the unit did not get allotment of any land from KIADB or from the Government but has obtained land on lease basis from another party by executing lease deed on 16-02-2000 which is registered on 03-04-2000.

9. It is seen that the petitioner neither owns the land for its industry nor has been allotted land by the Government or KIADB. The Government Order dated : 13-07-2000 as amended by Government Order dated : 21-06-2002 clearly mentions that all the conditions stipulated therein need to be fulfilled in order to consider the industry for grant of pipeline investment status. In this case, the conditions pertaining to land has not been fulfilled. For argument sake, even if lease of land has been executed on 16-02-2000 and registered on 03-04-2000 which does not fulfill the condition that sale deed/sale agreement of the land should be registered before 31-12-1999 in the case of owned land projects. Thus, the petitioner has failed to satisfy the conditions required for considering it as a pipeline case of investment in terms of the above referred Government Orders and has become ineligible for grant of pipeline investment status.

10. Taking the above facts into consideration, Government is pleased to pass the following :

GOVERNMENT ORDER No. CI 423 SPI 2010, BANGALORE, DATED : 07-05-2012

The application of M/s. Soumya Polymers, Mysore for grant of pipeline investment status in terms of Government Orders dated 07-01-2000, 13-07-2000 and 21-06-2002 stands rejected.

By Order and in the name of the Governor of Karnataka,

JYOTHI R. J.

Desk Officer (Technical Cell)

Commerce & Industries Department.

P.R. 1433

ತೋಟಗಾರಿಕಾ ಸಚಿವಾಲಯ

ವಿಷಯ: . ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಕೆನರಾ ಬ್ಯಾಂಕಿನಿಂದ ಪಡೆದ ಸಾಲದ ಮೊತ್ತಕ್ಕೆ ವಿಧಿಸುವ ಬಡ್ಡಿಯನ್ನು ಹಿಂಭರಿಸುವ ಬಗ್ಗೆ.

ಓದಲಾಗಿದೆ:
1 ಸರ್ಕಾರಿ ಆದೇಶ ಸಂಖ್ಯೆ: ವಾಕೈ 03 ರೇಉನಿ 2011 (ಭಾಗ-1), ದಿನಾಂಕ : 31-3-2011
2 ಸರ್ಕಾರದ ಪತ್ರ ಸಂಖ್ಯೆ: ವಾಕೈ 3 ರೇಉನಿ 2011 (ಭಾಗ-2), ದಿನಾಂಕ: 27-7-2011.
3 ಸರ್ಕಾರಿ ಆದೇಶ ಸಂಖ್ಯೆ: ವಾಕೈ 3 ರೇಉನಿ 2011 (ಭಾಗ-1), ದಿನಾಂಕ: 25-4-2012.
4 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರ ಪತ್ರ ಸಂಖ್ಯೆ : ಕರೇಮಾಮ/ಹಣಕಾಸು/2012-13/46, ದಿನಾಂಕ : 23-4-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ರೇಷ್ಮೆ ಗೂಡಿನ ಬೆಲೆ ಕುಸಿತವನ್ನು ತಡೆದು ರೇಷ್ಮೆ ನೂಲಿನ ಬೆಲೆಯಲ್ಲಿ ಸ್ಥಿರತೆಯನ್ನು ಉಂಟುಮಾಡಲು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಅದಕ್ಕೆ ಅಗತ್ಯವಿರುವ

ದುಡಿಯುವ ಬಂಡವಾಳಕ್ಕಾಗಿ ಅದು ಕೆನರಾ ಬ್ಯಾಂಕ್‌ನಿಂದ ರೂ. 25.00 ಕೋಟಿಗಳ ಸಾಲ ಪಡೆಯುವುದಕ್ಕೆ ಸರ್ಕಾರದ ಗ್ಯಾರಂಟಿಯನ್ನು ಕೆಲವು ಷರತ್ತಿಗೊಳಪಟ್ಟು ನೀಡಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಬಡ್ಡಿ ಮೊತ್ತವನ್ನು ಹಿಂಭರಿಸಬೇಕೆಂದು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರಿಗೆ ನಿರ್ದೇಶನ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಕೆನರಾ ಬ್ಯಾಂಕಿನಿಂದ ರೂ. 25.00 ಕೋಟಿಗಳ ಸಾಲ ಪಡೆಯುವ ಗ್ಯಾರಂಟಿ ಅವಧಿಯನ್ನು ದಿನಾಂಕ : 31-3-2011ರ ಆದೇಶದಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ದಿನಾಂಕ : 31-3-2013 ರವರೆಗೆ ವಿಸ್ತರಿಸಲು ಹಾಗೂ ಸರ್ಕಾರದ ಗ್ಯಾರಂಟಿ ಮೇಲೆ ಕೆನರಾ ಬ್ಯಾಂಕಿನಿಂದ ರೂ. 25.00 ಕೋಟಿ ಸಾಲದ ಮಂಜೂರಾತಿಗೆ ಅಗತ್ಯವಾಗಿರುವ ದಸ್ತಾವೇಜುಗಳನ್ನು ನೀಡಬೇಕಾಗಿರುವುದರಿಂದ ಡೀಡ್ ಆಫ್ ಗ್ಯಾರಂಟಿಗೆ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ದಿನಾಂಕ : 16-6-2011 ರಂದು ಮಾನ್ಯ ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಡಳಿಯು ಪಡೆಯುವ ಸಾಲದ ಮೇಲೆ ಬ್ಯಾಂಕಿನವರು ವಿಧಿಸುವ ಬಡ್ಡಿಯನ್ನು ಸರ್ಕಾರವು ಹಿಂಭರಿಸಬೇಕೆಂದು ತೀರ್ಮಾನಿಸಲಾಗಿದ್ದು. ಅದರಂತೆ ಕೆನರಾ ಬ್ಯಾಂಕಿನವರು ಮಂಡಳಿ ಪಡೆದಿರುವ ರೂ. 25.00 ಕೋಟಿ ಸಾಲಕ್ಕೆ ದಿನಾಂಕ : 1-11-2011 ರಿಂದ 31-3-2012 ರ ಅವಧಿಗೆ ರೂ. 74,28,069/- ಬಡ್ಡಿ ವಸೂಲು ಮಾಡಿದ್ದು. ಸರ್ಕಾರದ ವತಿಯಿಂದ ಈ ಬಡ್ಡಿ ಮೊತ್ತವನ್ನು ಹಿಂಭರಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ತೋಇ 31 ರೇಉನಿ 2011, ಬೆಂಗಳೂರು, ದಿನಾಂಕ: 23-5-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಕೆನರಾ ಬ್ಯಾಂಕಿನಿಂದ ಸಾಲ ಪಡೆದ ಮೊತ್ತಕ್ಕೆ ದಿನಾಂಕ : 1-11-2011 ರಿಂಧ 31-3-2012ರ ಅವಧಿಗೆ ವಿಧಿಸಿರುವ ಬಡ್ಡಿ ವೆಚ್ಚ ರೂ. 74.28 ಲಕ್ಷ (ಎಪ್ಪತ್ನಾಲ್ಕು ಲಕ್ಷ ಇಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2851-00-107-1-40 ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ (ಯೋಜನೆ) ರಡಿಯಲ್ಲಿ ಒದಗಿಸಿರುವ ರೂ. 3000.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಖಜಾನೆಯಲ್ಲಿ ಪೆಯೀಸ್ ರಸೀದಿ (Payees receipt) ನ ಮುಖಾಂತರ ರೇಷ್ಮೆ ಕೃಷಿ ಮತ್ತು ಅಭಿವೃದ್ಧಿ ಆಯುಕ್ತರು ಮತ್ತು ರೇಷ್ಮೆ ನಿರ್ದೇಶಕರು ಮೊತ್ತವನ್ನು ಸೆಳೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಈಆ/527/Exp.4/2011, ದಿನಾಂಕ : 16-5-2012 ರಲ್ಲಿಯ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಎಸ್. ಚಂದ್ರಶೇಖರ್,
ಪೀಠಾಧಿಕಾರಿ,
ತೋಟಗಾರಿಕೆ ಇಲಾಖೆ (ರೇಷ್ಮೆ)

ಪಿ.ಆರ್. 1529

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ರಾಯಚೂರಿನ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ) ಇವರ ಅ.ಸ. ಪತ್ರಗಳ ಸಂಖ್ಯೆ: ಆಕುಕ 437 ಎಂ.ಪಿ.ಎಸ್. 2008, ದಿನಾಂಕ : 7-10-2009 ಮತ್ತು ದಿನಾಂಕ : 25-6-2010.

ಪ್ರಸ್ತಾವನೆ:

ರಾಯಚೂರಿನಲ್ಲಿರುವ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು 2007-08 ೇ ಶೈಕ್ಷಣಿಕ ವರ್ಷದಿಂದ ವಾರ್ಷಿಕ 100 ಎಂಬಿಬಿಎಸ್ ಸೀಟುಗಳ ಪ್ರವೇಶ ಸಾಮರ್ಥ್ಯದೊಂದಿಗೆ ಪ್ರಾರಂಭಿಸಲು ಅನುಮೋದನೆ ನೀಡಲಾಗಿದ್ದು, ಸದರಿ ಸಂಸ್ಥೆಯ ವ್ಯಾಪ್ತಿಯಲ್ಲಿ ಪ್ರಸ್ತುತ 300 ಹಾಸಿಗೆಗಳ ಸಾಮರ್ಥ್ಯದ ಬೋಧನಾ ಆಸ್ಪತ್ರೆ ಮಾತ್ರ ಲಭ್ಯವಿದ್ದು, ಇದು ಭಾರತೀಯ ವೈದ್ಯಕೀಯ ಪರಿಷತ್ತು ನಿಗದಿಪಡಿಸಿರುವ ಹಾಸಿಗೆ ಸಾಮರ್ಥ್ಯಕ್ಕಿಂತ ಕಡಿಮೆ ಇರುವುದರಿಂದ ಈ ಕೊರತೆಯನ್ನು ಸರಿದೂಗಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಹಾಗೂ ಹೈದ್ರಾಬಾದ್‌ನ ಅಪೋಲೋ ಆಸ್ಪತ್ರೆ ಸಮೂಹಕ್ಕೆ ಗುತ್ತಿಗೆ ಆಧಾರದ ಮೇಲೆ ನೀಡಲ್ಪಟ್ಟಿರುವ ರಾಯಚೂರಿನ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ

ಆಸ್ಪತ್ರೆಯನ್ನು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಬೋಧನಾ ಆಸ್ಪತ್ರೆಯಾಗಿ ವಹಿಸಿಕೊಡಲು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸುವಂತೆ ಮೇಲೆ ಓದಲಾದ ಅರೆ ಸರ್ಕಾರಿ ಪತ್ರಗಳಲ್ಲಿ ಕೋರಲಾಗಿದೆ.

ಪ್ರಾಥಮಿಕ ಹಾಗೂ ದ್ವಿತೀಯ ಹಂತಗಳ ಆರೋಗ್ಯ ಸೇವೆಗಳನ್ನು ಒದಗಿಸುವ ಜವಾಬ್ದಾರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯದ್ದಾಗಿದೆ ತೃತೀಯ ಹಂತದ (Tertiary) ಆರೋಗ್ಯ ಸೇವೆಗಳನ್ನು ಒದಗಿಸುವುದು ವೈದ್ಯಕೀಯ ಶಿಕ್ಷಣ ಇಲಾಖೆಯ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಹೈದ್ರಾಬಾದ್‌ನ ಅಪೋಲೋ ಆಸ್ಪತ್ರೆ ಸಮೂಹಕ್ಕೆ ಗುತ್ತಿಗೆ ಆಧಾರದ ಮೇಲೆ ನೀಡಲ್ಪಟ್ಟಿರುವ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇದನ್ನು "ಪ್ರಸ್ತುತ ಯಾವ ಹಂತದಲ್ಲಿ ಇದೆಯೋ ಆ ಸ್ಥಿತಿಯಲ್ಲಿಯೇ (as is where is basis) ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 282 ಸಿಜಿಎಂ 2012, ಬೆಂಗಳೂರು ದಿನಾಂಕ: 24-5-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಹೈದ್ರಾಬಾದ್‌ನ ಅಪೋಲೋ ಆಸ್ಪತ್ರೆ ಸಮೂಹಕ್ಕೆ ಗುತ್ತಿಗೆ ಆಧಾರದ ಮೇಲೆ ನೀಡಲ್ಪಟ್ಟಿರುವ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇದನ್ನು "ಪ್ರಸ್ತುತ ಯಾವ ಹಂತದಲ್ಲಿ ಇದೆಯೋ ಆ ಸ್ಥಿತಿಯಲ್ಲಿಯೇ" (as is hwere is başi) ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್. 1530

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವಾಲಯ

ವಿಷಯ : 2012ರ ಪರಿಷ್ಕೃತ ವೇತನ ಶ್ರೇಣಿಗಳನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ವ್ಯಾಪ್ತಿಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ವಿಸ್ತರಿಸುವ ಬಗ್ಗೆ.

ಓದಲಾಗಿದೆ : ಆದೇಶ ಸಂಖ್ಯೆ : ಎಫ್‌ಡಿ 7 ಎಸ್‌ಆರ್ 2012, ದಿನಾಂಕ : 21-4-2012.

ಪ್ರಸ್ತಾವನೆ:

2012ನೇ ಪರಿಷ್ಕೃತ ವೇತನ ಶ್ರೇಣಿಗಳನ್ನು ಈ ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಸರ್ಕಾರಿ ನೌಕರರಿಗೆ ಮಂಜೂರು ಮಾಡಲಾಗಿದ್ದು, ಸದರಿ ಆದೇಶದ ಕಂಡಿಕೆ 12 ಹಾಗೂ 12.1ರ ಅಡಿ ಈ ಕೆಳಗಿನಂತೆ ನಮೂದಿಸಲಾಗಿದೆ.

> "ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ನೌಕರರಿಗೆ ವಿಶ್ವ ವಿದ್ಯಾಲಯದ ಬೋಧಕೇತರ ಸಿಬ್ಬಂದಿಗೆ ಮತ್ತು ಸ್ಥಳೀಯ ಸಂಸ್ಥೆಗಳ (ಪಟ್ಟಣ) ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿಗಳ ಪ್ರಯೋಜನಗಳ ವಿಸ್ತರಣೆ ಈ ಕುರಿತು ಆದೇಶಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ಪ್ರತ್ಯೇಕವಾಗಿ ಹೊರಡಿಸುತ್ತವೆ."

ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಪರಿಶೀಲಿಸಿ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 53 ಎಸ್‌ಟಿಬಿ 2012, ಬೆಂಗಳೂರು, ದಿನಾಂಕ: 26-5-2012

2. ರಾಜ್ಯ ಸರ್ಕಾರದ ವೇತನಾನುದಾನ ಪಡೆಯುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಮತ್ತು ಇತರೇ ಅನುದಾನಿತ ಶಿಕ್ಷಣ ಸಂಸ್ಥೆಗಳ ರಾಜ್ಯ ವೇತನ ಶ್ರೇಣಿಯಲ್ಲಿರುವ ನೌಕರರಿಗೆ ಆದೇಶ ಸಂಖ್ಯೆ : ಎಫ್‌ಡಿ 7 ಎಸ್‌ಆರ್ 2012, ದಿನಾಂಕ : 21-4-2012ರಲ್ಲಿ ಹೊರಡಿಸಿರುವ 2012ರ ಕರ್ನಾಟಕ ನಾಗರೀಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ಹಾಗೂ ಸಂಬಂಧಿತ ಆದೇಶಗಳನ್ನು ವಿಸ್ತರಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಬಿ. ಪಟಗಾರ್
ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ),
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

ಪಿ.ಆರ್. 1531

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಒಇ 138 ಪಿಪಿಇ 2012, ಬೆಂಗಳೂರು, ದಿನಾಂಕ : 26-5-2012

ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ : ಒಇ 213 ಪಿಪಿಇ 2010, ದಿನಾಂಕ : 24-9-2010ರ 13 ಮತ್ತು 14 ನೇ ಸಾಲಿನಲ್ಲಿ ನಮೂದಿಸಿರುವ "2014-00-800-1-02-ತ್ವರಿತ ನ್ಯಾಯಾಲಯಗಳು" ಮತ್ತು ಸರ್ಕಾರದ ಆದೇಶ ಸಂಖ್ಯೆ : ಒಇ 463 ಪಿಪಿಇ 2011, ದಿನಾಂಕ : 22-10-2011ರ ಆದೇಶ ಭಾಗದ ಎರಡನೇ ಕಂಡಿಕೆಯ 1 ಮತ್ತು 2ನೇ ಸಾಲಿನಲ್ಲಿ ನಮೂದಿಸಿರುವ "2014-0-800-1-00-EFC.GRANT FOR UPGRADATION OF JUDICIAL ADMINISTRATION-101-GRANT-IN-AID"ರ ಬದಲಾಗಿ ಲೆಕ್ಕ ಶೀರ್ಷಿಕೆ "2014-00-114-0-02 (ಯೋಜನೇತರ)" ಎಂದು-ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ : ಒಇ 361 ಪಿಪಿಇ 2009, ದಿನಾಂಕ : 23-10-2009 ಮತ್ತು ಒಇ 463 ಪಿಪಿಇ 2011, ದಿನಾಂಕ : 22-10-2011ರಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ.
(ಪೊಲೀಸ್ ಸೇವೆಗಳು-'ಬಿ').

ಪಿ.ಆರ್. 1535

ಆರ್ಥಿಕ ಸಚಿವಾಲಯ

ವಿಷಯ: ಮದ್ಯಸಾರ ಆಧಾರಿತ ರಾಸಾಯನಿಕ ಕೈಗಾರಿಕೆಗಳಿಗೆ ಹೊಸದಾಗಿ ಸನ್ನದು ನೀಡಲು ಹಾಗೂ ಮದ್ಯಸಾರವನ್ನು ವಿಸತರಿಸುವ ಕುರಿತು-ಉನ್ನತ ಅಧಿಕಾರದ ಸಮಿತಿಯ (High Power Committee) ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 53 ಇಎಫ್ಎಲ್ 2009, ದಿನಾಂಕ: 9-2-2010
2. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 53 ಇಎಫ್ಎಲ್ 2009, ದಿನಾಂಕ: 10.5.2011.
3. ಅಬಕಾರಿ ಆಯುಕ್ತರ ಪತ್ರ ಸಂಖ್ಯೆ : ಇಸಿಇ/15/ಆರ್‌ಎಸ್‌ಎ/2007, ದಿನಾಂಕ: 23-4-2012.

ಪ್ರಸ್ತಾವನೆ:

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮದ್ಯಸಾರ ಆಧಾರಿತ ರಾಸಾಯನಿಕ-ಕೈಗಾರಿಕೆಗಳಿಗೆ ಹೊಸದಾಗಿ ಸನ್ನದು ನೀಡಲು ಹಾಗೂ ಮದ್ಯಸಾರವನ್ನು ಹಂಚಿಕೆ ಮಾಡುವ ಸಂಬಂಧ ಉನ್ನತ ಅಧಿಕಾರದ ಸಮಿತಿ (High Power Committee) ಯನ್ನು ಒಂದು ವರ್ಷದ ಅವಧಿಗೆ ರಚಿಸಲಾಗಿತ್ತು. ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸದರಿ ಸಮಿತಿಯ ಅವಧಿಯನ್ನು ದಿನಾಂಕ : 31-3-2012 ರವರೆಗೆ ವಿಸ್ತರಿಸಲಾಗಿತ್ತು. ಕ್ರಮಾಂಕ (3) ರಲ್ಲಿ ಓದಲಾದ ಪತ್ರದಲ್ಲಿ ಅಬಕಾರಿ ಆಯುಕ್ತರು ಈಗಿರುವ ಸದಸ್ಯರುಗಳನ್ನೊಳಗೊಂಡಂತೆ ಸದರ ಸಮಿತಿಯ ಅವಧಿಯನ್ನು ಮುಂದಿನ ಆರು ತಿಂಗಳುಗಳಿಗೆ ವಿಸ್ತರಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 12 ಇಎಫ್ಎಲ್ 2011. ಬೆಂಗಳೂರು, ದಿನಾಂಕ : 21-5-2012

ಸರ್ಕಾರವು, ಮದ್ಯಸಾರ ಆಧಾರಿತ ರಾಸಾಯನಿಕ ಕೈಗಾರಿಕೆಗಳಿಗೆ ಹೊಸದಾಗಿ ಸನ್ನದು ನೀಡಲು ಹಾಗೂ ಮದ್ಯಸಾರವನ್ನು ಹಂಚಿಕೆ ಮಾಡಲು ಉನ್ನತ ಅಧಿಕಾರದ ಸಮಿತಿ (High Power Committee) ಯ ಅವಧಿಯನ್ನು ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ದಿನಾಂಕ : 1-4-2012 ರಿಂದ ದಿನಾಂಕ : 30-9-2012 ರವರೆಗೆ (6 ತಿಂಗಳು) ವಿಸ್ತರಿಸಿ ಆದೇಶಿಸಿದೆ.

1.	ಮಾನ್ಯ ಅಬಕಾರಿ ಸಚಿವರು	ಅಧ್ಯಕ್ಷರು
2.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ	ಸದಸ್ಯರು
3.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
4.	ಪ್ರಾಧ್ಯಾಪಕರು, ರಾಸಾಯನಿಕ ಇಂಜನಿಯರಿಂಗ್, ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು	ಸದಸ್ಯರು
5.	ಡಾ|| ಸಾಯಿದತ್ತಾ Head of the dept., Chemical Engineering, NIT-K, Suratkal, Mangalore	ಸದಸ್ಯರು
6.	ಅಬಕಾರಿ ಆಯುಕ್ತರು, ಬೆಂಗಳೂರು	ಸದಸ್ಯ-ಕಾರ್ಯದರ್ಶಿ

ರಾಸಾಯನಿಕ ಘಟಕಗಳಿಂದ ರೆಕ್ಟಿಫೈಡ್ ಸ್ಪಿರಿಟ್/ಸ್ಪಿರಿಟ್/ಡಿನೇಚರ್ಡ್ ಸ್ಪಿರಿಟ್ (ಮದ್ಯಸಾರ) ಹಂಚಿಕೆ ಕೋರಿ ಬರುವ ಪ್ರಸ್ತಾವನೆಗಳನ್ನು ಉನ್ನತ ಮಟ್ಟದ ಸಮಿತಿಯು (High Power Committee) ಪರಿಶೀಲಿಸಿ ಸದರಿ ಘಟಕಗಳಿಗೆ ಮೂಲಭೂತ ಸೌಕರ್ಯ, ಆರ್‌ಎಸ್/ಡಿ.ಎಸ್ ಇತ್ಯಾದಿಗಳನ್ನು ಗಮನಿಸಿ, ಅರ್ಹತೆಗನುಸಾರವಾಗಿ ಶಿಫಾರಸ್ಸು ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಡಿ.ಎಸ್. ವೆಂಕಟಚಲಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಅಬಕಾರಿ).

ಪಿ.ಆರ್. 1537

ತೋಟಗಾರಿಕಾ ಸಚಿವಾಲಯ

ವಿಷಯ: ಶ್ರೀಮತಿ ಬಿ.ಎನ್. ಯಾದವಾಡ, ರೇಷ್ಮೆ ಪ್ರವರ್ತಕರು, ರೇಷ್ಮೆ ಕೃಷಿ ಕ್ಷೇತ್ರ, ಸವದತ್ತಿ, ಇವರ ಪರೀಕ್ಷಾ ಪೂರ್ವ ಅವಧಿ ವಿಸ್ತರಿಸುವ ಬಗ್ಗೆ.

ಓದಲಾಗಿದೆ:

1. ಅಧಿಕೃತ ಜ್ಞಾಪನ ಸಂಖ್ಯೆ : ಸಿಬ್ಬಂದಿ (15)/ರೇಪ್ರವ/ಪಪೂಅ/81/2011-12, ದಿನಾಂಕ : 3-11-2011.
2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಇವರ ಪತ್ರ ಸಂಖ್ಯೆ : ಸಿಬ್ಬಂದಿ 1(5)/ರೇಪ್ರವ/ಪಪೂಅ/81/2011-12, ದಿನಾಂಕ : 3-11-2011.

ಪ್ರಸ್ತಾವನೆ :

ಶ್ರೀಮತಿ ಬಿ.ಎನ್. ಯಾದವಾಡ, ರೇಷ್ಮೆ ಪ್ರವರ್ತಕರು, ರೇಷ್ಮೆ ಕೃಷಿ ಕ್ಷೇತ್ರ, ಸವದತ್ತಿ ಇವರು ರೇಷ್ಮೆ ಪ್ರವರ್ತಕರ ಹುದ್ದೆಗೆ ನೇಮಕಗೊಂಡು ದಿನಾಂಕ : 11-12-2006 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಇವರ ಪರಿಕ್ಷಾ ಪೂರ್ವ ಅವಧಿಯನ್ನು ದಿನಾಂಕ : 10-12-2008 ರಂದು ಘೋಷಿಸಬೇಕಾಗಿತ್ತು. ಆದರೆ ಸದರಿಯವರು ಹುದ್ದೆಗೆ ನಿಗಧಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ನಿಗದಿತ ಅವಧಿಯಲ್ಲಿ ಪಾಸು ಮಾಡಿಕೊಳ್ಳದೇ ಪರೀಕ್ಷೆಯನ್ನು ದಿನಾಂಕ : 8-4-2010 ರಂದು ಪಾಸು ಮಾಡಿಕೊಂಡಿರುತ್ತಾರೆ. ನೇಮಕಾತಿ ಪ್ರಾಧಿಕಾರವಾದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ನೌಕರರ ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 4(1) (ii) ರನ್ವಯ ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ : 11-12-2008 ರಿಂದ 10-12-2009 ರವರೆಗೆ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಕೃತ ಜ್ಞಾಪನದಲ್ಲಿ ವಿಸ್ತರಿಸಿ ಆದೇಶಿಸಿದ್ದು, ನೌಕರರ ಪರಿವೀಕ್ಷಣಾ ಅವಧಿಯನ್ನು ದಿನಾಂಕ : 11-12-2009 ರಿಂದ 8-4-2010 ರವರೆಗೆ ವಿಸ್ತರಿಸಿ ಆದೇಶಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ.

ರೇಷ್ಮೆ ಆಯುಕ್ತರ ಕೋರಿಕೆಯಂತೆ ನೌಕರರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸಿದ್ದು, ನೌಕರರ ಕಾರ್ಯನಿರ್ವಹಣಾ ವರದಿಯು ತೃಪ್ತಿಕರವಾಗಿದ್ದು, ನೌಕರರು ನಿಗದಿತ ಇಲಾಖಾ ಪರೀಕ್ಷೆಗಳನ್ನು ಪಾಸುಮಾಡಿಕೊಂಡಿರುವುದರಿಂದ ಅವರ ಪರಿವೀಕ್ಷಣಾ ಅವಧಿಯನ್ನು ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ಅವರು ಪಾಸು ಮಾಡಿದ ದಿನಾಂಕದವರೆಗೆ ವಿಸ್ತರಿಸಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 43 ರೇಇವಿ 2012, ಬೆಂಗಳೂರು, ದಿನಾಂಕ: 16.5.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಬಿ.ಎನ್. ಯಾದವಾಡ, ರೇಷ್ಮೆ ಪ್ರವರ್ತಕರು, ರೇಷ್ಮೆ ಕೃಷಿ ಕ್ಷೇತ್ರ, ಸವದತ್ತಿ ಇವರ ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 4(1) (i) ರನ್ವಯ ದಿನಾಂಕ : 11-12-2009 ರಿಂದ 8-4-2010 ರವರೆಗೆ ವಿಸ್ತರಿಸಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ತೋಇ 38 ಆಂಆಸ 2012, ದಿನಾಂಕ : 2-5-2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸಿದ ಅವಧಿಗೆ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ನೌಕರರಿಗೆ ಕಾಲ್ಪನಿಕವಾಗಿ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗದಿಪಡಿಸಬಹುದು. ಆದರೆ, ವಿಸ್ತರಿಸಿದ ಅವಧಿಗೆ ಯಾವುದೇ ವೇತನ ಬಾಕಿಯನ್ನು ನೀಡುವಂತಿಲ್ಲವೆಂದು ಆದೇಶಿಸಿದೆ. ಈ ವಿಷಯದಲ್ಲಿ ಮೇಲ್ಕಂಡ ನಿಯಮಗಳ ನಿಯಮ 10 ರಂತೆ ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಎಸ್. ಚಂದ್ರಶೇಖರ್
ಪೀಠಾಧಿಕಾರಿ,
ತೋಟಗಾರಿಕೆ ಇಲಾಖೆ (ರೇಷ್ಮೆ).

ಪಿ.ಆರ್. 1538

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಸಿಆಸುಇ 16 ಇಡಿಸಿ 2011, ದಿನಾಂಕ : 25ನೇ ಮೇ 2012.

ವಿಷಯ : ನೆಮ್ಮದಿ ಕೇಂದ್ರಗಳ ಕಾರ್ಯನಿರ್ವಹಣೆಯ ಸಮನ್ವಯ/ಉಸ್ತುವಾರಿಗಾಗಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಬಗ್ಗೆ.

ಉಲ್ಲೇಖ : ದಿನಾಂಕ : 5-12-2009ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 148 ಇಜಿವಿ 2009.

1. ಗ್ರಾಮೀಣ ನಿವಾಸಿಗಳು ಸರ್ಕಾರದಿಂದ ನಾಗರೀಕರಿಗೆ (ಜಿ2ಸಿ) ಮತ್ತು ಖಾಸಗಿಯಿಂದ ನಾಗರೀಕರಿಗೆ (ಜಿ2ಸಿ) ನೀಡುವ ಸೇವೆಗಳನ್ನು ಅವರ ವಾಸಸ್ಥಳದ ಸಮೀಪದಲ್ಲೇ ಪಡೆಯಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ ನೆಮ್ಮದಿ ಗ್ರಾಮೀಣ ಟೆಲಿಸೆಂಟರ್ ಯೋಜನೆ" ಯನ್ನು 2006ರ ಅಕ್ಟೋಬರ್ ತಿಂಗಳಿನಿಂದ ಜಾರಿಗೆ ತರಲಾಗಿದೆ. ಒಟ್ಟು 43 ಸರ್ಕಾರದಿಂದ ನಾಗರೀಕರಿಗೆ (ಜಿ2ಸಿ) (ಮುಖ್ಯವಾಗಿ ಕಂದಾಯ ಇಲಾಖೆಗೆ ಸಂಬಂಧಿಸಿ ಸೇವೆಗಳು) ಮತ್ತು ಖಾಸಗಿಯಿಂದ ನಾಗರೀಕರಿಗೆ (ಬಿ2ಸಿ) ಸೇವೆಗಳನ್ನು ಈ ಕೇಂದ್ರಗಳ ಮೂಲಕ ನೀಡಲಾಗುತ್ತಿದೆ.

2. ಮೇಲೆ ಉಲ್ಲೇಖಿಸಿದ ದಿನಾಂಕ: 5-12-2009ರ ಸರ್ಕಾರಿ ಆದೇಶದನ್ವಯ ನೆಮ್ಮದಿ ಕೇಂದ್ರಗಳ ಕಾರ್ಯನಿರ್ವಹಣೆಯ ಸಮನ್ವಯ/ಉಸ್ತುವಾರಿಗಾಗಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು ಪುನರ್ ರಚಿಸಲಾಗಿದೆ ಹಾಗೂ ಅದರನ್ವಯ ಆ ಸಮಿತಿಗೆ ವಿವಿಧ ಅಧಿಕಾರಗಳನ್ನು ನೀಡಲಾಗಿದೆ. ಆದರೆ, ಸದರಿ ಸಮಿತಿಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಅತೀ ಅಗತ್ಯವಾಗಿದೆ. ಆದುದರಿಂದ, ನೆಮ್ಮದಿ ಕೇಂದ್ರಗಳ ಸುಗಮ ನಿರ್ವಹಣೆಗಾಗಿ ದಿನಾಂಕ : 5-12-2009ರ ಸದರಿ ಸರ್ಕಾರಿ ಆದೇಶದಂತೆ ಜಿಲ್ಲಾಧಿಕಾರಿಯವರು ಆಯಾಯ ಜಿಲ್ಲೆಗೆ ಸಂಬಂಧಿಸಿದಂತೆ ಅಗತ್ಯ ಸಮನ್ವಯ/ಉಸ್ತುವಾರಿ ಕ್ರಮಗಳನ್ನು ಕೂಡಲೇ ಕೈಗೊಳ್ಳುವಂತೆ ಈ ಮೂಲಕ ಕೋರಲಾಗಿದೆ.

ಪ್ರಶಾಂತ್ ಕುಮಾರ್ ಎಸ್.ಬಿ.
ಪೀಠಾಧಿಕಾರಿ-2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ)

ಪಿ.ಆರ್. 1539

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: 6 ಖಾಯಂ ಲೋಕ್ ಅದಾಲತ್ ಸ್ಥಾಪನೆಯನ್ವಯ 2012-13ನೇ ಸಾಲಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ : ಲಾ 54 ಎಲ್ಎಎಂ 2012, ದಿನಾಂಕ : 17-4-2012.
2. ಪತ್ರ ಸಂಖ್ಯೆ : ಪಿಎಲ್ಎ/5/ಅನುದಾನ/2012-13, ದಿನಾಂಕ: 7-4-2012, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದರವರಿಂದ.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ : 17-4-2012ರ ಆದೇಶದಲ್ಲಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಕ್ರಿಯಾ ಯೋಜನೆಗಳನ್ನು 2012-13ನೇ ಸಾಲಿನಲ್ಲಿ ಮುಂದುವರಿಸಲು ಮಂಜೂರಾತಿ ನೀಡಲಾಗಿದೆ. ಮೇಲೆ (2) ರಲ್ಲಿ ಓದಲಾದ ದಿನಾಂಕ : 7-4-2012ರ ಪತ್ರದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, 6 ಖಾಯಂ ಲೋಕ್ ಅದಾಲತ್ ಸ್ಥಾಪನೆಯ ಕಛೇರಿಗಳಲ್ಲಿನ ಖರ್ಚು ವೆಚ್ಚಗಳಿಗೆ 2012-13ನೇ ಸಾಲಿಗೆ ರೂ. 170.00 ಲಕ್ಷಗಳ ಅನುದಾನವನ್ನು ಆಯವ್ಯಯದಲ್ಲಿ (ಯೋಜನೆಗಳಡಿ) ಒದಗಿಸಲಾಗಿದ್ದು, ಸದರಿ ಮೊತ್ತದಲ್ಲಿ ರೂ. 100.00 ಲಕ್ಷಗಳನ್ನು ತುರ್ತಾಗಿ ಬಿಡುಗಡೆ ಮಾಡಿ 6 ಜಿಲ್ಲೆಗಳಲ್ಲಿ ಖಾಯಂ ಜನತಾ ನ್ಯಾಯಾಲಯಗಳು ಸುಗಮವಾಗಿ ಕಾರ್ಯನಿರ್ವಹಿಸಲು, ಅನುವು ಮಾಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 11 ಎಲ್‌ಎಡಿ 2012, ಬೆಂಗಳೂರು, ದಿನಾಂಕ: 24.5.2012.

ಪ್ರಸ್ತಾವನೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, 2012-13ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ 6 ಜಿಲ್ಲೆಗಳಲ್ಲಿ ಖಾಯಂ ಲೋಕ್ ಅದಾಲತ್‌ಗಳ ಸ್ಥಾಪನೆಯ ಕಛೇರಿಗಳಲ್ಲಿನ ಖರ್ಚು ವೆಚ್ಚಗಳ ನಿರ್ವಹಣೆಗೆ ಮೊದಲನೆ ಕಂತಿನಲ್ಲಿ ರೂ. 85.00 ಲಕ್ಷಗಳನ್ನು (ರೂಪಾಯಿ ಎಂಬತ್ತೈದು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2014-00-105-0-11-059 (ಯೋಜನೆ) ಅಡಿ ಭರಿಸುವುದು.

ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ನಿಯಮಾನುಸಾರ ಬಳಸತಕ್ಕದ್ದು.

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಮೊತ್ತವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪೇಯೀಜಾ ರಶೀದಿ ತಯಾರಿಸಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು ಇವರ ಮೇಲು ರುಜು ಪಡೆದು, ರಾಜ್ಯ ಹುಜೂರ್ ಖಜಾನೆಯಿಂದ ಚೆಕ್‌ನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಡ್ರಾ ಮಾಡಿಕೊಳ್ಳಬೇಕು.

ಇದಕ್ಕೆ ಆಂತರಿಕ ಆರ್ಥಿಕ ಸಲಹೆಗಾರರು, ವಸತಿ ನಗರಾಭಿವೃದ್ಧಿ ಹಾಗೂ ಕಾನೂನು ಇಲಾಖೆಯವರ ಟಿಪ್ಪಣಿ ಸಂಖ್ಯೆ : ವಸ 251 ಆಂಆಸ 2012 ದಿನಾಂಕ : 14-5-2012ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುಕ್ಮಿಣಿ ದಿವಾಕರ್

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 1527

ಒಳಡಾಳಿತ ಸಚಿವಾಲಯ

ವಿಷಯ: ಬೆಂಗಳೂರು ನಗರದ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರ ಕಛೇರಿಗೆ ಹೊಂದಿಕೊಂಡಂತೆ ಆಡಳಿತಾಧಿಕಾರಿಯ ಹುದ್ದೆಯ ಸೃಜನೆ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ : ಒಇ 130 ಎಲ್‌ಎಜಿ 79, ದಿನಾಂಕ : 7-10-1980.
2. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ : ಡಿಪಿಎನ್/ಸಿಶಾ-1/ಎ/39/2010-11, ದಿನಾಂಕ : 8-6-2011.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ : 7-10-1980 ರ ಸರ್ಕಾರದ ಆದೇಶದನ್ವಯ ಬೆಂಗಳೂರು ನಗರದ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸರ್ಕಾರಿ ಅಭಿಯೋಜಕರ ಹುದ್ದೆಯನ್ನು ಸೃಜಿಸಲಾಗಿದೆ.

ಮೇಲ (2) ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ದಿನಾಂಕ : 8-6-2011ರ ಪತ್ರದಲ್ಲಿ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಅಪೀಲು ಮತ್ತು ಪರಿಷ್ಕರಣಾ ಅರ್ಜಿಗಳನ್ನು ಸಲ್ಲಿಸುವ ಕೆಲಸವನ್ನು ಹಾಗೂ ಕಛೇರಿಯ ಆಡಳಿತಾತ್ಮಕ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಇಲ್ಲಿಗೆ ಮಂಜೂರಾಗಿರುವ ಸಿಬ್ಬಂದಿ ವರ್ಗದ ಹುದ್ದೆಗಳು ಕಛೇರಿ ಪ್ರಾರಂಭದಲ್ಲಿ ಸೃಜನೆಯಾಗಿರುವ ಹುದ್ದೆಗಳಾಗಿದ್ದು 01 ಅಧೀಕ್ಷಕರ ಹುದ್ದೆ ಮಾತ್ರ ಇದ್ದು, ಸದರಿಯವರು ಕಛೇರಿಯ ಮೇಲ್ವಿಚಾರಣೆಯ ಜೊತೆಗೆ ಸಿಬ್ಬಂದಿ ಕೊರತೆಯಿಂದಾಗಿ ವಿಷಯ ನಿರ್ವಾಹಕರಾಗಿ ಸಹ ಕಾರ್ಯ ನಿರ್ವಹಿಸುತ್ತಿದ್ದಾರೆ. ತದನಂತರ ಹೊಸದಾಗಿ ಪ್ರಾರಂಭವಾಗಿರುವ ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ಸರ್ಕಾರಿ ಅಭಿಯೋಜಕರ ಹುದ್ದೆಗಳು ಮಾತ್ರ ಸೃಜನೆಯಾಗಿದ್ದು, ಪೂರಕ ಸಿಬ್ಬಂದಿ ವರ್ಗದವರ ಹುದ್ದೆಗಳು ಸೃಜನೆಯಾಗಿಲ್ಲವಾದ್ದರಿಂದ, ಕಛೇರಿಯ ಕೆಲಸ-ಕಾರ್ಯವನ್ನು ಹೊಂದಾಣಿಕೆ ಮಾಡಿಕೊಂಡು ನಿರ್ವಹಿಸುವುದು ಕಷ್ಟಕರವಾಗಿರುತ್ತದೆ. ಅಲ್ಲದೆ, ಈ ಕಛೇರಿಗೆ ನ್ಯಾಯಾಲಯದ ಕಟ್ಟಡದ ಒಂದೇ ಸಂಕೀರ್ಣದಲ್ಲಿ ಸ್ಥಳಾವಕಾಶ ಸಹ ಕಲ್ಪಿಸಿರುವುದಿಲ್ಲ. ಆದ್ದರಿಂದ, ಈ ಕಛೇರಿಯ ಕೆಲಸ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ರೂ. 10800-20025 ರ ವೇತನ ಶ್ರೇಣಿಯನ್ನು ಹೊಂದಿರುವ ಒಂದು ಆಡಳಿತಾಧಿಕಾರಿ ಹುದ್ದೆಯನ್ನು ಸೃಜಿಸುವುದು ಅತ್ಯಗತ್ಯವಾಗಿದ್ದು, ಅಗತ್ಯವಾಗಿ ಸೃಜಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 269 ಪಿಪಿಇ 2011, ಬೆಂಗಳೂರು, ದಿನಾಂಕ: 26ನೇ ಮೇ, 2012.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರದ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸರ್ಕಾರಿ ಅಭಿಯೋಜಕರ ಕಛೇರಿಗೆ ಹೊಂದಿಕೊಂಡಂತೆ ರೂ. 10800–20025ರ ವೇತನ ಶ್ರೇಣಿಯನ್ನು ಒಂದು ಆಡಳಿತಾಧಿಕಾರಿಯ ಹುದ್ದೆಯನ್ನು ಮೊದಲ ಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿದೆ.

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಒಂದು ಆಡಳಿತಾಧಿಕಾರಿಯ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಸಹಮತಿಯನ್ನು ನೀಡಿದೆ.

ಸದರಿ ಹುದ್ದೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2014–ನ್ಯಾಯಾಪರಿಪಾಲನೆ–00–114–ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು–0–02 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು ಇದರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ : ಆಇ 194 ವೆಚ್ಚ–11/2012, ದಿನಾಂಕ : 4–5–2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ).

ಪಿ.ಆರ್. 1534

ಒಳಾಡಳಿತ ಸಚಿವಾಲಯ

ವಿಷಯ: ಸಿಟಿ ಸಿವಿಲ್ ನ್ಯಾಯಾಲಯ ಬೆಂಗಳೂರು ಇಲ್ಲಿ ಮಾಧ್ಯಮ ಪ್ರತಿನಿಧಿಗಳು ಮತ್ತು ಪೊಲೀಸ್ ನಡುವೆ ನಡೆದ ಘರ್ಷಣೆ ಕುರಿತು ನ್ಯಾಯಮೂರ್ತಿ ಶ್ರೀ ಆರ್.ಜಿ. ವೈದ್ಯನಾಥ ವಿಚಾರಣಾ ಆಯೋಗಕ್ಕೆ ಶ್ರೀ ಎಂ. ಸೀತಾರಾಮ ಶೆಟ್ಟಿ ಹಿರಿಯ ವಕೀಲರು, ಶ್ರೀ ಗೌತಮಾದಿತ್ಯ ಶ್ರೀಧರ ಕಿರಿಯ ವಕೀಲರುಗಳನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ: ಕಾರ್ಯದರ್ಶಿ, ನ್ಯಾಯಮೂರ್ತಿ, ಶ್ರೀ ಆರ್.ಜಿ. ವೈದ್ಯನಾಥ, ವಿಚಾರಣಾ ಆಯೋಗರವರ ಪತ್ರ ಸಂಖ್ಯೆ : ಆರ್‌ಜಿವಿಸಿ ನಂ. 66/2012 ದಿನಾಂಕ : 15–5–2012.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 15–5–2012ರ ಪತ್ರದಲ್ಲಿ ಕಾರ್ಯದರ್ಶಿ, ನ್ಯಾಯಮೂರ್ತಿ ಶ್ರೀ ಆರ್.ಜಿ. ವೈದ್ಯನಾಥ ವಿಚಾರಣಾ ಆಯೋಗ, ನಂ. 52, ಬಾಲಬ್ರೂಯಿ ಅತಿಥಿಗೃಹ, ಅರಮನೆ ರಸ್ತೆ, ಬೆಂಗಳೂರು ಇವರು ವಿಚಾರಣಾ ಆಯೋಗದ ಕಾರ್ಯ ಕಲಾಪಗಳಲ್ಲಿ ಹಾಜರಾಗಲು ಇಬ್ಬರು ವಕೀಲರ ಅಗತ್ಯವಿರುವುದೆಂದು ತಿಳಿಸುತ್ತಾ, ಈ ಸಂಬಂಧದಲ್ಲಿ ಶ್ರೀ ಎಂ. ಸೀತಾರಾಮ ಶೆಟ್ಟಿ, ಹಿರಿಯ ವಕೀಲರು, ಮಂಗಳೂರು ಮತ್ತು ಶ್ರೀ ಗೌತಮಾದಿತ್ಯ ಶ್ರೀಧರ, ಕಿರಿಯ ವಕೀಲರು ಜಯನಗರ ಬೆಂಗಳೂರು ಇವರುಗಳನ್ನು ಆಯೋಗದ ಪರವಾಗಿ ಸಹಕರಿಸಲು ನೇಮಕಾತಿ ಮಾಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತ ಎಂ. ಸೀತಾರಾಮಶೆಟ್ಟಿ, ಹಿರಿಯ ವಕೀಲರು ಹಾಗೂ ಶ್ರೀ ಗೌತಮಾದಿತ್ಯ ಶ್ರೀಧರ ಕಿರಿಯ ವಕೀಲರು ಇವರುಗಳು ಸಹ ಆಯೋಗದ ಪರವಾಗಿ ಹಾಜರಾಗಲು ದಿನಾಂಕ : 22–5–2012 ಹಾಗೂ 24–5–2012ರ ಪತ್ರಗಳಲ್ಲಿ ಒಪ್ಪಿಗೆ ನೀಡಿರುತ್ತಾರೆ. ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 11 ಪಿಸಿಇ 2012, ಬೆಂಗಳೂರು, ದಿನಾಂಕ: 28.5.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಶ್ರೀ ಆರ್.ಜಿ. ವೈದ್ಯನಾಥ ಆಯೋಗದ ಕಾರ್ಯಕಲಾಪಗಳಲ್ಲಿ ಸಹಕರಿಸಲು ಶ್ರೀ ಎಂ. ಸೀತಾರಾಮ ಶೆಟ್ಟಿ ಹಿರಿಯ ವಕೀಲರು, ಮಂಗಳೂರು ಮತ್ತು ಶ್ರೀ ಗೌತಮಾದಿತ್ಯ ಶ್ರೀಧರ ಕಿರಿಯ ವಕೀಲರು, ಬೆಂಗಳೂರು ಇವರುಗಳನ್ನು ವಿಚಾರಣಾ ಆಯೋಗದ ವಕೀಲರುಗಳಾಗಿ ನೇಮಕಾತಿ ಮಾಡಲಾಗಿದೆ.

ಸದರಿ ವಕೀಲರುಗಳಿಗೆ ಶುಲ್ಕ ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪ್ರಕಾಶ ವೈ.ಕೆ.
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ).

WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜೂನ್ ೨೮, ೨೦೧೨ (ಆಷಾಢ ೭, ಶಕ ವರ್ಷ ೧೯೩೪)	ಸಂಚಿಕೆ ೨೬

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಸಹಕಾರ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಸಇ 99 ಮಾಇಸೇ 2012, ಬೆಂಗಳೂರು, ದಿನಾಂಕ : 02ನೇ ಜೂನ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಇ 99 ಮಾಇಸೇ(2) 2012 ದಿನಾಂಕ:30-05-2012ರ ಕ್ರಮ ಸಂಖ್ಯೆ :03 ರಲ್ಲಿನ ಶ್ರೀಮತಿ ಗಾಯಿತ್ರಿ ಉಪ ನಿರ್ದೇಶಕರು ಹಾಗೂ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ, ಹಾಸನ ಜಿಲ್ಲೆ, ಇವರನ್ನು " ಉಪ ನಿರ್ದೇಶಕರು, ಎ.ಪಿ.ಎಂ.ಸಿ ತುಮಕೂರು ಇಲ್ಲಿಗೆ ವರ್ಗಾಯಿಸಿ ಸ್ಥಳ ನಿಯುಕ್ತಿಗೊಳಿಸಿರುವುದನ್ನು ಜಿಲ್ಲಾ ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ತುಮಕೂರು" ಇಲ್ಲಿ ಕಾರ್ಯನಿರ್ವಹಿಸುತ್ತಿರುವ "ಶ್ರೀ. ಕೆ.ಸಿ. ದೊರೆಸ್ವಾಮಿ, ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ತುಮಕೂರು" ಇವರ ಜಾಗಕ್ಕೆ ಎಂಬುದಾಗಿ ಯಾವಾಗಲು ತಿದ್ದಿಕೊಂಡು ಓದಿಕೊಳ್ಳುವುದು:-

ಶ್ರೀ. ಕೆ.ಸಿ. ದೊರೆಸ್ವಾಮಿ, ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ತುಮಕೂರು ರವರು ಸ್ಥಳ ನಿಯುಕ್ತಿಗಾಗಿ ಸರ್ಕಾರಕ್ಕೆ ವರದಿ ಮಾಡಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಕೆ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ.

ಪಿ.ಆರ್. 871

HIGH COURT OF KARNATAKA

NOTIFICATION

No. HCE 111/ 2012, Bangalore, Dated : 31st May, 2012.

Sri Ramakrishna, Assistant Registrar of this office is permitted to retire from service on attaining the age of superannuation w.e.f. the afternoon of 31-05-2012 and he is relieved of his duties in this office on the afternoon of 31-05-2012.

Further, the Disciplinary proceedings in D.E. No.2/2010 (HCE 1228/2007) and D.E No. 3/2012 (HCE 755/2012) pending against Sri Ramakrishna, Assistant Registrar of this office will be continued even after his retirement under Rule 214(2)(a) and (4) of KCSRs., and he is directed to appear for the enquiry in D.E No. 3/2012 (HCE 755/2012) as and when required.

By Order of The Hon`ble Chief Justice,
P. KRISHNA BHAT,
Registrar General.

P.R. 875

PERSONNEL AND ADMINISTRATIVE REFORMS SECRETARIAT

NOTIFICATION

No. DPAR 311 SAS 2012, Bangalore, Dated : 2nd June, 2012.

Sri P.N. Sreenivasachary, IAS, Secretary to Government, Urban Development Department (Municipalties & UDAs), Bangalore is placed in additional charge of the post of the Secretary to Government, Water Resources Department (Minor Irrigation) until further orders.

Dr. N. Nagambika Devi, IAS, Commissioner for Sericulture Development & Director of Sericulture, Bangalore is placed in additional charge of the post of the Managing Director, Karnataka Silk Marketing Board, Banglaore until further orders vice Sri Parmesh Pandey, IAS.

Sri V. Ponnuraj, IAS, Commissioner, Survey Settlement & Land Records, Bangalore is plced in additional charge of the post of the Secretary to Government Revenue Department, (Bhoomi & Urban Property Ownership Records), Bangalore until further orders vice Sri Rajeev Chawla, IAS.

By Order and in the name of the Governor of Karnataka,
U.H. NARAYANASWAMY
Under Secretary to Government,
DPAR (Services-I).

P.R. 880

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 334 ಸಅಸೇ 2011, ಬೆಂಗಳೂರು, ದಿನಾಂಕ : 5-6-2012

ಅಧಿಸೂಚನೆ ಸಂಖ್ಯೆ : ಸಇ 166 ಎಸಸೇ 2012, ದಿನಾಂಕ : 31-5-2012 ರನ್ವಯ ಸಚಿವಾಲಯದ ಸಹಕಾರ ಇಲಾಖೆಯಲ್ಲಿ ನಿಯೋಜನೆ ಮೇಲೆ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಿ.ಸಿ. ಸತೀಶ್‌ರವರನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು, (ಐಸಿಡಿಪಿ), ಬೆಂಗಳೂರು ಇಲ್ಲಿಗೆ ವರ್ಗಾಯಿಸಿರುವುದರಿಂದ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸಚಿವಾಲಯದ ಸೇವೆಯಿಂದ ಬಿಡುಗಡೆಗೊಳಿಸಿ ವರ್ಗಾವಣೆಗೊಂಡ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿದೆ.

ಅದೇ ರೀತಿ ಸದರಿ ಅಧಿಸೂಚನೆಯಲ್ಲಿ ಸಚಿವಾಲಯದ ಸೇವೆಗೆ ನಿಯೋಜನೆಗೊಂಡಿರುವ ಶ್ರೀ ಜಿ.ಎಸ್. ರಮಣರೆಡ್ಡಿ ಸಹಕಾರ ಸಂಘಗಳ ಅಪರ ನಿಬಂಧಕರು, (ವಸತಿ ಮತ್ತು ಇತರೆ) ಬೆಂಗಳೂರು ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ಇಲ್ಲಿಗೆ ನಿಯೋಜಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಕೆ. ಲಕ್ಷ್ಮೀನಾರಾಯಣ ರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು-3).

ಪಿ.ಆರ್. 881

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 62 ಎಸ್‌ಎಫ್‌ಎಸ್ 2012, ಬೆಂಗಳೂರು, ದಿನಾಂಕ : 6-6-2012

ಶ್ರೀ ಅಶೋಕ್ ಕುಮಾರ್ ಸಿಂಗ್, ಐಎಫ್‌ಎಸ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ದಿನಾಂಕ : 20-6-2012 ರಿಂದ 29-6-2012 ರವರೆಗೆ ಒಟ್ಟು 10 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಜಿ.ಆರ್. ನಾಗರಾಜ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು-5).

ಪಿ.ಆರ್. 882

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಡಿಪಿಎಆರ್ 64 ಎಸ್‌ಎಫ್‌ಎಸ್ 2012, ಬೆಂಗಳೂರು, ದಿನಾಂಕ : 6-6-2012

ಶ್ರೀ ಎಂ.ಎಸ್. ಗೌಡರ್, ಐಎಫ್‌ಎಸ್ (ಕೆಎನ್-84), ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಕೆನಡಾದಲ್ಲಿ 5ನೇ ಹಂತದ ಮಿಡ್ ಕರೀರ್ ತರಬೇತಿಯನ್ನು ಪೂರೈಸಿದ ನಂತರ, ಭಾರತ ಸರ್ಕಾರದ ದಿನಾಂಕ : 5-12-2007, ಸಂಖ್ಯೆ : 11019/16/2001-AIS-III ರ ಪತ್ರದಲ್ಲಿ ಹೊರಡಿಸಿರುವ ನಿಯಮಗಳನ್ವಯ ದಿನಾಂಕ : 10-6-2012 ರಂದು ಒಂದು ದಿನದ ಎಕ್ಸ್-ಇಂಡಿಯಾ ರಜೆಯನ್ನು (ex-India Leave) ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಜಿ.ಆರ್. ನಾಗರಾಜ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು-5).

ಪಿ.ಆರ್. 883

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 31 ಡಿಬಿಎಂ 2012, ಬೆಂಗಳೂರು, ದಿನಾಂಕ : 6-6-2012

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 12 ಡಿಎಫ್‌ಆರ್ 2012, ದಿನಾಂಕ : 26-3-2012 ನ್ನು ಭಾಗಶಃ ಮಾರ್ಪಡಿಸಿ, ಟೆಂಡರ್ ಪರಿಶೀಲನಾ ಸಮಿತಿಗೆ ನೇಮಕ ಮಾಡಿರುವ ಸರ್ಕಾರದ ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ ಇವರ ಬದಲಾಗಿ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ) ಇವರನ್ನು ಒಳಗೊಂಡಂತೆ ಟೆಂಡರ್ ಪರಿಶೀಲನಾ ಸಮಿತಿಯನ್ನು ಪುನರ್ ರಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಎಸ್. ಮಂಜುನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು ಇಲಾಖೆ (ಕಾರ್ಯಕಾರಿ).

ಪಿ.ಆರ್. 884

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 96 ಆಸೇವ 2012, ಬೆಂಗಳೂರು, ದಿನಾಂಕ : 6-6-2012

ಶ್ರೀ ಸೈಯದ್ ಅಬ್ದುಲ್ ರಬ್, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಪರ ಆಯುಕ್ತರು (ಆಡಳತ ಮತ್ತು ಅಭಿವೃದ್ಧಿ) ಪ್ರಾದೇಶಿಕ ಆಯುಕ್ತರ ಕಛೇರಿ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ-ಖಾಲಿ ಹುದ್ದೆಗೆ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ವಡಗಾವೆ ಬಸವರಾಜ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು ಇಲಾಖೆ (ಸೇವೆಗಳು-2).

ಪಿ.ಆರ್. 885

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಇಎನ್ 79 ಸಮನ್ವಯ 2012, ಬೆಂಗಳೂರು, ದಿನಾಂಕ : 5-6-2012

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ ಇದರ ಮೆಮೊರ್ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 74 (ಎ) ಮತ್ತು (ಬಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ.ಎಸ್. ಗೋಪಾಲ್, ಮುಖ್ಯ ಇಂಜಿನಿಯರ್ (ವಿದ್ಯುತ್), ಹುಬ್ಬಳ್ಳಿ ವಿಭಾಗ, ಹೆಸ್ಕಾಂ ಇವರನ್ನು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ ಇದರ ನಿರ್ದೇಶಕರು

(ತಾಂತ್ರಿಕ) ಹುದ್ದೆಗೆ (ಶ್ರೀ ಎಂ. ಮಹದೇವಪ್ಪ ಇವರ ಸ್ಥಾನದಲ್ಲಿ) ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇದರ ಮೆಮೋರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 74(ಎ) ಮತ್ತು (ಬಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಅಶೋಕ್ ಅಂಗಡಿ, ಮುಖ್ಯ ಇಂಜಿನಿಯರ್ (ವಿದ್ಯುತ್), BMAZ, ಬೆಸ್ಕಾಂ ಇವರನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇದರ ನಿರ್ದೇಶಕರು (ತಾಂತ್ರಿಕ) ಹುದ್ದೆಗೆ (ಶ್ರೀ ಚಿಕ್ಕನಂಜಪ್ಪ ಇವರ ಸ್ಥಾನದಲ್ಲಿ) ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಶ್ರೀ ಎಂ. ಗೋವಿಂದಪ್ಪ, ಮುಖ್ಯ ಇಂಜಿನಿಯರ್ (ಯೋಜನೆ ಮತ್ತು ಸಮನ್ವಯ), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ಇವರನ್ನು ಮುಖ್ಯ ಇಂಜಿನಿಯರ್ (ವಿದ್ಯುತ್), ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ, ಬೆಂಗಳೂರು ಹುದ್ದೆಗೆ (ಶ್ರೀ ಗೋವಿಂದರಾಜು ಇವರ ಸ್ಥಾನದಲ್ಲಿ) ನೇಮಿಸಲು, ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

ಪಿ.ಆರ್. 886

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 224 ಇಟಿಇ 2008, ಬೆಂಗಳೂರು, ದಿನಾಂಕ : 7-6-2012

ಶ್ರೀ ವಿ.ಪಿ. ಈಶ್ವರ್ ನಾಯಕ್, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ಇಲಾಖೆ ಇವರಿಗೆ ಉದ್ಯೋಗ ಮತ್ತು ತರಬೇತಿ ಇಲಾಖೆಯ ವಿಭಾಗದ ರೂ. 48,900-63,900 ರ ವೇತನ ಶ್ರೇಣಿಯ ಅಪರ ನಿರ್ದೇಶಕರು (ತರಬೇತಿ)/ಅಪರ ರಾಜ್ಯ ಯೋಜನಾ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಎಸ್. ವಿಶ್ವನಾಥಪ್ಪ

ಪೀಠಾಧಿಕಾರಿ

ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ).

ಪಿ.ಆರ್. 887

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಲಾ 99 ಎಲ್‌ಎಜಿ 2012, ಬೆಂಗಳೂರು, ದಿನಾಂಕ : 1-6-2012

ಅಧಿಸೂಚನೆ ಸಂಖ್ಯೆ : ಲಾ 104 ಎಲ್‌ಎಜಿ 2010, ದಿನಾಂಕ : 9-4-2012ರನ್ವಯ ನೇಮಿಸಲಾದ ಶ್ರೀ ಶ್ರೀಮಂತ ತಂದೆ ಬಕ್ಕಪ್ಪ ಕಟ್ಟಿಮನಿ, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 5(2)(6)ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಯಿಂದ ವಜಾಗೊಳಿಸಲಾಗಿದೆ.

ಸದರಿ ಹುದ್ದೆಯ ಕರ್ತವ್ಯಗಳನ್ನು ಸೇಡಂ ತಾಲ್ಲೂಕಿನ ಅಪರ ಸರ್ಕಾರಿ ವಕೀಲರಿಗೆ ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸಲು ಸೂಚಿಸಿದೆ.

ಶ್ರೀ ಶ್ರೀಮಂತ ತಂದೆ ಬಕ್ಕಪ್ಪ ಕಟ್ಟಿಮನಿ, ಅಪರ ಸರ್ಕಾರಿ ವಕೀಲರು ಇವರಿಗೆ ನಿಯಮ 5(6) ರನ್ವಯ ಒಂದು ತಿಂಗಳ ರಿಟೈನರ್ ಫೀಯನ್ನು ಪಾವತಿಸಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಅ.ರಾ. ಚಿತ್ತರಗಿ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1) (ಪ್ರ),

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 888

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಲಾ 43 ಎಲ್ಎಜಿ 2012, ಬೆಂಗಳೂರು, ದಿನಾಂಕ : 2-6-2012

ಶ್ರೀ ಶ್ರೀಧರ್ ಮೆಹರ್ವಾಡೆ, ಅಪರ ಸರ್ಕಾರಿ ವಕೀಲರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ : 16-1-2012 ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದಿವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಅ.ರಾ. ಚಿತ್ತರಗಿ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-I) (ಪ್ರ).
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 889

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಕಂಇ 227 ಎಎಸ್‌ಡಿ 2012, ಬೆಂಗಳೂರು, ದಿನಾಂಕ : 4-6-2012

ಶಿರಸ್ತೇದಾರ್/ಉಪ ತಹಶೀಲ್ದಾರ್ ವೃಂದದಿಂದ ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 301 ಎಎಸ್‌ಡಿ 2011, ದಿನಾಂಕ : 30-1-2012 ರಲ್ಲಿ ಪದೋನ್ನತಿ ನೀಡಿ ಆದೇಶಿಸಲಾಗಿದೆ. ಸದರಿ ಆದೇಶದಲ್ಲಿರುವ ಈ ಕೆಳಕಂಡ ಅಧಿಕಾರಿಗಳ ಹೆಸರುಗಳನ್ನು ಅವರುಗಳ ಹೆಸರುಗಳ ಮುಂದೆ ಸೂಚಿಸಿರುವಂತೆ ಸರಿಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಕ್ರಮ ಸಂ.	ಪದೋನ್ನತಿ ಅಧಿಸೂಚನೆಯಲ್ಲಿನ ಕ್ರಮ ಸಂಖ್ಯೆ	ತಹಶೀಲ್ದಾರರ ಹೆಸರು (ಶ್ರೀ/ಶ್ರೀಮತಿ)	ಸರಿಪಡಿಸಿಕೊಳ್ಳ ಬೇಕಾಗಿರುವ ಅಧಿಕಾರಿಯ ಹೆಸರು
1.	152	ಉಮಾ ಪಾರ್ವತಿ, ತಹಶೀಲ್ದಾರ್ ಗ್ರೇಡ್-2	ರೋಸಿ ಉಮಾ ಪಾರ್ವತಿ
2.	37	ಎಂ.ಬಿ. ಪಾಟೀಲ್, ತಹಶೀಲ್ದಾರ್	ಪಾಟೀಲ್ ಮಲ್ಲಿಕಾರ್ಜುನ ಬಸಣ್ಣ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 890

ಕಂದಾಯ ಸಚಿವಾಲಯ

ತಿದ್ದುಪಡಿ ಅಧಿಸೂಚನೆ

ಸಂಖ್ಯೆ : ಆರ್‌ಡಿ 438 ಎಎಸ್‌ಡಿ 2011, ಬೆಂಗಳೂರು, ದಿನಾಂಕ : 31-5-2012

ಸಂಖ್ಯೆ : ಆರ್‌ಡಿ 438 ಎಎಸ್‌ಡಿ 2011, ದಿನಾಂಕ : 12-12-2012 ಹಾಗೂ 28-4-2012ರ ಅಧಿಸೂಚನೆಗಳಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

ಸದರಿ ಅಧಿಸೂಚನೆಯ ಕ್ರಮ ಸಂಖ್ಯೆ (15)ರ ಶ್ರೀ ಕೆ.ಬಿ. ಸುಂದರ್, (ಕಟ್ಟಿ ಬೀಮಸುಂದರ್) ಚುನಾವಣಾ ತಹಶೀಲ್ದಾರ್, ಬೆಂಗಳೂರು ಜಿಲ್ಲೆ ಇವರ ವಯೋ ನಿವೃತ್ತಿ ಹೊಂದುವ ದಿನಾಂಕ : 31-5-2012 ಎಂಬುದಾಗಿ ನಮೂದಿಸಲಾಗಿದೆ. ಸದರಿಯವರ ನೈಜ ಜನ್ಮ ದಿನಾಂಕ : 14-10-1954 ಆಗಿರುವುದರಿಂದ ಈ ಅಧಿಕಾರಿಯ ಹೆಸರನ್ನು ಸದರಿ ಪಟ್ಟಿಯಿಂದ ಕೈಬಿಟ್ಟು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 891

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆರ್‌ಡಿ 224 ಎಎಸ್‌ಡಿ 2012, ಬೆಂಗಳೂರು, ದಿನಾಂಕ : 5-6-2012

ಶ್ರೀ ಆರ್.ಆರ್. ಮಣ್ಣೂರು, ತಹಶೀಲ್ದಾರ್ ಗ್ರೇಡ್-2, ಪತ್ರಾಂಕಿತ ಬೋಧಕರು, ಜಿಲ್ಲಾ ತರಬೇತಿ ಸಂಸ್ಥೆ, ಧಾರವಾಡ ಅವರು ದಿನಾಂಕ : 19-2-2012 ರಿಂದ 25--3-2012 ವರೆಗೆ ಸ್ಥಳ ನೇಮಕಾತಿ ನಿರೀಕ್ಷಣೆಯಲ್ಲಿದ್ದ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 8(15)(ಎಫ್) ರನ್ವಯ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 892

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 68 ಎಸ್‌ಎಫ್‌ಎಸ್ 2012, ಬೆಂಗಳೂರು, ದಿನಾಂಕ: 12ನೇ ಜೂನ್, 2012.

ಶ್ರೀ ಜಿ. ಎನ್. ಶ್ರೀಕಂಠಯ್ಯ, ಐಎಫ್‌ಎಸ್ (ಕೆಎನ್-86), ನಿರ್ದೇಶಕರು, ಆಯುಷ್ ಇಲಾಖೆ, ಬೆಂಗಳೂರು ಇವರಿಗೆ ವೈದ್ಯಕೀಯ ಕಾರಣಗಳ ಹಿನ್ನೆಲೆಯಲ್ಲಿ ದಿನಾಂಕ : 11/06/2012 ರಿಂದ 23/06/2012ರವರೆಗೆ ಒಟ್ಟು 13 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ ಹಾಗೂ ದಿನಾಂಕ : 9, 10 ಮತ್ತು 24ನೇ ಜೂನ್ 2012 ರಂದು ಬರುವ ಸಾರ್ವತ್ರಿಕ ರಜಾ ದಿನಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ. ಆರ್. ನಾಗರಾಜ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-5).

ಪಿ.ಆರ್. 896

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 10 ಸೇಉನ್ಯಾ 2012(ಭಾ), ಬೆಂಗಳೂರು, ದಿನಾಂಕ: 08ನೇ ಜೂನ್, 2012.

ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ : ಜಿಒಬಿ(I)1/2012 ದಿನಾಂಕ : 06-06-2012ರಲ್ಲಿ ವರ್ಗಾವಣೆ ಮಾಡಿ ಆದೇಶಿಸಿರುವಂತೆ ಈ ಕೆಳಕಂಡ ಜಿಲ್ಲಾ ನ್ಯಾಯಾಧೀಶರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಲಾಗಿರುವ ಹುದ್ದೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು, ಪದನಾಮ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಲಯ	ಸ್ಥಳ ನಿಯುಕ್ತಿಗೊಳಿಸಲಾದ ನ್ಯಾಯಾಲಯ ಮತ್ತು ಪದನಾಮ
1	ಶ್ರಿ ಕೆ.ಎಸ್. ಬೀಳಗಿ, ಅಧ್ಯಕ್ಷಾಧಿಕಾರಿ, ಕಾರ್ಮಿಕ ನ್ಯಾಯಾಲಯ, ಗುಲ್ಬರ್ಗಾ.	ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ, ಗುಲ್ಬರ್ಗಾ (ಶ್ರೀ ನೆಲಹಾಳ ಶರಣಪ್ಪರವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಕೆ. ಲಕ್ಷ್ಮೀನಾರಾಯಣ ರಾವ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3).

ಪಿ.ಆರ್. 897

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 38 ಆಸೇವ 2012, ಬೆಂಗಳೂರು, ದಿನಾಂಕ: 08ನೇ ಜೂನ್, 2012.

ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಾದ ಡಾ॥ ವಿ. ಎಸ್. ಆಚಾರ್ಯ ಇವರು ದಿನಾಂಕ : 14-02-2012 ರಂದು ನಿಧನರಾದ ಕಾರಣದಿಂದ ಅವರ ವಿಶೇಷ ಕರ್ತವ್ಯಾಧಿಕಾರಿಗಳಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನಿವೃತ್ತ ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿಯಾದ ಡಾ॥ ಎ. ಪಿ. ಪ್ರಸನ್ನ ಇವರ ಸೇವೆಯನ್ನು ದಿನಾಂಕ : 21-02-2012ರ ಅಪರಾಹ್ನದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ವಡಗಾವೆ ಬಸವರಾಜ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2).

ಪಿ.ಆರ್. 898

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 63 ಎಸ್‌ಎಫ್‌ಎಸ್ 2012, ಬೆಂಗಳೂರು, ದಿನಾಂಕ: 29ನೇ ಮೇ, 2012.

ಶ್ರೀಮತಿ ರೀತು ಕಕ್ಕರ್, ಐಎಫ್‌ಎಸ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ರಿಸರ್ಚ್, ಬೆಂಗಳೂರು ಇವರಿಗೆ ಥಾಮಸ್ ಕುಕ್ (ಐ) ಲಿಮಿಟೆಡ್‌ನ ಮುಖಾಂತರ ತಮ್ಮ ಪತಿ ಹಾಗೂ ಇಬ್ಬರು ಮಕ್ಕಳೊಂದಿಗೆ EUROPE ಗೆ ಖಾಸಗಿ ಪ್ರವಾಸ ಕೈಗೊಳ್ಳಲು ದಿನಾಂಕ : 01/07/2012 ರಿಂದ 15/07/2012 ರವರೆಗೆ 15 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಶೋಕ್ ಪಿ. ಅತ್ರೆ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-5).

ಪಿ.ಆರ್. 899

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 18 ಆಸೇಇ 2011, ಬೆಂಗಳೂರು, ದಿನಾಂಕ: 08ನೇ ಜೂನ್, 2012.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ದಿನಾಂಕ : 11-06-2012 ರಿಂದ 15-06-2012 ರವರೆಗೆ ನಡೆಯಲಿರುವ ಭಾರತ ಸರ್ಕಾರದ ಪ್ರಾಯೋಜಿತ **DOPT**ಯ **Management Development Programme** ತರಬೇತಿಗೆ ಕೆಳಕಂಡ ಕೆ.ಎ.ಎಸ್. (ಆಯ್ಕೆ ಶ್ರೇಣಿ)/(ಹಿರಿಯ ಶ್ರೇಣಿ) ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ	ಕಾರ್ಯನಿರ್ವಹಿಸುತ್ತಿರುವ ಹುದ್ದೆ
01	**ಜಿತೇಂದ್ರ ಸಿಂಗ್,** ಕೆ.ಎ.ಎಸ್. (ಆಯ್ಕೆ ಶ್ರೇಣಿ)	ವಿಶೇಷ ಕರ್ತವ್ಯಾಧಿಕಾರಿ, ಐ.ಟಿ.ಬಿ.ಟಿ. ಬಹುಮಹಡಿಗಳ ಕಟ್ಟಡ, ಬೆಂಗಳೂರು. M-9845027830
02	**ಕಾವೇರಿ ಬಿ.ಬಿ.** ಕೆ.ಎ.ಎಸ್. (ಆಯ್ಕೆ ಶ್ರೇಣಿ)	ನಿರ್ದೇಶಕರು, ಸಮೂಹ ಶಿಕ್ಷಣ ಇಲಾಖೆ, ಬೆಂಗಳೂರು. M-9449014870
03	**ನಗತ್ ತಬಸಮ್ ಆಬ್ರೂ** ಕೆ.ಎ.ಎಸ್. (ಆಯ್ಕೆ ಶ್ರೇಣಿ)	ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು. M-9449804090

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ	ಕಾರ್ಯನಿರ್ವಹಿಸುತ್ತಿರುವ ಹುದ್ದೆ
04	ಟಿ. ಹೆಚ್. ಎಂ. ಕುಮಾರ್, ಕೆ.ಎ.ಎಸ್. (ಆಯ್ಕೆ ಶ್ರೇಣಿ)	ಜನರಲ್ ಮ್ಯಾನೇಜರ್, ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಬೆಂಗಳೂರು. M–9448496003
05	ಡಾ॥ ಮಹಾದೇವ ಹೆಚ್. ಆರ್. ಕೆ.ಎ.ಎಸ್. (ಆಯ್ಕೆ ಶ್ರೇಣಿ)	ಮಾನ್ಯ ಮುಖ್ಯ ಮಂತ್ರಿಯವರ ಜಂಟಿ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು. M–99001318358
06	ಜಿಯಾವುಲ್ಲಾ ಎಸ್. ಕೆ.ಎ.ಎಸ್. (ಆಯ್ಕೆ ಶ್ರೇಣಿ)	ಮುಖ್ಯ ಯೋಜನಾಧಿಕಾರಿ, ಕರ್ನಾಟಕ ರಾಜ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆ, ಬೆಂಗಳೂರು. M–9449843010
07	ರಾಧಾಕೃಷ್ಣರಾವ್ ಮದನ್‌ಕರ್ ಕೆ.ಎ.ಎಸ್. (ಆಯ್ಕೆ ಶ್ರೇಣಿ)	ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿ, ರಾಯಚೂರು ಜಿಲ್ಲೆ. M–9538095286
08	ಸುಬ್ಬಯ್ಯ ಪಿ. ಕೆ. ಕೆ.ಎ.ಎಸ್. (ಆಯ್ಕೆ ಶ್ರೇಣಿ)	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು. M–9449241999
09	ತೇಜಸ್ವಿನಿ ಸದಾನಂದ ನಾಯಕ್ ಕೆ.ಎ.ಎಸ್. (ಆಯ್ಕೆ ಶ್ರೇಣಿ)	ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಧಾರವಾಡ. M–
10	ಸದಿಯಾ ಸುಲ್ತಾನ ಕೆ.ಎ.ಎಸ್. (ಆಯ್ಕೆ ಶ್ರೇಣಿ)	ನಿರ್ದೇಶಕರು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು. M–9480825471
11	ವೆಂಕಟೇಶ್ ಎಸ್. ಆರ್. ಕೆ.ಎ.ಎಸ್. (ಆಯ್ಕೆ ಶ್ರೇಣಿ)	ವಿಶೇಷ ಜಿಲ್ಲಾಧಿಕಾರಿ (ಭೂಸ್ವಾಧೀನ) ಕರ್ನಾಟಕ ರಾಜ್ಯ ಹೈವೇ ಇಂಪ್ರೂಮೆಂಟ್ ಪ್ರೊಜೆಕ್ಟ್, ಪಿ.ಡಬ್ಲ್ಯೂಡಿ ಕಛೇರಿ ಕಟ್ಟಡ, ಕೆ.ಆರ್. ಸರ್ಕಲ್, ಬೆಂಗಳೂರು. M–9845795991
12	ಡಾ॥ ಚೌಗಲಾ ಎ. ಎಸ್. ಕೆ.ಎ.ಎಸ್. (ಆಯ್ಕೆ ಶ್ರೇಣಿ)	ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿ, ಬೆಳಗಾಂ) ಜಿಲ್ಲೆ. M–9448340081
13	ಸಿದ್ದಪ್ಪ ಜಿ. ಕೆ.ಎ.ಎಸ್. (ಆಯ್ಕೆ ಶ್ರೇಣಿ)	ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ, ಜೆ.ಎಸ್.ವೈ.ಎಸ್. ಶಿವಮೊಗ್ಗ. M–9449871074
14	ಗಂಗಾಧರಯ್ಯ ಎಸ್. ಎನ್. ಕೆ.ಎ.ಎಸ್. (ಆಯ್ಕೆ ಶ್ರೇಣಿ)	ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಬೆಂಗಳೂರು ಉತ್ತರ (ಹೆಚ್ಚುವರಿ) ತಾಲ್ಲೂಕು, ಬೆಂಗಳೂರು ನಗರ ಜಿಲ್ಲಾಧಿಕಾರಿಯವರ ಕಛೇರಿ, ಬೆಂಗಳೂರು. M–9686462965

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ	ಕಾರ್ಯನಿರ್ವಹಿಸುತ್ತಿರುವ ಹುದ್ದೆ
15	**ಶಶಿಧರ್ ಎಂ.** ಕೆ.ಎ.ಎಸ್. (ಹಿರಿಯ ಶ್ರೇಣಿ)	ಸರ್ಕಾರದ ಉಪಕಾರ್ಯದರ್ಶಿ, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆ, ಪಿ.ಹೆಚ್.ಐ. ಕಟ್ಟಡ, ಶೇಷಾದ್ರಿ ರೋಡ್, ಬೆಂಗಳೂರು. M–9449843009
16	**ಅನಿಲ್ ಕುಮಾರ್ ಜಿ. ಸಿ.** ಕೆ.ಎ.ಎಸ್. (ಹಿರಿಯ ಶ್ರೇಣಿ)	ವಿಶೇಷ ಜಿಲ್ಲಾಧಿಕಾರಿ, ಆರ್ ಅಂಡ್ ಆರ್. ಮತ್ತು ಎಲ್.ಎ.ಕ್ಯೂ. ಯು.ಕೆ.ಪಿ. ನವನಗರ, ಬಾಗಲಕೋಟೆ. M–9008012840
17	**ದೊಡ್ಡಪ್ಪ ಎ.** ಕೆ.ಎ.ಎಸ್. (ಹಿರಿಯ ಶ್ರೇಣಿ)	ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿ, ತುಮಕೂರು ಜಿಲ್ಲೆ. M–9448976154
18	**ಗೋಪಾಲಕೃಷ್ಣ ಹೆಚ್. ಎನ್.** ಕೆ.ಎ.ಎಸ್. (ಹಿರಿಯ ಶ್ರೇಣಿ)	ಅಪರ ಜಿಲ್ಲಾಧಿಕಾರಿ ಮತ್ತು ಅಪರ ಜಿಲಾ ದಂಡಾಧಿಕಾರಿ, ಹಾಸನ ಜಿಲ್ಲೆ. M–9448401460
19	**ಶ್ರೀರಂಗಯ್ಯ ಎಂ. ಕೆ.** ಕೆ.ಎ.ಎಸ್. (ಹಿರಿಯ ಶ್ರೇಣಿ)	ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿ, ಶಿವಮೊಗ್ಗ ಜಿಲ್ಲೆ. M–9448220262
20	**ಡಾ॥ ಸತೀಶ್ ಬಿ. ಸಿ.** ಕೆ.ಎ.ಎಸ್. (ಹಿರಿಯ ಶ್ರೇಣಿ)	ಅಪರ ಆಯುಕ್ತರು (ಆಡಳಿತ ಮತ್ತು ಅಭಿವೃದ್ಧಿ), ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು. M–9448773875
21	**ಕವಿತಾ ಎಸ್. ಮನ್ನೀಕೇರಿ** ಕೆ.ಎ.ಎಸ್. (ಹಿರಿಯ ಶ್ರೇಣಿ)	ಜಂಟಿ ನಿರ್ದೇಶಕರು (ಆಡಳಿತ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು. M–9449223425
22	**ಡಾ॥ ಅರುಂಧತಿ ಚಂದ್ರಶೇಖರ್** ಕೆ.ಎ.ಎಸ್. (ಹಿರಿಯ ಶ್ರೇಣಿ)	ಮುಖ್ಯ ಆಡಳಿತಾಧಿಕಾರಿ, ಎನ್.ಆರ್.ಹೆಚ್.ಎಂ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. M–9448849503
23	**ಗಂಗೂಬಾಯಿ ರಮೇಶ್ ಮಾನಕರ** ಕೆ.ಎ.ಎಸ್. (ಹಿರಿಯ ಶ್ರೇಣಿ)	ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಬಿಜಾಪುರ ಜಿಲ್ಲೆ. M–9449032319
24	**ಆಕ್ರಂಪಾಷ** ಕೆ.ಎ.ಎಸ್. (ಹಿರಿಯ ಶ್ರೇಣಿ)	ಜಂಟಿ ನಿರ್ದೇಶಕರು (ಆಡಳಿತ), ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು. M–9448091500/9448002232
25	**ಡಾ॥ ಎನ್. ಶಿವಶಂಕರ್** ಕೆ.ಎ.ಎಸ್. (ಹಿರಿಯ ಶ್ರೇಣಿ)	ಜಂಟಿ ನಿರ್ದೇಶಕರು (ಯೋಜನೆ) ನಗರಾಭಿವೃದ್ಧಿ ಮತ್ತು ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು. M–9448613956
26	**ಪಿ. ಎನ್. ರವೀಂದ್ರ** ಕೆ.ಎ.ಎಸ್. (ಹಿರಿಯ ಶ್ರೇಣಿ)	ಆಯುಕ್ತರು, ಬೆಳಗಾಂ ಅಭಿವೃದ್ಧಿ ಪ್ರಾಧಿಕಾರ, M–9449745999

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ	ಕಾರ್ಯನಿರ್ವಹಿಸುತ್ತಿರುವ ಹುದ್ದೆ
27	ಕರೀಗೌಡ ಕೆ.ಎ.ಎಸ್. (ಹಿರಿಯ ಶ್ರೇಣಿ)	ಉಪನಿರ್ದೇಶಕರು (ಯೋಜನೆ) ಗಡಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು. M-9480125900/9941568502
28	ಮೀನಾ ನಾಗರಾಜ್ ಸಿ. ಎನ್. ಕೆ.ಎ.ಎಸ್. (ಹಿರಿಯ ಶ್ರೇಣಿ)	ಹೆಚ್ಚುವರಿ ನಿರ್ದೇಶಕರು, ಎಂ. ಯು.ಆರ್.ಎಸ್. ಆರ್.ಡಿ.ಪಿ.ಆರ್. ಇಲಾಖೆ, ಬೆಂಗಳೂರು. M-9980095995
29	ಶಿವಾನಂದ ಕಾಪಸಿ, ಕೆ.ಎ.ಎಸ್. (ಹಿರಿಯ ಶ್ರೇಣಿ)	ಹಿರಿಯ ಉಪವಿಭಾಗಾಧಿಕಾರಿ, ಧಾರವಾಡ ಉಪವಿಭಾಗ, ಧಾರವಾಡ. M-9449839844

ತರಬೇತಿಗೆ ನಿಯೋಜಿಸಲಾದ ಮೇಲ್ಕಂಡ ಅಧಿಕಾರಿಗಳು ನಿಯಮಾನುಸಾರ TA/DA ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಡಗಾವೆ ಬಸವರಾಜ,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 900 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2).

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಕಂಇ 227 ಎಎಸ್‌ಡಿ 2012, ಬೆಂಗಳೂರು, ದಿನಾಂಕ: 07ನೇ ಜೂನ್, 2012.

ಶಿರಸ್ತೇದಾರ್/ಉಪ ತಹಶೀಲ್ದಾರ್ ವೃಂದದಿಂದ ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 301 ಎಎಸ್‌ಡಿ 2011, ದಿನಾಂಕ : 30-01-2012ರಲ್ಲಿ ಪದೋನ್ನತಿ ನೀಡಿ ಆದೇಶಿಸಲಾಗಿದೆ. ಸದರಿ ಅಧಿಸೂಚನೆಯ ಈ ಕೆಳಕಂಡ ಅಧಿಕಾರಿ ಹೆಸರನ್ನು ಅವರ ಹೆಸರಿನ ಮುಂದೆ ಸೂಚಿಸಿರುವಂತೆ ಸರಿಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಕ್ರಮ ಸಂಖ್ಯೆ	ಪದೋನ್ನತಿ ಅಧಿಸೂಚನೆಯಲ್ಲಿನ ಕ್ರಮ ಸಂಖ್ಯೆ	ತಹಶೀಲ್ದಾರರ ಹೆಸರು (ಶ್ರೀ/ಶ್ರೀಮತಿ)	ಸರಿಪಡಿಸಿಕೊಳ್ಳಬೇಕಾಗಿರುವ ಅಧಿಕಾರಿಯ ಹೆಸರು
1	134	ಜಿ.ಎಸ್. ಮಹಾಜನ್ ತಹಶೀಲ್ದಾರ್ ಗ್ರೇಡ್-2	ಗುರುಪಾದಪ್ಪಾ ಸಿದ್ದಪ್ಪಾ ಮಹಾಜನ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ವಿ. ರಾಮಲಿಂಗಯ್ಯ,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 901 ಕಂದಾಯ ಇಲಾಖೆ (ಸೇವೆಗಳು-3).

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 256 ಎಸ್‌ಎಸ್‌ಟಿ 2012, ಬೆಂಗಳೂರು, ದಿನಾಂಕ: 08ನೇ ಜೂನ್, 2012.

ಗುಲಬರ್ಗಾ ಜಿಲ್ಲೆಯಲ್ಲಿ ಈಶಾನ್ಯ ಪದವೀಧರರ ಮತ ಕ್ಷೇತ್ರದ ಚುವಾವಣೆಗೆ ದಿನಾಂಕ : 10-06-2012ರಂದು ಮತದಾನ ಮತ್ತು ದಿನಾಂಕ : 13-06-2012ರಂದು ಮತ ಎಣಿಕೆ ನಡೆಯಲಿರುವ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ 1973 (ಕೇಂದ್ರ ಕಾಯಿದೆ ಸಂಖ್ಯೆ: 2-1974)ರ ಕಲಂ 21ರಲ್ಲಿನ

ಅಧಿಕಾರವನ್ನು ಚಲಾಯಿಸಿ ಗುಲ್ಬರ್ಗಾ ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ದಿನಾಂಕ : 10-06-2012 ಮತ್ತು 13-06-2012 ರಂದು ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳಗಳಿಗೆ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನಾಗಿ ನೇಮಿಸಿದೆ.

ಕ್ರಮ ಸಂಖ್ಯೆ	ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳ ಹೆಸರು ಮತ್ತು ಪದನಾಮ	ಕ್ಷೇತ್ರ ವ್ಯಾಪ್ತಿ
(1)	(2)	(3)
1	ಡಾ॥ ಸಿ. ನಾಗಯ್ಯಾ, ಆಯುಕ್ತರು, ಮಹಾನಗರ ಪಾಲಿಕೆ, ಗುಲಬರ್ಗಾ, (ಮೊಬೈಲ್ ನಂ. 8095245990)	ಚೌಕ್ ಪೊಲೀಸ್ ಠಾಣೆ ಗುಲಬರ್ಗಾ ಮತ್ತು ಬ್ರಹ್ಮಪುರ ಪೊಲೀಸ್ ಠಾಣೆ ಗುಲಬರ್ಗಾ
2	ಶ್ರೀ ಎಸ್. ಬಿ. ಕಟ್ಟೀಮನಿ, ಆಯುಕ್ತರು ಗುಲಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ, ಗುಲಬರ್ಗಾ (ಮೊಬೈಲ್ ನಂ. 9448021425)	ರೋಜಾ ಪೊಲೀಸ್ ಠಾಣೆ ಗುಲಬರ್ಗಾ ಮತ್ತು ನ್ಯೂ ರಾಘವೇಂದ್ರ ಕಾಲೋನಿ ಪೊಲೀಸ್ ಠಾಣೆ ಗುಲಬರ್ಗಾ
3	ಶ್ರೀ ವಸಂತ ಕುಲಕರ್ಣಿ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಗುಲಬರ್ಗಾ (ಮೊಬೈಲ್ ನಂ. 9448451188)	ಎಂ.ಬಿ. ನಗರ ಪೊಲೀಸ್ ಠಾಣೆ ಗುಲಬರ್ಗಾ ಮತ್ತು ಗುಲಬರ್ಗಾ ವಿಶ್ವವಿದ್ಯಾನಿಲಯ ಪೊಲೀಸ್ ಠಾಣೆ ಗುಲಬರ್ಗಾ
4	ಶ್ರೀ ರವಿ ಕಿರಣ ವಂಟಿ, ವಿಶೇಷ ಭೂಸ್ವಾಧೀನಾಧಿಕಾರಿಗಳು (ಸಣ್ಣ ನೀರಾವರಿ), ಗುಲಬರ್ಗಾ (ಮೊಬೈಲ್ ನಂ. 8861013555)	ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಗುಲಬರ್ಗಾ ಮತ್ತು ಅಶೋಕ ನಗರ ಪೊಲೀಸ್ ಠಾಣೆ ಗುಲಬರ್ಗಾ
5	ಶ್ರೀ ಎಸ್. ಎಂ. ಕೆಂಚಣ್ಣಾವರ, ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ., ಜಿಲ್ಲಾ ಪಂಚಾಯತ್, ಗುಲಬರ್ಗಾ (ಮೊಬೈಲ್ ನಂ. 9480866002)	ಗುಲಬರ್ಗಾ ಗ್ರಾಮಾಂತರ ಪೊಲೀಸ್ ಠಾಣೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಕಾಶ ವೈ. ಕೆ.

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ).

ಪಿ.ಆರ್. 903

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 224 ಎಎಸ್‌ಡಿ 2012, ಬೆಂಗಳೂರು, ದಿನಾಂಕ: 06ನೇ ಜೂನ್, 2012.

ಶ್ರೀ ಅನಂತ ಕೃಷ್ಣರಾವ್, ತಹಶೀಲ್ದಾರ್ ಗ್ರೇಡ್-2, ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ, ಉಡುಪಿ ಅವರು ದಿನಾಂಕ : 28-02-2012 ರಿಂದ 06-03-2012ವರೆಗೆ ಸ್ಥಳ ನೇಮಕಾತಿ ನಿರೀಕ್ಷಣೆಯಲ್ಲಿದ್ದ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 8(15)(ಎಫ್) ರನ್ವಯ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ವಿ. ರಾಮಲಿಂಗಯ್ಯ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 902

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 85 ಪೊಪೆಸೆ 2012, ಬೆಂಗಳೂರು, ದಿನಾಂಕ: 08ನೇ ಜೂನ್, 2012.

ಸರ್ಕಾರಿ ಲೋಕೋಪಯೋಗಿ ಇಲಾಖೆ ಜ್ಞಾಪನಾ ಪತ್ರ ಸಂಖ್ಯೆ: ಸಿಬಿಎಸ್:36:ಸಇಂ: ಟಿಆರ್‌ಎಫ್: ಇಎಸ್‌ಸಿ:2012–13 ದಿನಾಂಕ: 25–05–2012ರಲ್ಲಿ ಶ್ರೀ ಎಂ.ಎನ್. ವೆಂಕಟೇಶಗೌಡ, ಸಹಾಯಕ ಇಂಜಿನೀಯರ್, ಹಾಗೂ ಶ್ರೀಮತಿ ಕವಿತಾ ಹೆಚ್.ಎಸ್., ಸಹಾಯಕ ಇಂಜಿನೀಯರ್ ಮತ್ತು ಲೋಕೋಪಯೋಗಿ ಇಲಾಖೆ, ಅಧಿಸೂಚನೆ ಸಂಖ್ಯೆ : ಲೋಇ 269 ಸೇಸಎ 2012 ದಿನಾಂಕ: 25–05–2012ರಲ್ಲಿ ಶ್ರೀ ಪಿ. ಶ್ಯಾಮ ಸುಂದರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಇವರುಗಳನ್ನು ಮರು ಸ್ಥಳನಿಯುಕ್ತಿಗೊಳಿಸಲು ಒಳಾಡಳಿತ ಇಲಾಖೆಯ ವಶಕ್ಕೆ ನೀಡಿದ್ದು, ಸದರಿಯವರುಗಳನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್ ಹಾಗೂ ಸಹಾಹಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳಿಗೆ ನಿಯೋಜನೆ ಮೇರೆಗೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಕೆ. ನಿಂಗಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಬಿ).

ಪಿ.ಆರ್. 904

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 99 ಮಾಇಸೇ (3) 2012, ಬೆಂಗಳೂರು, ದಿನಾಂಕ: 30ನೇ ಮೇ, 2012.

ಕೃಷಿ ಮಾರಾಟ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದದ ಈ ಕೆಳಕಂಡ ಅಧಿಕಾರಿಗಳನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಜಾಗಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ ಶ್ರೀ/ಶ್ರೀಮತಿ	ವರ್ಗಾಯಿಸಿ ಸ್ಥಳ ನಿಯುಕ್ತಿಗೊಳಿಸಲಾಗಿರುವ ಸ್ಥಳ
01	ಎಂ. ಡಿ. ಗಂಗಾಧರ ತಿಲಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಬಿಜಾಪುರ.	ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ. 1, 1ನೇ ಉಪ ವಿಭಾಗ, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಬೆಂಗಳೂರು. (ಶ್ರೀ ವಿ. ನಾಗರಾಜ್ ಇವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ)
02	ವಿ. ನಾಗರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ. 1, 1ನೇ ಉಪ ವಿಭಾಗ, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಬೆಂಗಳೂರು.	ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಬಿಜಾಪುರ (ಶ್ರೀ ಎಂ. ಡಿ. ಗಂಗಾಧರ ತಿಲಕ್ ಇವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ)

ವರ್ಗಾವಣೆ ಮಾಡಲಾಗಿರುವ ಸ್ಥಳಗಳಿಗೆ ಮೇಲಿನ ಅಧಿಕಾರಿಗಳು ಕೂಡಲೇ ಕರ್ತವ್ಯಕ್ಕೆ ಹಾಜರಾಗತಕ್ಕದ್ದು ಮತ್ತು ಸಂಬಂಧಪಟ್ಟವರಿಗೆ ಸಿ.ಟಿ.ಸಿ. ಯನ್ನು ಕಳುಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಕೆ. ವಾಸುದೇವ ಮೂರ್ತಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 905

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಾರಿಇ 46 ಸಾಇಸೇ 2012, ಬೆಂಗಳೂರು, ದಿನಾಂಕ: 12ನೇ ಜೂನ್, 2012.

ಸಾರಿಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಾರುತಿ ಎಂ. ಸಾಂಬ್ರಾಣಿ, ಉಪ ಸಾರಿಗೆ ಆಯುಕ್ತರು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರಿಗೆ ಈ ಕೂಡಲೇ ಜಾರಿಗೆ ಬರುವಂತೆ ರೂ. 20,025-28,275ರ (ಪರಿಷ್ಕೃತ ವೇತನ ಶ್ರೇಣಿ ರೂ. 40,050-56,550) ವೇತನ ಶ್ರೇಣಿಯಲ್ಲಿ ಜಂಟಿ ಸಾರಿಗೆ ಆಯುಕ್ತರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ, ಮುಂದಿನ ಆದೇಶದವರೆಗೆ ಶ್ರೀ ವಿಜಯವಿಕ್ರಂ, ಜಂಟಿ ಸಾರಿಗೆ ಆಯುಕ್ತರು (ಪವರ್ತನ-ದಕ್ಷಿಣ) ಇವರ ವಯೋನಿವೃತ್ತಿಯಿಂದ ತೆರವಾದ ಜಾಗಕ್ಕೆ ನಿಯುಕ್ತಿಗೊಳಿಸಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಪಿ.ಆರ್. 906

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಾರಿಇ 21 ಸಾಸಂಸೇ 2012, ಬೆಂಗಳೂರು, ದಿನಾಂಕ: 07ನೇ ಜೂನ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಾರಿಇ 67 ಸಾಸಂಸೇ 2010, ದಿನಾಂಕ : 26-04-2010ರಲ್ಲಿ ಶ್ರೀ ಎಲ್. ವಿ. ನಾಗರಾಜನ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡಳಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿತ್ತು.

ಸರ್ಕಾರದ ಅಧಿಸೂಚನೆ ಸಂಖ್ಯೆ : DPAR 254 SAS 2012, ದಿನಾಂಕ : 31-05-2012ರಲ್ಲಿ ಶ್ರೀ ಎಲ್. ವಿ. ನಾಗರಾಜನ್, ಭಾ.ಆ.ಸೇ. ಇವರಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಿ ಉನ್ನತೀಕರಿಸಿದ ಹುದ್ದೆಯಲ್ಲಿ ಆರ್ಥಿಕ ಇಲಾಖೆಗೆ ನೇಮಕ ಮಾಡಲಾಗಿದೆ.

ಆದ್ದರಿಂದ, ಶ್ರೀ ಎಲ್. ವಿ. ನಾಗರಾಜನ್, ಭಾ.ಆ.ಸೇ. ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರನ್ನು ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪಕಲಂ (2)ರಲ್ಲಿ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡಳಿ ನಿರ್ದೇಶಕರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಪಿ.ಆರ್. 907

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಾರಿಇ 108 ಸಾಇಸೇ 2012, ಬೆಂಗಳೂರು, ದಿನಾಂಕ: 13ನೇ ಜೂನ್, 2012.

ಸರ್ಕಾರದ ಆದೇಶ ಸಂಖ್ಯೆ : ಎಫ್ ಡಿ 31 ಎಸ್ ಆರ್ ಪಿ 2007(X) ದಿನಾಂಕ : 14-08-2008 ರನ್ವಯ ಸಾರಿಗೆ ಇಲಾಖೆಯಲ್ಲಿ ಜಂಟಿ ಸಾರಿಗೆ ಆಯುಕ್ತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಆರ್. ಮುನಿವೀರೇಗೌಡ ಇವರಿಗೆ ದಿನಾಂಕ : 20-04-2012 ರಿಂದ ಜಾರಿಗೆ ಬರುವಂತೆ ರೂ. 22,125 - 30,300 (ಪರಿಷ್ಕೃತ ವೇತನ ಶ್ರೇಣಿ ರೂ. 44,250-60,600) ಆಯ್ಕೆ ವೇತನ ಶ್ರೇಣಿಯನ್ನು ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಪಿ.ಆರ್. 908

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 142 ಎಲ್‌ಎಜಿ 2009, ಬೆಂಗಳೂರು, ದಿನಾಂಕ: 04ನೇ ಜೂನ್, 2012.

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 5(2)(6)ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಧಾರವಾಡ ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರಾದ ಶ್ರೀಮತಿ ದಾಕ್ಷಾಯಣಿ ಚಿನ್ನಯ್ಯ ನಡೂರಮಠ ಇವರನ್ನು ಹುದ್ದೆಯ ಕರ್ತವ್ಯಗಳಿಂದ ವಿಮುಕ್ತಗೊಳಿಸಿ ಸದರಿ ಹುದ್ದೆಗೆ ನಿಯಮ 26(2)ರನ್ವಯ ಹುದ್ದೆಯ ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವರೆಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಶ್ರೀ ರಾಮಚಂದ್ರ ಗೋವಿಂದಪ್ಪ ಅವಲಕ್ಕಿ ಉರ್ಫ್ ನಾಯ್ಡು ವಕೀಲರನ್ನು ನೇಮಿಸಿದೆ.

ಶ್ರೀಮತಿ ದಾಕ್ಷಾಯಣಿ ಚಿನ್ನಯ್ಯ ನಡೂರಮಠ, ಜಿಲ್ಲಾ ಸರ್ಕಾರಿ ವಕೀಲರು, ಧಾರವಾಡ ಇವರಿಗೆ ನಿಯಮ 5(6)ರನ್ವಯ ಒಂದು ತಿಂಗಳ ರಿಟೈನರ್ ಫೀ ಯನ್ನು ಪಾವತಿಸಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಅ. ರಾ. ಚಿತ್ತರಗಿ,

ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ-1)(ಪ್ರ),

ಪಿ.ಆರ್. 909 ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 113 ಎಲ್‌ಎಜಿ 2012, ಬೆಂಗಳೂರು, ದಿನಾಂಕ: 08ನೇ ಜೂನ್, 2012.

ಶ್ರೀ ಎಸ್. ಜಿ. ಜಮಖಂಡಿ, ಜಿಲ್ಲಾ ಸರ್ಕಾರಿ ವಕೀಲರು, ಬೆಳಗಾವಿ ಜಿಲ್ಲೆ, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 19-05-2012 ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೆಳಗಾವಿ ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಅ. ರಾ. ಚಿತ್ತರಗಿ,

ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ-1)(ಪ್ರ),

ಪಿ.ಆರ್. 910 ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 138 ರಾಲೆಪ 2012, ಬೆಂಗಳೂರು, ದಿನಾಂಕ: 08ನೇ ಜೂನ್, 2012.

ಶ್ರೀ ಜಿ. ಎಸ್. ಮರುಳಸಿದ್ದಪ್ಪ, ಲೆಕ್ಕಪರಿಶೋಧನಾಧಿಕಾರಿ, ರಾಜ್ಯ ಲೆಕ್ಕಪತ್ರ ಇಲಾಖೆ ಇವರಿಗೆ ಅಧಿಸೂಚನೆ ಸಂಖ್ಯೆ : ಆಇ 296 ರಾಲೆಪ 2010 ದಿನಾಂಕ : 05-03-2011ರಲ್ಲಿ ಸಹಾಯಕ ನಿಯಂತ್ರಕರ ಹುದ್ದೆಗೆ ಮುಂಬಡ್ತಿ ನೀಡಿ ಸಹಾಯಕ ನಿಯಂತ್ರಕರು (ಹಣಕಾಸು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಹುದ್ದೆಗೆ ನೇಮಿಸಲಾಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 160ರನ್ವಯ

